Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE
ಸಂಪುಟ 16 | ಸಂಚಿಕೆ 30 | ಜುಲೈ 18–24, 2022 | ಪುಟ 16 | ರೂ.10/-
Volume: 16 Issue: 30 JULY 18-24, 2022 Pages: 16 Price: 10/-
https://janashakthi.wordpress.com e-mail : js_weekly@yahoo.com



ತಗ್ಗಿದ ಮಳೆ–ತಪ್ಪದ ಆತಂಕ



ಈದ್ಗಾ ಮೈದಾನ: ಕೋಮು ದ್ವೇಷದ ಅಗ್ನಿ ಕುಂಡವಾಗಬೇಕೆ?



ದ್ವೀಪರಾಷ್ಟ್ರದಲ್ಲಿ ನಿಲ್ಲದ ಜನ ಸಂಘರ್ಷ

ಸರ್ವಾಧಿಕಾರಿ ಗೊಟಬೊಯಿ ಕುಟುಂಬ ಪರಾರಿ



ಅರಣ್ಯ ಸಂರಕ್ಷಣಾ ಕಾಯ್ದೆಯನ್ನು ಕಾರ್ಪೊರೇಟೀಕರಣ ಮಾಡುವ ಹುನ್ನಾರ

ಸೌಹಾರ್ದ–ಸಮೃದ್ಧ–ಜನತಾ ಕರ್ನಾಟಕ ನಿರ್ಮಾಣಕ್ಕಾಗಿ ರಾಜ್ಯ ಸಮಾವೇಶ



"ಸಾಂವಿಧಾನಿಕ ಅಧಿಕಾರಗಳ ವಿಂಗಡಣೆ ಕಟ್ಟುನಿಟ್ಟಾಗಿ ಪಾಲಿಸಿ"

ಪ್ರಧಾನಿ ಮತ್ತು ಕೇಂದ್ರ ಸರಕಾರಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ

ನೂತನ ಸಂಸತ್ ಭವನದ ಮೇಲೆ ಪ್ರಧಾನ ಮಂತ್ರಿಗಳು ರಾಷ್ಟ್ರೀಯ ಲಾಂಛನವನ್ನು ಅನಾವರಣಗೊಳಿಸಿದ್ದಾರೆ. ಇದು ಭಾರತೀಯ ಸಂವಿಧಾನದ ಒಂದು ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ. ಸಂವಿಧಾನವು ನಮ್ಮ ಪ್ರಜಾಪ್ರಭುತ್ವದ ಮೂರು ವಿಭಾಗಗಳನ್ನು – ಕಾರ್ಯಾಂಗ (ಸರ್ಕಾರ), ಶಾಸಕಾಂಗ (ಸಂಸತ್ತು ಮತ್ತು ರಾಜ್ಯ ವಿಧಾನ ಸಭೆಗಳು) ಮತ್ತು ನ್ಯಾಯಾಂಗ ಎಂದು ನಿಸ್ಸಂದಿಗ್ಧವಾಗಿ ವಿಂಗಡಿಸುತ್ತದೆ. ರಾಷ್ಟ್ರಪತಿಗಳು ಸಂಸತ್ತು ಸಭೆ ಸೇರುವಂತೆ ಆದೇಶಿಸುತ್ತಾರೆ. ಪ್ರಧಾನ ಮಂತ್ರಿಗಳು ಕಾರ್ಯಾಂಗದ ಮುಖ್ಯಸ್ಥರಾಗಿರುತ್ತಾರೆ. ಶಾಸಕಾಂಗವು ತನ್ನ ಸ್ವತಂತ್ರ ಪಾತ್ರವನ್ನು ನಿರ್ವಹಿಸುತ್ತದೆ, ಇದರಲ್ಲಿ ಕಾಯ್ದೆಗಳ ಶಾಸನ, ಕಾರ್ಯಾಂಗವನ್ನು ಹೊಣೆಗಾರವಾಗಿ ಮತ್ತು ಉತ್ತರದಾಯಿಯಾಗಿ ಇರಿಸುವುದು ಸೇರಿದೆ. ಮೂರು ವಿಭಾಗಗಳ ನಡುವಿನ ಈ ಸಾಂವಿಧಾನಿಕ ಅಧಿಕಾರಗಳ ವಿಂಗಡಣೆಯನ್ನು ಕಾರ್ಯಾಂಗದ ಮುಖ್ಯಸ್ಥರು ಬುಡಮೇಲು ಮಾಡುತ್ತಿದ್ದಾರೆ ಎಂದು ಪೊಲಿಟ್‌ಬ್ಯುರೊ ಟೀಕಿಸಿದೆ.

ಇದಲ್ಲದೆ, ಈ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳು ಪೂಜೆ ಸಲ್ಲಿಸಿದರು. ಭಾರತದ ಸಂವಿಧಾನವು ಎಲ್ಲಾ ಭಾರತೀಯರಿಗೆ ತಮ್ಮ ನಂಬಿಕೆಯನ್ನು ಆಚರಿಸಲು ಮತ್ತು ಪ್ರತಿಪಾದಿಸಲು ಹಕ್ಕು ಮತ್ತು ರಕ್ಷಣೆಯನ್ನು ನೀಡುತ್ತದೆ. ಇದು ಕಸಿದುಕೊಳ್ಳಲಾಗದ ಹಕ್ಕು. ಅದೇ ಸಮಯದಲ್ಲಿ, ಪ್ರಭುತ್ವವು ಯಾವುದೇ ನಂಬಿಕೆ/ಧರ್ಮವನ್ನು ಪ್ರತಿಪಾದಿಸುವುದಿಲ್ಲ ಅಥವಾ ಆಚರಿಸುವುದಿಲ್ಲ ಎಂದು ಭಾರತದ ಸಂವಿಧಾನವು ಸ್ಪಷ್ಟವಾಗಿ ವಿಧಿಸುತ್ತದೆ.

ಪ್ರಧಾನಮಂತ್ರಿಗಳು ಮತ್ತು ಕೇಂದ್ರ ಸರ್ಕಾರವು ಭಾರತದ ಸಂವಿಧಾನವನ್ನು ರಕ್ಷಿಸುವೆವು ಮತ್ತು ಎತ್ತಿಹಿಡಿಯುವೆವು ಎಂದು ಅಧಿಕಾರ ಸ್ವೀಕರಿಸುವಾಗ ತಾವು ಮಾಡಿದ ವಿಧ್ಯುಕ್ತ ಪ್ರಮಾಣವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಕರೆ ನೀಡಿದೆ.

ಸಂಸತ್ತಿನ ಮುಂದೆ ಹೈನು ರೈತರ ಧರಣಿ–27 ಜುಲೈ

ದೇಶಾದ್ಯಂತ ಬೃಹತ್ ಪ್ರತಿಭಟನೆಗಳು; ಜುಲೈ 15–21: ಸಹಿ ಅಭಿಯಾನ

ಭಾರತದ ಹೈನು ರೈತರ ಒಕ್ಕೂಟ(ಡಿಎಫ್‌ಎಫ್‌ಐ) ಈ ಕೆಳಗಿನ ಪ್ರಮುಖ ಬೇಡಿಕೆಗಳೊಂದಿಗೆ ದೇಶಾದ್ಯಂತ ಅಭಿಯಾನವನ್ನು ಪ್ರಾರಂಭಿಸಲು ಡೈರಿ ರೈತರಿಗೆ ಕರೆ ನೀಡಿದೆ:

1. ಕೇಂದ್ರ ಸರ್ಕಾರವು ಡೈರಿ ಉತ್ಪನ್ನಗಳು, ಯಂತ್ರೋಪಕರಣಗಳು ಮತ್ತು ಹಾಲುಕರೆಯುವ ಯಂತ್ರಗಳ ಮೇಲೆ ಜಿಎಸ್‌ಟಿ ವಿಧಿಸುವುದನ್ನು ರದ್ದುಗೊಳಿಸಬೇಕು.
2. ಕೇಂದ್ರ ಸರಕಾರ ಸ್ವಾಮಿನಾಥನ್ ಆಯೋಗದ ಸಿ2+50% ಶಿಫಾರಸಿನ ಆಧಾರದ ಮೇಲೆ ಹಾಲಿಗೆ ನ್ಯಾಯಯುತ ಮತ್ತು ಫಲದಾಯಕ ಬೆಲೆಯನ್ನು (ಎಫ್‌ಆರ್‌ಪಿ) ಖಚಿತಪಡಿಸಬೇಕು.
3. ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲು, ಕೇರಳದ ಎಲ್‌ಡಿಎಫ್ ಸರಕಾರದ ಅಯ್ಯಂಕಳಿ ನಗರ ಉದ್ಯೋಗ ಖಾತ್ರಿ ಯೋಜನೆಯಲ್ಲಿರುವಂತೆ, ಕನಿಷ್ಠ ಎರಡು ಹಸುಗಳು/ಎಮ್ಮೆಗಳನ್ನು ಹೊಂದಿರುವ ಎಲ್ಲಾ ಹೈನು ರೈತರಿಗೆ ವಾರ್ಷಿಕವಾಗಿ 200 ದಿನಗಳ ವೇತನದ ಸಬ್ಸಿಡಿಯನ್ನು ಒದಗಿಸಲು ಮನರೇಗದಲ್ಲಿ ಒಂದು ವಿಶೇಷ ಅನುಚ್ಛೇದವನ್ನು ಸೇರಿಸಬೇಕು.
4. ಹಗೇವು ಮೇವು ಮತ್ತು ಹಸಿರು ಮೇವನ್ನು ಸಬ್ಸಿಡಿ ದರದಲ್ಲಿ ಪೂರೈಸುವ ಮೂಲಕ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲು ಕೇಂದ್ರ ಸರ್ಕಾರವು ಒಂದು ವಿಶೇಷ ಯೋಜನೆಯನ್ನು ಜಾರಿಗೊಳಿಸಬೇಕು.

ಈ ಅಭಿಯಾನವು ಜುಲೈ 27 ರಂದು ನವದೆಹಲಿಯಲ್ಲಿ ಸಂಸತ್ತಿನ ಮುಂದೆ ನಡೆಸಲು ಯೋಜಿಸಿರುವ ಬೃಹತ್ ಪ್ರದರ್ಶನದ ವರೆಗೆ ನಡೆಯುತ್ತದೆ, ಇದು ಕರಪತ್ರ ವಿತರಣೆ ಮತ್ತು ಸಹಿ ಅಭಿಯಾನಗಳನ್ನು ಒಳಗೊಂಡಿರುತ್ತದೆ. ಜುಲೈ 27 ರಂದೇ, ದೇಶಾದ್ಯಂತ ಗ್ರಾಮ/ತಾಲೂಕು ಮಟ್ಟದಲ್ಲಿ ಹಾಲಿನ ಬೂತ್/ಸಂಗ್ರಹ ಕೇಂದ್ರಗಳಲ್ಲಿ ಬೃಹತ್ ಪ್ರತಿಭಟನೆಗಳು ಕೂಡ ನಡೆಯುತ್ತವೆ.

ಆಗಸ್ಟ್ 8 ಕ್ವಿಟ್ ಇಂಡಿಯಾ ದಿನದಂದು, ಸಿಐಟಿಯು, ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘದ ಕರೆಗೆ ಸೌಹಾರ್ದ ವ್ಯಕ್ತಪಡಿಸುತ್ತ, ಅಂದಿನ ಮತಪ್ರದರ್ಶನಗಳಲ್ಲಿ ಕೈಜೋಡಿಸಲು ಕೂಡ ಡಿಎಫ್‌ಎಫ್‌ಐ ನಿರ್ಧರಿಸಿದೆ.

ಡೈರಿ ಸಹಕಾರಿಗಳು ಮತ್ತು ಸಣ್ಣ ವ್ಯಾಪಾರಿಗಳಿಗೆ, ವಿಶೇಷವಾಗಿ ಅಖಿಲ ಭಾರತ ವ್ಯಾಪಾರಿಗಳ ಮಹಾ ಒಕ್ಕೂಟ (ಸಿಎಐಟಿ) ಮತ್ತು ಇತರ ವ್ಯಾಪಾರಿಗಳ ಸಂಘಟನೆಗಳಿಗೆ ದೇಶಾದ್ಯಂತ ಈ ಅಭಿಯಾನದಲ್ಲಿ ಕೈಜೋಡಿಸಲು ಡಿಎಫ್‌ಎಫ್‌ಐ ಮನವಿ ಮಾಡಿದೆ. ಜಿಎಸ್‌ಟಿ ಹೇರಿಕೆಯ ಹೊರೆಯನ್ನು ಅವರು ನೇರವಾಗಿ ಹೊರಬೇಕಾಗುತ್ತದೆ, ಈ ಮೂಲಕ ಅವರ ಆರ್ಥಿಕ ಬಲವನ್ನು ನಿರ್ಬಂಧಿಸಲಾಗುತ್ತಿದೆ, ಇದರಿಂದಾಗಿ ದೊಡ್ಡ ಉದ್ಯಮಗಳು ಭಾರತದಲ್ಲಿ ಡೈರಿ ವ್ಯಾಪಾರದಲ್ಲಿ ಏಕಸ್ವಾಮ್ಯವನ್ನು ಹೊಂದಬಹುದು. ಈ ಜಿಎಸ್‌ಟಿಯನ್ನು ರದ್ದುಪಡಿಸುವಂತೆ ಒತ್ತಾಯಿಸಿ ಸಹಿ ಅಭಿಯಾನದಲ್ಲಿ ಭಾಗವಹಿಸಲು ಮತ್ತು ಕೇಂದ್ರ ಹಣಕಾಸು ಸಚಿವರಿಗೆ ಜ್ಞಾಪಕ ಪತ್ರಗಳನ್ನು ಕಳುಹಿಸಲು ಡೈರಿ ಸಹಕಾರಿ ಸಂಘಗಳು ಮತ್ತು ವ್ಯಾಪಾರಿಗಳನ್ನು ಡಿಎಫ್‌ಎಫ್‌ಐ ವಿನಂತಿಸಿದೆ.

ಕೇಂದ್ರ ಸರ್ಕಾರದ ದೊಡ್ಡ ಕಾರ್ಪೊರೇಟ್‌ಗಳತ್ತ ಒಲವು ತೋರುವ ನೀತಿಗಳನ್ನು ವಿರೋಧಿಸಲು ಹೈನುಗಾರರು, ಸಹಕಾರ ಸಂಘಗಳು ಮತ್ತು ವ್ಯಾಪಾರಿಗಳ ಒಗ್ಗಟ್ಟು ಇಂದಿನ ಅಗತ್ಯವಾಗಿದೆ ಎಂದು ಡಿಎಫ್‌ಎಫ್‌ಐ ಹೇಳಿದೆ.

ಕೇರಳದಲ್ಲಿ ಸಾರ್ವಜನಿಕ ಉದ್ದಿಮೆಗಳ ಗಳಿಕೆ ಗಮನಾರ್ಹ ಏರಿಕೆ–ಪಿ.ರಾಜೀವ್

ಕೇಂದ್ರದಲ್ಲಿ ಮೋದಿ ಶೈಲಿಯ ಸಾರ್ವಜನಿಕ ಉದ್ದಿಮೆಗಳ ಮಹಾ ಸೇಲ್ ನಡೆಯುತ್ತಿರುವಾಗ, ಕೇರಳದಲ್ಲಿ ಒಂದೇ ವರ್ಷದಲ್ಲಿ ಲಾಭದಲ್ಲಿರುವ ರಾಜ್ಯ ಸರಕಾರದ ಒಡೆತನದ ಉದ್ದಿಮೆಗಳ ಸಂಖ್ಯೆ 16 ರಿಂದ 26 ಕ್ಕೇರಿದೆ.

ರಾಜ್ಯ ಕೈಗಾರಿಕಾ ಇಲಾಖೆಯಡಿಯಲ್ಲಿ ಈ ವರ್ಷ 26 ಸಾರ್ವಜನಿಕ ವಲಯದ ಘಟಕಗಳು ಲಾಭ ಗಳಿಸಿವೆ ಎಂದು ಕೇರಳ ಕೈಗಾರಿಕಾ ಸಚಿವ ಪಿ ರಾಜೀವ್ ಹೇಳಿದ್ದಾರೆ. 2021ರಲ್ಲಿ ಎಲ್‌ಡಿಎಫ್ ಅಧಿಕಾರಕ್ಕೆ ಬಂದಾಗ ಕೈಗಾರಿಕೆ ಇಲಾಖೆ ಅಧೀನದಲ್ಲಿರುವ 41 ಉದ್ದಿಮೆಗಳಲ್ಲಿ 16 ಲಾಭದಲ್ಲಿದ್ದವು. ಅನೇಕ ಸಂಸ್ಥೆಗಳು ತಮ್ಮ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಈ ವರ್ಷ ಅತಿ ಹೆಚ್ಚು ನಿರ್ವಹಣಾ ಲಾಭ ಮತ್ತು ವಹಿವಾಟು ದಾಖಲಿಸಿವೆ ಎಂದು ಸಚಿವರು ಹೇಳಿದರು.

ಎಲ್ಲಾ ಸಾರ್ವಜನಿಕ ವಲಯದ ಸಂಸ್ಥೆಗಳನ್ನು ಲಾಭದಾಯಕವಾಗಿಸುವುದು ಕೇರಳದ ಎಲ್‌ಡಿಎಫ್‌ನ ಚುನಾವಣಾ ಪ್ರಣಾಳಿಕೆಯಲ್ಲಿ ಜನರ ಸಹಭಾಗಿತ್ವದೊಂದಿಗೆ ಸಿದ್ಧಪಡಿಸಿದ

ಪುಟ 15 ಕ್ಕೆ

ಸಾರಂಗಧರ್ ಪಾಸ್ವಾನ್ ನಿಧನ




ಬಿಹಾರದ ಹಿರಿಯ ರೈತ ಮುಖಂಡ ಸಾರಂಗಧರ್ ಪಾಸ್ವಾನ್ ಜುಲೈ 9 ರಂದು ತಮ್ಮ 92ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ಅವರು ಬಿಹಾರ ರಾಜ್ಯ ಕೃಷಿ ಕೂಲಿಕಾರರ ಸಂಘದ ಮೊದಲ ಕಾರ್ಯದರ್ಶಿಯಾಗಿದ್ದವರು ಮತ್ತು ಅಖಿಲ ಭಾರತ ಮಟ್ಟದಲ್ಲೂ, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಮಾಜಿ ಉಪಾಧ್ಯಕ್ಷರು ಮತ್ತು ಜಂಟಿ ಕಾರ್ಯದರ್ಶಿಯಾಗಿದ್ದವರು.

ಭೂ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅವರು ಗ್ರಾಮೀಣ ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರು, ಸಮಾಜದ ದಲಿತ–ಶೋಷಿತ ವಿಭಾಗಗಳಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ನಿಧನದ ವೇಳೆಗೂ ಅವರು ದಲಿತ ಶೋಷಣ ಮುಕ್ತಿ ಮಂಚ್(ಡಿಎಸ್‌ಎಂಎಂ)ನ ರಾಜ್ಯ ಅಧ್ಯಕ್ಷರಾಗಿದ್ದರು.

ಬಿಹಾರ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರೂ ಆಗಿದ್ದ ಕಾಂ. ಸಾರಂಗಧರ್ ಪಾಸ್ವಾನ್ ಅವರ ನಿಧನಕ್ಕೆ ಸಿಪಿಐ(ಎಂ) ತೀವ್ರ ಸಂತಾಪ ವ್ಯಕ್ತಪಡಿಸಿದೆ. ಅವರ ನಿಧನವು ಬಿಹಾರದ ಕಾರ್ಮಿಕ ವರ್ಗ ಮತ್ತು ರೈತ ಚಳವಳಿಗೆ ದೊಡ್ಡ ನಷ್ಟವಾಗಿದೆ ಎನ್ನುತ್ತ ಅವರ ಕುಟುಂಬದ ಸದಸ್ಯರಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

ತೈಲ ವಲಯದ ಹಿರಿಯ ಕಾರ್ಮಿಕ ಮುಖಂಡ ತಾರಾಪಾದ ರಾಯ್‌ಚೌಧುರಿ ನಿಧನ



ದೇಶದ ತೈಲ ಮತ್ತು ನೈಸರ್ಗಿಕ ಅನಿಲ ಕ್ಷೇತ್ರದ ಕಾರ್ಮಿಕ ಆಂದೋಲನದ ಹಿರಿಯ ಮುಖಂಡ ತಾರಾಪಾದ ರಾಯ್‌ಚೌಧುರಿ ಜುಲೈ 13 ರಂದು ನಿಧನರಾಗಿದ್ದಾರೆ. ಕಳೆದ 60 ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಈ ವಲಯದಲ್ಲಿ ಕಾರ್ಮಿಕ ಆಂದೋಲನ ಕಟ್ಟುವಲ್ಲಿ ಬಹುಮುಖ್ಯ ಪಾತ್ರವಹಿಸಿದ ಇವರಿಗೆ 88 ವರ್ಷವಾಗಿತ್ತು.

ಏಷ್ಯಾಟಿಕ್ ಪೆಟ್ರೋಲಿಯಂ ಕಂಪನಿಯಲ್ಲಿ ಕಾರ್ಮಿಕರಾಗಿ ವಿದೇಶಿ ಕಂಪನಿಯ ರಾಷ್ಟ್ರೀಕರಣಕ್ಕೆ ಆಗ್ರಹಿಸಿಸುವ ಹೋರಾಟದೊಂದಿಗೆ ಇವರ ಕಾರ್ಮಿಕ ಚಳುವಳಿಯ ಪಯಣ ಆರಂಭವಾಗಿತ್ತು. ಬರ್ಮಾಷೆಲ್ ಎಂದು ಹೆಸರು ಪಟೆದ ಆ ಕಂಪನಿ ರಾಷ್ಟ್ರೀಕರಣಗೊಂಡು ಬಿಪಿಸಿಎಲ್ ಆದ ಮೇಲೆ ಅವರ ಟ್ರೇಡ್ ಯೂನಿಯನ್ ಕೆಲಸ ಇನ್ನೂ ವಿಸ್ತಾರಗೊಂಡಿತು. ಅವರು ತೈಲ ಮತ್ತು ನೈಸರ್ಗಿಕ ಅನಿಲ ವಲಯದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಕಾರ್ಮಿಕ ಆಂದೋಲನವನ್ನು ಕಟ್ಟುವಲ್ಲಿ ಮಹತ್ವದ ಪಾತ್ರ ವಹಿಸಿದರು. ಮುಂದೆ ಕೇಂದ್ರ ದಲ್ಲಿ ಬಂದ ಸರಕಾರಗಳು ತೈಲ ಕಂಪನಿಗಳನ್ನು ಖಾಸಗೀಕರಿಸುವ ಪ್ರಯತ್ನಕ್ಕೆ ಕೈಹಾಕಿದಾಗ ಅದಕ್ಕೆ ಐಕ್ಯ ಪ್ರತಿರೋಧವನ್ನು ಕಟ್ಟಿ ಬೆಳೆಸುವಲ್ಲಿಯೂ ಪ್ರಮುಖ ಪಾತ್ರವಹಿಸಿದರು. ಈ ಪ್ರತಿರೋಧ ಹೋರಾಟಗಳ ಫಲವಾಗಿ 2005ರಲ್ಲಿ ಭಾರತದ ಪೆಟ್ರೋಲಿಯಂ ಮತ್ತು ಅನಿಲ ಕಾರ್ಮಿಕರ ಒಕ್ಕೂಟ(ಪಿಜಿಡಬ್ಲ್ಯುಎಫ್‌ಐ) ರಚನೆಗೊಂಡಾಗ ತಾರಾಪಾದ ರಾಯ್‌ಚೌಧುರಿಯವರು ಉಪಪ್ರಧಾನ ಕಾರ್ಯದರ್ಶಿಗಳಲ್ಲಿ ಒಬ್ಬರಾಗಿ ಆಯ್ಕೆಗೊಂಡರು. ತಮ್ಮ ಸರಳ ಜೀವನಶೈಲಿಯಿಂದ ಕಾರ್ಮಿಕರ ನಡುವೆ ಜನಪ್ರಿಯರಾಗಿದ್ದ ಅವರು ತಮ್ಮ ಇಡೀ ಜೀವನವನ್ನು ಕಾರ್ಮಿಕವರ್ಗದ ನಿಸ್ವಾರ್ಥ ಸೇವೆಗೆ ಮುಡಿಪಾಗಿಟ್ಟವರು ಎಂದು ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಸಿಐಟಿಯು ಹೇಳಿದೆ.

ಜುಲೈ 1–31: ಬೆಲೆ ಏರಿಕೆ ವಿರುದ್ಧ ಮಹಿಳಾ ಸಂಘಟನೆ ಬೃಹತ್ ಸಹಿ ಅಭಿಯಾನ





ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಬೆಲೆಯೆರಿಕೆ ವಿರುದ್ಧ ಮತ್ತು ಪಡಿತರ ವ್ಯವಸ್ಥೆಯನ್ನು ಬಲಪಡಿಸಲು ಆಗ್ರಹಿಸುವ ಸಹಿ ಸಂಗ್ರಹ ಚಳವಳಿಯನ್ನು ಜುಲೈ 1 ರಿಂದ 31ರವರೆಗೆ ದೇಶಾದ್ಯಂತ ನಡೆಸುತ್ತಿದೆ.



ಸಂಪಾದಕೀಯ

ತಗ್ಗಿದ ಮಳೆ–ತಪ್ಪದ ಆತಂಕ

ಕಳೆದ ಕೆಲವು ದಿನಗಳಲ್ಲಿ ಧಾರಾಕಾರವಾಗಿ ಸುರಿಯುತ್ತಿದ್ದ ಮಳೆ ನಿಧಾನವಾಗಿ ಕಡಿಮೆಯಾಗುತ್ತಿದೆ. ಸದ್ಯ ಮಳೆ ತಗ್ಗಿದ್ದರೂ ಪ್ರವಾಹದ ಭೀತಿ ದೂರವಾಗಿಲ್ಲ. ಜಲಾಶಯಗಳಿಗೆ ಒಳ ಹರಿವು ಹೆಚ್ಚುತ್ತಿರುವುದರಿಂದ ನದಿಗಳಿಗೆ ನೀರು ಹರಿಸುವ ಪ್ರಮಾಣವೂ ಹೆಚ್ಚಳವಾಗಿದೆ. ಇದರಿಂದ ನದಿ ಪಾತ್ರದ ಗ್ರಾಮಗಳು ಮುಳುಗಡೆಯ ಭೀತಿ ಎದುರಿಸುತ್ತಿವೆ. ಭಾರಿ ಮಳೆಯಿಂದಾಗಿ ಅಪಾರ ಜೀವಹಾನಿ, ಜಾನುವಾರುಗಳು ಮೃತಪಟ್ಟಿವೆ. ಲಕ್ಷಾಂತರ ಮನೆಗಳು ಹಾನಿಗೊಳಗಾಗಿವೆ. ಹಲವೆಡೆ ಮನೆಗಳ ಗೋಡೆಗಳು ಕುಸಿದು ಹಲವು ಮಂದಿ ಸಾವನಪ್ಪಿದ್ದು, ನೂರಾರು ಮಂದಿ ಗಾಯಗೊಂಡಿದ್ದಾರೆ. ಬೃಹತ್ ಮರಗಳು, ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ರಸ್ತೆಗಳು, ಸೇತುವೆಗಳು ಮುಳುಗಡೆಯಾಗಿ ಸಾರಿಗೆ ಸಂಪರ್ಕ ಅಸಾಧ್ಯವಾಗಿದೆ.

ವಿಶ್ವವಿಖ್ಯಾತ ಹಂಪಿಯ ಕೆಲ ಸ್ಮಾರಕಗಳು ನೀರಿನಲ್ಲಿ ಮುಳುಗಿವೆ. ಹಲವಾರು ದೇವಸ್ಥಾನಗಳು, ದರ್ಗಾಗಳು, ಚರ್ಚ್‌ಗಳು ಜಲಾವೃತವಾಗಿವೆ. ಭತ್ತದ ಗದ್ದೆಗಳು, ಬಾಳೆ ತೋಟಗಳು ನಾಶವಾಗಿವೆ. ಕರಾವಳಿಯ ಕಡಲ್ಕೊರೆತ ಮತ್ತು ಬೆಟ್ಟಗುಡ್ಡಗಳಲ್ಲಿ ಸಂಭವಿಸಿದ ಭೂಕುಸಿತದಿಂದ ಬಹಳಷ್ಟು ಹಾನಿಯಾಗಿದೆ. ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಗಳ ಹಲವೆಡೆ ರಸ್ತೆಗಳಲ್ಲಿ ಭೂಕುಸಿತವಾಗಿ ಸಂಚಾರ ಅಸ್ತವ್ಯಸ್ತಗೊಂಡಿದೆ. ಆಗುಂಬೆ, ಚಾರ್ಮುಡಿ, ಶಿರಾಡಿ ಮೊದಲಾದ ಘಟ್ಟಗಳಲ್ಲಿ ಮಣ್ಣು ಕುಸಿದು ವಾಹನ ಸಂಚಾರ ಸ್ಥಗಿತಗೊಂಡಿತ್ತು. ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ ಎರಡು ಬಾರಿ ಭೂಮಿ ಕಂಪಿಸಿದ್ದರಿಂದ ಜನ ಭಯ ಭೀತರಾಗಿದ್ದಾರೆ.

ಹಲವು ದಿನಗಳಿಂದ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಸುರಿಯುತ್ತಿರುವ ಮಳೆಯ ಪರಿಣಾಮವಾಗಿ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆಗಳಿವೆ.

ಸುಮಾರು 216 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಹಾನಿ ಸಂಭವಿಸಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಘೋಷಣೆ ಮಾಡಿರುವ ಪ್ರವಾಹ ಪರಿಹಾರ ಏನೇನು ಸಾಲದು. ಮನೆ ಮತ್ತು ಬೆಳೆ ಹಾನಿಗೆ ಹೆಚ್ಚಿನ ಪರಿಹಾರ ನೀಡಬೇಕೆಂದು ಜನಪರ ಸಂಘಟನೆಗಳು ಒತ್ತಾಯಿಸುತ್ತಿವೆ. ಮುಖ್ಯ ಮಂತ್ರಿಗಳು, ಮಂತ್ರಿಗಳು, ಶಾಸಕರು ಮತ್ತು ನಾಯಕರು ನೆಪ ಮಾತ್ರಕ್ಕೆ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ಕೊಡುತ್ತಿದ್ದಾರೆಯೇ ಹೊರತು ಸಂತ್ರಸ್ತರಿಗೆ ಸಹಾಯ ನೀಡುವ ಉದ್ದೇಶದಿಂದಲ್ಲ ಎಂದು ಜನ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಜೀವ ಹಾನಿ, ಆಸ್ತಿ ಪಾಸ್ತಿ ಹಾನಿಯ ಬಗ್ಗೆ ಇದುವರೆಗೂ ಪ್ರಾಥಮಿಕ ಸಮೀಕ್ಷಾ ವರದಿ ಸರ್ಕಾರದ ಕೈ ಸೇರಿಲ್ಲ. ಪ್ರವಾಹ ಪೀಡಿತರಿಗೆ ಪರಿಹಾರ ನೀಡಲು ಹಣದ ಕೊರತೆ ಇಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳುತ್ತಲೆ ಇದ್ದಾರೆ. ಆದರೆ ಪ್ರವಾಹ ಪೀಡಿತರಿಗೆ ಇದುವರೆಗೂ ಬಿಡಿಗಾಲು ನೀಡಿಲ್ಲ.

ಹೆಚ್ಚಿನ ಮಳೆಯಾಗಲಿದ್ದು ಪ್ರವಾಹ ಏರ್ಪಡುವ ಸಾಧ್ಯತೆಳಿವೆ ಎಂದು ಹವಾಮಾನ ಇಲಾಖೆ ಮೊದಲೇ ಎಚ್ಚರಿಸಿತ್ತು. ಹಾಗಿದ್ದರೂ ಸರ್ಕಾರ ಯಾವುದೇ ಮುಂಜಾಗೃತ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಕೂಲಿಕಾರರು, ರೈತರು ನಷ್ಟಕ್ಕೆ ಗುರಿಯಾದ ನಂತರ ಹೋಗಿ ಪ್ರಚಾರ ಗಿಟ್ಟಿಸಿಕೊಳ್ಳುತ್ತಾರೆ. 2019ರ ಪ್ರವಾಹದಲ್ಲಿ ಹಾನಿಗೀಡಾದವರಿಗೆ ಇದುವರೆಗೆ ಪುನರ್ವಸತಿ ಕಲ್ಪಿಸಿಲ್ಲ. ಹಿಂದೆ ಪ್ರವಾಹ ಬಂದಾಗ ಊರುಗಳ ಸ್ಥಳಾಂತರ ಮಾಡಲು ನಿರ್ಧರಿಸಲಾಗಿತ್ತು. ಆದರೆ ಸ್ಥಳಾಂತರ ಕಾರ್ಯ ನಡೆಯಲೇ ಇಲ್ಲ. ಮೇಲಿಂದ ಮೇಲೆ ಹಾನಿಗೀಡಾಗುತ್ತಿರುವವರಿಗೆ ಶಾಶ್ವತ ಪರಿಹಾರ ದೊರೆಯಬೇಕು. ಕುಸಿದು ಬೀಳುವ ಮನೆಗಳನ್ನು ಒದಗಿಸಬಾರದು. ಗಟ್ಟಿಮುಟ್ಟಾದ ಪಕ್ಕಾ ಮನೆಗಳನ್ನು ಕಟ್ಟಿಕೊಡಬೇಕು. ಒಂದು ಪಕ್ಕಾ ಮನೆ ಕಟ್ಟಲು 5 ಲಕ್ಷ ರೂ. ಕೇಂದ್ರ ಸರ್ಕಾರವೂ 5 ಲಕ್ಷ ರೂ. ಗಳನ್ನು ರಾಜ್ಯ ಸರ್ಕಾರ ನೀಡಬೇಕು. ಮನೆಗಳು ಕುಸಿದು ಜನ, ಜಾನುವಾರು ಜೀವ ಕಳೆದುಕೊಳ್ಳುವುದನ್ನು ಶಾಶ್ವತವಾಗಿ ತಡೆಯಬೇಕು.

ಸದ್ಯ ಅತಿವೃಷ್ಟಿಯಿಂದ ಉಂಟಾಗಿರುವ ಹಾನಿಯ ಸಮೀಕ್ಷೆ ನಡೆಸಿ ತಕ್ಷಣವೇ ಪರಿಹಾರ ಒದಗಿಸುವ ಭರವಸೆಯನ್ನು ಸರ್ಕಾರ ನೀಡಿದೆ. ಮೂಲ ಸೌಕರ್ಯಗಳ ತುರ್ತು ಮರುಸ್ಥಾಪನೆಗೆ 500 ಕೋಟಿ ರೂ. ಗಳ ಬಿಡುಗಡೆಗೆ ಆದೇಶ ಹೊರಡಿಸಲಾಗಿದೆ. ಎಷ್ಟೋ ಜನ ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದಾರೆ. ಆದರೆ ತುರ್ತಾಗಿ ಆಗಬೇಕಾದ ಪರಿಹಾರ ಕಾರ್ಯ ಬಹಳಷ್ಟಿದೆ. ಈಗ ಬಿಡುಗಡೆಗೆ ಘೋಷಣೆಯಾದ ಮೊತ್ತ ಆನೆ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆ ಎಂಬಂತಾಗಿದೆ. ಸಂತ್ರಸ್ತರ ಸ್ಥಿತಿಗತಿಗಳ ಬಗ್ಗೆ ಪಾರದರ್ಶಕ ಹಾಗೂ ತ್ವರಿತ ಸಮೀಕ್ಷೆ ನಡೆಯಬೇಕು. ಸಾವನ್ನಪ್ಪಿದ ಕುಟುಂಬಗಳಿಗೆ ಗರಿಷ್ಟ ಪರಿಹಾರ ನೀಡಬೇಕು. ಜಾನುವಾರುಗಳನ್ನು ಕಳೆದುಕೊಂಡವರಿಗೂ ಅಗತ್ಯ ಪರಿಹಾರ ಬಿಡುಗಡೆಯಾಗಬೇಕು. ಪರಿಹಾರದ ಭರವಸೆ ಕೇವಲ ಭರವಸೆಯಾಗಿ ಉಳಿಯಬಾರದು. ರಸ್ತೆ, ಸೇತುವೆ, ವಿದ್ಯುತ್ ಸಂಪರ್ಕ ದುರಸ್ತಿಗೆ ಆದ್ಯತೆ ನೀಡಬೇಕು. ಪ್ರವಾಹದಿಂದ ಹಾನಿಯಾದ ಬೆಳೆಗಳಿಗೆ ಪರಿಷ್ಕೃತ ದರಗಳಲ್ಲಿ ವಿಳಂಬ ಮಾಡದೆ ಪರಿಹಾರ ವಿತರಣೆಗೆ ತಕ್ಷಣ ಕ್ರಮಗಳನ್ನು ಕೈಗೊಳ್ಳಬೇಕು. ಶುದ್ಧ ಕುಡಿಯುವ ನೀರಿನ ಒದಗಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ನಾಪತ್ತೆಯಾದವರನ್ನು, ಅವರ ಶವಗಳನ್ನು ಹುಡುಕಲು ಶೋಧ ಕಾರ್ಯ ತುರ್ತಾಗಿ ನಡೆಯಬೇಕು. ಪ್ರವಾಹ ಪೀಡಿತ ಜನರ ಅಹವಾಲು ಸ್ವೀಕರಿಸಲು ದಿನವಿಡಿ ಕ್ರಮ ಕೈಗೊಳ್ಳಬೇಕು. ಮನೆಗಳನ್ನು ಕಳೆದುಕೊಂಡು ಬೀದಿ ಪಾಲಾಗಿರುವ ಕುಟುಂಬಗಳಿಗೆ ತಕ್ಷಣದಲ್ಲಿ ತಾತ್ಕಾಲಿಕ ವಸತಿ ವ್ಯವಸ್ಥೆಯನ್ನು ಕಲ್ಪಿಸಬೇಕು. ಅಗತ್ಯ ಇರುವವರಿಗೆ ಆಹಾರ ಕಿಟ್‌ಗಳನ್ನು ವಿತರಣೆ ಮಾಡಬೇಕು. ಸರ್ಕಾರ ಅಗತ್ಯವಾದ ಎಲ್ಲ ಶಾಶ್ವತ ಕ್ರಮಗಳನ್ನು ಕೈಗೊಳ್ಳಬೇಕು. ಪರಿಹಾರ ವಿತರಣೆಯಲ್ಲಿ ಯಾವುದೇ ಮತ, ಜಾತಿ, ಭಾಷೆಗಳ ತಾರತಮ್ಯ ಆಗದಂತೆ ನೋಡಿಕೊಳ್ಳಬೇಕು. ಮಳೆ ಮುನ್ಸೂಚನೆ ಆಧಾರದಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಇಂತಹ ತುರ್ತು ಪರಿಹಾರ ಕ್ರಮಗಳನ್ನು ಸರ್ಕಾರ ತಾನಾಗಿಯೇ ಮಾಡುವ ಯಾವ ಸಾಧ್ಯತೆಯೂ ಇಲ್ಲ. ಹೀಗಾಗಿ ಜನಪರ ಸಂಘಟನೆಗಳು ಒಂದಾಗಿ ಸರ್ಕಾರದ ಮೇಲೆ ಒತ್ತಡ ಹೇರಿ ನ್ಯಾಯ ಪಡೆಯಬೇಕಾಗಿದೆ.

ಚಾಮರಾಜಪೇಟೆ ಈದ್ಗಾ ಮೈದಾನ ಕೋಮುದ್ವೇಷದ ಅಗ್ನಿ ಕುಂಡವಾಗಬೇಕೆ?

ಈ ವಾರ

ಎಸ್.ವೈ. ಗುರುಶಾಂತ್

ವಿವಾದದ ಅಗ್ನಿ ಕುಂಡವೊಂದು ಬೆಂಗಳೂರಿನ ಹೃದಯ ಭಾಗದಲ್ಲಿ ಹೊತ್ತಿ ಉರಿಯುತ್ತಿದೆ. ಅದಕ್ಕೆ ಇತಿಹಾಸ, ಸಾರ್ವಜನಿಕ ಹಿತ, ದೇವರು– ಧರ್ಮ, ದೇಶಭಕ್ತಿಯ ರೆಕ್ಕೆಪುಕ್ಕಗಳೂ ಅಂಟಿಕೊಂಡಿವೆ. ನಾಗರೀಕರ ಸಮಿತಿ, ವಿಶ್ವ ಸನಾತನ ಪರಿಷತ್ ಸಂಘಗಳು ಪ್ರತಿಭಟನೆ, ಮೆರವಣಿಗೆ, ಬಂದ್ ಮತ್ತು ಇತ್ಯರ್ಥವಾಗದಿದ್ದರೆ ಪ್ರಾರ್ಥನಾ ಗೋಡೆಯನ್ನೇ ಧ್ವಂಸಗೊಳಿಸುವ ಎಚ್ಚರಿಕೆಗಳ ಘರ್ಜನೆಗಳ ಗುಂಡುಗಳೂ ಸಿಡಿಯುತ್ತಿವೆ. ಈ ಎಲ್ಲಾ ವರಸೆಗಳನ್ನು ನೋಡುತ್ತಿದ್ದರೆ ಸ್ವಾತಂತ್ರ್ಯೋತ್ಸವದ ಹೊತ್ತಿಗೆ ಏನಾದರೂ ಒಂದು ಅನಾಹುತ ಸಂಭವಿಸಿಯೇ ತೀರಬಹುದು ಎನ್ನುವುದು ಅರ್ಥವಾಗದೇ ಇರದು! ಪೋಲೀಸರ ಬಂದೋಬಸ್ತಿನ ಪ್ರದರ್ಶನ ಬಿಟ್ಟರೆ ವಿವಾದದ ಹುಸಿತನಗಳನ್ನು ತುಂಡರಿಸುವ ಯಾವ ಕೆಲಸವನ್ನೂ ರಾಜ್ಯ ಸರಕಾರ ಮಾಡುತ್ತಿಲ್ಲ. ಬಿ.ಬಿ.ಎಂ.ಪಿ ಆಡಳಿತ ಅಧಿಕಾರಿಗಳು ಆರಂಭದಲ್ಲಿ ಸತ್ಯ ತೆರೆದಿಡುವ ಯತ್ನ ಮಾಡಿದರಾದರೂ ಅಧಿಕಾರದ ಬಲ ಮತ್ತು ಆರೋಪಗಳ ಸುರಿಮೊಳೆಗಳಿಂದ ಬಾಯಿಗೆ ಬೀಗ ಜಡಿದಂತಾಗಿದೆ! ಈಗ 'ದ್ವೇಷ ಭಕ್ತ' ರದ್ದೇ ಅಬ್ಬರ!

ಚಾಮರಾಜಪೇಟೆಯಲ್ಲಿರುವ ಈದ್ಗಾ ಮೈದಾನವೆಂದೇ ಎಲ್ಲರೂ ಕರೆಯುತ್ತಿರುವ ಮೈದಾನವೊಂದು ಇದೀಗ ಮತ್ತೇ ಹುಬ್ಬಳ್ಳಿ ಈದ್ಗಾ ವಿವಾದದಂತೆ ಕೆರಳಿದರೆ ಆಶ್ಚರ್ಯವಿಲ್ಲ. ಆರಂಭದಲ್ಲಿ ಸದ್ದು ಮಾಡಿದ ಸಂಘಪರಿವಾರದ ಪುಂಗಿಗೆ ನಿಧಾನವಾಗಿಯಾದರೂ ತಲೆದೂಗುವವರ ಸಂಖ್ಯೆ ಹೆಚ್ಚಿದಂತೆ ಈಗ ಅದರ ಅಬ್ಬರ ಹೆಚ್ಚಾಗಿದೆ. ಬಂದ್‌ನಂತಹ ಆಟಾಟೋಪಕ್ಕೆ ಬಲ ದೊರೆತಂತೆಯೂ ಕಾಣುತ್ತಿರುವುದರಿಂದ ಜನರನ್ನು ನಿಧಾನವಾಗಿ ಮೈದಾನದ ವಿವಾದದಿಂದ ಮತೀಯ ವಿಭಜನೆಯತ್ತ ವಿವಾದವನ್ನು ಬೆಳೆಸುವುದೂ ಹೆಚ್ಚಿದೆ. ನಿಜಕ್ಕೂ ಸಾರ್ವಜನಿಕರು ಕೆರಳಿ ಕದನವಾಡುವಂತಹ ವಿವಾದವಿದೆಯೇ ಅಲ್ಲಿ?

ಹಿಂದುಗಳ ಹೆಸರಿನಲ್ಲಿ ಕೆಲವು ಆರೆಸ್ಸೆಸ್ ಪರಿವಾರ ಈದ್ ಪೂರ್ವದಲ್ಲಿ ಈ ಜಾಗ ಸಾರ್ವಜನಿಕರಿಗೆ ಸೇರಿದ್ದು ಎಂದು ಪ್ರತಿಪಾದನೆ ಆರಂಭಿಸಿತು. ಅಲ್ಲಿ ಗಣೇಶ ಉತ್ಸವ ಒಳಗೊಂಡು ಹಿಂದುಗಳ ಉತ್ಸವಗಳಿಗೆ ಜಾಗ ಕೊಡಬೇಕೆಂದೂ ಆಗ್ರಹಿಸಿತು. ದಾಖಲೆಗಳನ್ನು ಆಧರಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಇದು ವಕ್ಫ್ ಬೋರ್ಡಿನ ಆಸ್ತಿಯಾಗಿದೆ ಎಂದು ಸುಪ್ರಿಂ ಕೋರ್ಟ್ ಇತ್ಯರ್ಥ ಪಡಿಸಿದ ಮೊಕದ್ದಮೆಯ ತೀರ್ಪು ಅದರ ನಿರ್ದೇಶನವನ್ನು ತಿಳಿಸಿದರು. ಇದರಿಂದ ಕುಪಿತರಾದ ಬಿಜೆಪಿ ಮುಖಂಡರು ಆಯುಕ್ತರ ಚಾರಿತ್ರ್ಯ ಹರಣ ಮಾಡುವಂತೆ ಆರೋಪದ ಧಾಳಿ ನಡೆಸಿದರು. ನ್ಯಾಯಾಲಯದ ತೀರ್ಪು ಅನುಸರಿಸಿ ವಕ್ಫ್ ಬೋರ್ಡ್ ಪಾಲಿಕೆಯ ಮುಂದೆ ಖಾತೆ ಮಾಡುವಂತೆ ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ಅದು ಪಾಲಿಕೆಯ ಸುಪರ್ದಿನಲ್ಲಿದೆ ಎಂದಿದ್ದರು. ಬಿಜೆಪಿ– ಸಂಘಪರಿವಾರದ ಒತ್ತಡ, ಅಬ್ಬರ ಹೆಚ್ಚಿದಂತೆ ಆಯುಕ್ತರ ಧ್ವನಿಯೂ ಕೇಳಿಸದಾಯಿತು.

ಮುಸ್ಲಿಮರಿಗೆ ಪ್ರಾರ್ಥನೆ ಮತ್ತು ಸ್ಮಶಾನ ಮುಂತಾದದ ಉದ್ದೇಶಗಳಿಗೆಂದು ತುಂಬಾ ಹಿಂದೆ ಮೈಸೂರಿನ ಅರಸರಾಗಿದ್ದ ಒಡೆಯರ್ ರವರು 10 ಎಕರೆಗೂ ಹೆಚ್ಚು ಭೂಮಿಯನ್ನು ನೀಡಿತ್ತು. ಅದರ ಸರ್ವೇ ನಂಬರ್ 40. 1965 ರಲ್ಲಿ ವಕ್ಫ್ ಬೋರ್ಡ್ ಇದನ್ನು ತಮ್ಮ ಸ್ವಾಧೀನದ ಆಸ್ತಿಯಾಗಿ ಗೆಜೆಟ್ಟನ್ನು ಹೊರಡಿಸಿತು. ಮುಸ್ಲಿಂ ಸೆಂಟ್ರಲ್ ಬೋರ್ಡ್ ಇದನ್ನು ನಿರ್ವಹಿಸುವುದಾಗಿಯೂ ಹೇಳಿತು.

ಈ ಜಮೀನಿನ ಒಡೆತನದ ವಿವಾದ 1950ರ ದಶಕದಿಂದಲೇ ಇದೆ. 1952 ರಲ್ಲಿ ರುಕ್ನ ಉಲ್ ಮುಲ್ಕ್ ಅಬ್ದುಲ್ ವಾಜಿದ್ ಎನ್ನುವವರು ಮುಸ್ಲಿಂರ ಪರವಾಗಿ ಸಿವಿಲ್ ಕೋರ್ಟಿನಲ್ಲಿ ಈ ಜಾಗ ಮುಸ್ಲಿಮರಿಗೆ ಸೇರಿದ್ದು ಎಂದು ದಾವೆ ಹೂಡುತ್ತಾರೆ. ಸರ್ವೇ ನಂಬರ್ 40 ಈ ಭೂಮಿ ನಿರಂತರ ಮುಸ್ಲಿಂ ಸಮುದಾಯದ ಉಪಯೋಗಕ್ಕೆ ಇದೆ ಎಂದು ವಾದಿಸಲಾಗಿತ್ತು. ಕೋರ್ಟ್ ಗೆ ಹೋಗಲು ಮುಖ್ಯ ಕಾರಣ ಅಂದಿನ ಬೆಂಗಳೂರು ಕಾರ್ಪೋರೇಷನ್ ಸರ್ವೆ ನಂ.40 ರಲ್ಲಿ ಹೊಸ ಕಟ್ಟಡ ಕಟ್ಟಲು ಬುನಾದಿಯನ್ನು ತೆಗೆಯಲು ಆರಂಭಿಸುತ್ತದೆ. ಇದನ್ನು ಆಕ್ಷೇಪಿಸಿ ಮುಸ್ಲಿಂ ಸಮುದಾಯದ ಪರವಾಗಿ ನ್ಯಾಯಾಲಯಕ್ಕೆ ಹೋಗಲಾಗುತ್ತದೆ. ಆದರೆ ಸೆಕೆಂಡ್ ಮುನ್ಸಿಫ್ ರವರು ಇವರ ಮನವಿಯನ್ನು ತಿರಸ್ಕರಿಸುತ್ತಾರೆ. ಆ ಬಳಿಕ ಮೇಲಿನ ನ್ಯಾಯಾಲಯಕ್ಕೆ ಹೋದ ನಂತರ ಸಿವಿಲ್ ಜಡ್ಜ್ ಇವರ ಮನವಿಯನ್ನು ಪುರಸ್ಕರಿಸುತ್ತಾರೆ. ಇದನ್ನು ಪ್ರಶ್ನಿಸಿ ನಗರ ಕಾರ್ಪೋರೇಷನ್ ಮಾರ್ಚ್ 20, 1957ರಂದು ಮೈಸೂರು ಹೈಕೋರ್ಟಿಗೆ ಮನವಿ ಸಲ್ಲಿಸುತ್ತದೆ. ಆದರೆ ಹೈಕೋರ್ಟ್ ನಲ್ಲಿ ಅದಕ್ಕೆ ಪರವಾಗಿ ತೀರ್ಪು ಸಿಗುವುದಿಲ್ಲ. ಮತ್ತೆ ಕಾರ್ಪೋರೇಷನ್ ಸುಪ್ರೀಂಕೋರ್ಟಿಗೆ ಮನವಿ ಸಲ್ಲಿಸುತ್ತದೆ. ಜನವರಿ 27, 1964 ರಂದು ಸುಪ್ರೀಂಕೋರ್ಟ್ ಅರ್ಜಿಯನ್ನು ವಜಾ ಗೊಳಿಸಿತು. ಈ ಪ್ರಕರಣದಲ್ಲಿ ಪುಟ 4 ಕ್ಕೆ



ಚಾಮರಾಜಪೇಟೆ ಈದ್ಗಾ ಮೈದಾನ ಕೋಮುದ್ವೇಷದ ಅಗ್ನಿ ಕುಂಡವಾಗಬೇಕೆ?

–ಪುಟ 3 ರಿಂದ

ಬೆಂಗಳೂರು ಕಾರ್ಪೊರೇಷನ್ ವಾದ ಏನಾಗಿತ್ತು ಎಂದರೆ ಈ ಮೈದಾನದಲ್ಲಿ ಪ್ರಾರ್ಥನಾ ಸ್ಥಳ ಪ್ಲಾಟ್ ಫಾರಂ–ಮಿಂಬರ್ ನಲ್ಲಿ ಮಾತ್ರ ಪ್ರಾರ್ಥನೆ ನಡೆಯುತ್ತಿದ್ದವು. ಅದರಾಚೆ ಮೈದಾನದಲ್ಲಿ ಅಲ್ಲ ಎಂಬುದು ಕಾರ್ಪೊರೇಷನ್ ವಾದವಾಗಿತ್ತು. ಅಲ್ಲದೆ ಫುಟ್ಪಾತ್, ಸಾರ್ವಜನಿಕ ನೀರಿನ ನಲ್ಲಿ, ಪುರಸಭೆ ಟ್ಯಾಂಕ್ ಮತ್ತು ಆಟದ ಮೈದಾನ ಇರುವುದರಿಂದ ಅದರ ಮಾಲೀಕತ್ವ ಕಾರ್ಪೊರೇಷನ್ ನದು ಎಂದೂ ವಾದಿಸಿತ್ತು. ಈ ವಾದವನ್ನು ಸರ್ವೋಚ್ಚ ನ್ಯಾಯಾಲಯದ ಇಬ್ಬರ ನ್ಯಾಯಾಧೀಶರ ಪೀಠ ತಿರಸ್ಕರಿಸಿತು. ಅದು ತನ್ನ ತೀರ್ಪಿನಲ್ಲಿ ಕಾರ್ಪೊರೇಷನ್ ಯಾವುದೇ ನಕಾಶೆಯಾಗಲೀ, ದಾಖಲೆಗಳು ಅಥವಾ ದಸ್ತಾವೇಜುಗಳನ್ನು ಸಲ್ಲಿಸಿಲ್ಲ. ಆದರೆ ಮುಸ್ಲಿಮರ ಪರವಾಗಿ ನೀಡಿದ ದಾಖಲೆಗಳು ಇದನ್ನು ಈದ್ಗಾ ಎನ್ನಲು 1938 ರ ದಸ್ತಾವೇಜುಗಳು, ಸ್ಮಶಾನ ಭೂಮಿ ಎನ್ನಲು 1871 ರ ದಾಖಲೆಗಳನ್ನು ನೀಡಿದೆ. ಹೀಗಾಗಿ ಕಾರ್ಪೊರೇಷನ್ ನ ಅರ್ಜಿಯನ್ನು ವಜಾ ಮಾಡಿತು. ಮತ್ತು ಅದಕ್ಕೆ ದಂಡವನ್ನು ಕಟ್ಟಬೇಕು ಎಂದು ತಿಳಿಸಿತ್ತು. ಇದೇ ಸಂದರ್ಭದಲ್ಲಿ ಈ ಮೈದಾನ ಸಾರ್ವಜನಿಕರು ವಾಸ ಮಾಡುವ ಪ್ರದೇಶವಾಗಿರುವುದರಿಂದ ಗೋರಿಪಾಳ್ಯದಲ್ಲಿ ಬಡ ಈದ್ಗಾ ಜಮೀನನ್ನು ಪರ್ಯಾಯವಾಗಿ ನೀಡಿತು.

ಈಗ ಪ್ರತಿಭಟಿಸುತ್ತಿರುವವರು ಪ್ರಶ್ನಿಸುತ್ತಿರುವುದು ಇದನ್ನೇ ಈಗಾಗಲೇ ಬೇರೊಂದು ಪರ್ಯಾಯ ಜಾಗವನ್ನು ಕೊಟ್ಟಿರುವುದರಿಂದ ಇಲ್ಲಿ ಪ್ರಾರ್ಥನೆ ಮಾಡುವ ಹಕ್ಕು ಇಲ್ಲ ಅವಕಾಶವೂ ಇಲ್ಲ ಎಂದು ಹೇಳಲಾಗುತ್ತಿದೆ. 2019 ರ ಫೆಬ್ರವರಿಯಲ್ಲಿ ಬಿ.ಬಿ.ಎಂ.ಪಿ.ಯು ಚಾಮರಾಜಪೇಟೆ ಡಿವಿಷನ್ ಈ ಮೈದಾನದಲ್ಲಿರುವ ಮಿನಾರ್ ಗೆ ಅಂದರೆ 941 ಚದರ ಅಡಿಗೆ ಮುಸ್ಲಿಂ ದರ್ಗಾ (ಎಚ್) ಎಂದು ಖಾತಾ ಸರ್ಟಿಫಿಕೇಟ್ ನ್ನು ನೀಡಿದೆ.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿದಾಗ ಈ ಪ್ರಶ್ನೆ ಅಥವಾ ವಿವಾದ ಬಿಬಿಎಂಪಿ ಮತ್ತು ಬೋರ್ಡಿನ ನಡುವೆ ಇರುವಂತದ್ದಾಗಿದೆ. ಮತ್ತು ಸ್ಪಷ್ಟವಾಗಿ ಇದು ಬಿಬಿಎಂಪಿ ಸ್ವತ್ತು ಎನ್ನಲು ಸಮರ್ಥವಾದ ದಾಖಲೆಗಳು, ನ್ಯಾಯಾಲಯದ ತೀರ್ಪುಗಳೂ ಇದ್ದಂತಿಲ್ಲ. ಹಾಗೆಯೇ ವಕ್ಫ್ ಬೋರ್ಡ್ ಇದನ್ನು ತನ್ನದು ಎಂದು ತನ್ನ ಸ್ವಾಧಿನದಲ್ಲಿ ಇರಿಸಿಕೊಂಡಿರುವುದು ಇಲ್ಲ. ಈ ಜಾಗಕ್ಕೆ ಫೆನ್ಸಿಂಗ್ ಹಾಕಬೇಕೆಂದು ಮಂಡಳಿ ಮುಂದಾದಾಗ ಸಾರ್ವಜನಿಕರ ವಿರೋಧವಿದೆ, ಸೂಕ್ಷ್ಮ ವಿಚಾರ ಎಂದು ಬಿ.ಬಿ.ಎಂ.ಪಿ. ತಡೆದಿರುವ ನಿದರ್ಶನಗಳಿವೆ ಎನ್ನಲಾಗುತ್ತಿದೆ. ಆದರೆ ಒಡೆತನದ ಪ್ರಶ್ನೆ ಒಂದು ಮಟ್ಟಿನಲ್ಲಿ ವಕ್ಫ್ ಕಡೆ ಇರುವಂತೆ ಕಾಣುತ್ತದೆ. ಇಂತಹ ಒಂದು ಪ್ರದೇಶದಲ್ಲಿ ಮತಿಯವಾದಿ ಸಂಘಟನೆಗಳು ಅದನ್ನು ಒಂದು ವಿವಾದವಾಗಿ ಬೆಳೆಸುತ್ತಿರುವ ಮತ್ತು ಬಳಸುತ್ತಿರುವ ಹಿತಾಸಕ್ತಿ ಬಹಳ ಪ್ರಮುಖವಾಗಿದೆ ಎನಿಸುತ್ತದೆ.

ಈಗಲೂ 1964 ರ ಸುಪ್ರೀಂಕೋರ್ಟ್ ತೀರ್ಪನ್ನು ಪ್ರಶ್ನೆ ಮಾಡಲಾಗುವುದೇ ಎಂದರೆ ಒಂದೆಡೆ ವಕ್ಫ್ ಮಂಡಳಿಯಿಂದ ನಕಾರಾತ್ಮಕ ಉತ್ತರ ಬಂದಿರುವುದಾಗಿ ಮಾಧ್ಯಮಗಳು ತಿಳಿಸುತ್ತವೆ. ಹಾಗೆಯೇ ಈ ವಾಸ್ತವಗಳ ಎದುರಿನಲ್ಲಿ ಬಿಬಿಎಂಪಿಯು ನಿಖರ ಉತ್ತರ ನೀಡಲು ಸಿದ್ಧವಿಲ್ಲ. ಹಾಗೆ ನೋಡಿದರೆ, ಸೆಂಟ್ರಲ್ ಮುಸ್ಲಿಂ ಬೋರ್ಡ್ ಸಹ ಇಡೀ ಮೈದಾನದ ಮೇಲಿನ ಸ್ವಾಧೀನತೆ ಪ್ರಾಯೋಗಿಕವಾಗಿ ಹೊಂದಿಲ್ಲ. ಬೇಲಿಯೂ ಹಾಕಿಲ್ಲ. ಬಿಬಿಎಂಪಿ ಯವರು ಅದನ್ನು ಗುಡಿಸುತ್ತಾರೆ, ಮಕ್ಕಳು ಆಟವಾಡುತ್ತಾರೆ. ಉಳಿದವರು ಕುರಿ ಮಾರಾಟ ಇತ್ಯಾದಿಗಳಿಗೆ ಬಳಸುತ್ತಾರೆ. ವಾಸ್ತವದಲ್ಲಿ 10.5 ಎಕರೆಗಿಂತಲೂ ಹೆಚ್ಚಾಗಿದ್ದ ಈ ಜಮೀನು ಇದೀಗ ಕೇವಲ 2.10 ಎಕರೆಗೆ ಸೀಮಿತಗೊಂಡಿದೆ. ಉಳಿದಂತೆ ಬಹುತೇಕ ಇತರರು ಅದನ್ನು ಆತಿಕ್ರಮಿಸಿ ಕೊಂಡಿದ್ದಾರೆ. ಕರ್ನಾಟಕ ವಕ್ಫ್ ಮಂಡಳಿಯ ಲಕ್ಷಾಂತರ ಕೋಟಿ ರೂಪಾಯಿಗಳ ಆಸ್ತಿಯು ಹೇಗೆಲ್ಲಾ ನಿರುಪಯೋಗಿ, ದುರುಪಯೋಗಿ ಅಥವಾ ಇತರರ ಸುಪರ್ದಿನಲ್ಲಿದೆ ಎನ್ನುವುದನ್ನು ನೆನಪಿಸಿಕೊಳ್ಳಬಹುದು.

ಸಾಧಾರಣವಾಗಿ ಈ ಮೈದಾನವನ್ನು ರಂಜಾನ್, ಈದ್ ನಂತಹ ಮುಸ್ಲಿಮರ ಧಾರ್ಮಿಕ ಹಬ್ಬಗಳ ಸಂದರ್ಭದಲ್ಲಿ ಪ್ರಾರ್ಥನೆಗೆ ಬಳಸುವುದರ ಹೊರತಾಗಿ ಉಳಿದಂತೆ ಕುರಿ ವ್ಯಾಪಾರ, ಮಕ್ಕಳ ಆಟೋಟ ಮುಂತಾದವಕ್ಕೆ ಬಳಸುವುದು ರೂಢಿ. ಹೀಗಿರುವಾಗ ವಕ್ಫ್ ಬೋರ್ಡ್ ಮೈದಾನಕ್ಕೆ ಕಂಪೌಂಡ್ ಕಟ್ಟಲಿದ್ದಾರೆಂದೂ, ಅದು ತಮ್ಮ ವಹಿವಾಟುಗಳಿಗೆ ಅಡ್ಡಿಯಾಗುವುದೆಂದೂ ಸುದ್ದಿ ಇದ್ದು ಅದು ಸ್ಥಳೀಯರಲ್ಲಿ ಮತ್ತು ಗ್ರಾಮಗಳಿಂದ ಬರುವ ಕುರಿ ಸಾಕಾಣಿಕೆಯ ರೈತರಲ್ಲಿಯೂ ಆತಂಕವನ್ನು ಉಂಟು ಮಾಡಿದೆ ಎಂದು ಹೇಳಲಾಗುತ್ತಿದೆ. ಇವಕ್ಕೆಲ್ಲಾ ಪರ್ಯಾಯ ಜಾಗ ಕಲ್ಪಿಸಲು ಅಸಾಧ್ಯವಾದುದೇನಲ್ಲ. ಒಂದು ವೇಳೆ ಆಕ್ಷೇಪಣೆ ಏನಾದರೂ ಬರಬೇಕಿದ್ದರೆ ಅದು ಬಿಬಿಎಂಪಿಯಿಂದ ಬರಬೇಕಿತ್ತು ಅಷ್ಟೆ.

ಈಗಾಗಲೇ ಆ ಪ್ರದೇಶದಲ್ಲಿ ಅತ್ಯಂತ ವ್ಯವಸ್ಥಿತವಾಗಿ ಈಗ ಮೈದಾನದ ಒಡೆತನದ ಪ್ರಶ್ನೆಯನ್ನು ವಿವಾದವಾಗಿಸಿ ಮುಸ್ಲಿಮರ ವಿರುದ್ಧ, ಹಿಂದು ಮುಸ್ಲಿಮರ ಪ್ರಶ್ನೆ ಎಂಬಂತೆ ಬಿಂಬಿಸಿ ಕೋಮು ದ್ವೇಷದ ಕಡೆಗೆ ವಾಲಿಸಿ ವ್ಯವಸ್ಥಿತವಾಗಿ ಪ್ರಚಾರ ನಡೆಸುತ್ತಿದ್ದ ಸಂಘ ಪರಿವಾರ ಮುಂದೆ ಅದನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ಯಲು ಬಂದ್ ನ್ನು ಕೂಡ ನಡೆಸಿತು. ಈ ಚಟುವಟಿಕೆಗಳ ಪ್ರತಿ ಹಂತದಲ್ಲೂ ಆ ಪ್ರದೇಶದಲ್ಲಿ ಚಾಮರಾಜಪೇಟೆ ಕ್ಷೇತ್ರದಲ್ಲಿ ಶಾಸಕರಾಗಿರುವ ಜಮೀರ್ ಅಹ್ಮದ್ ಅವರ ವಿರುದ್ಧವೂ ಗುರಿಯಿಟ್ಟು ವಾಗ್ದಾಳಿಗಳನ್ನು ನಡೆಸಿ ಮುಂಬರುವ ಚುನಾವಣೆಯ ತಂತ್ರಕ್ಕೆ ಇದನ್ನು ಬೆಸೆದದ್ದೂ ಆಗಿದೆ.

ಇದು ಹಿಂದೆ ಮೈಸೂರಿನ ಅರಸರಾದ ಒಡೆಯರ್ ಅವರು ಮುಸ್ಲಿಮರಿಗೆ ಪ್ರಾರ್ಥನೆ ಮಾಡಲು ಕೊಟ್ಟಈ ಜಾಗದ ಪ್ರಶ್ನೆ ವಿವಾದವಾಗಿ ಸಮಾಜದಲ್ಲಿ ಜನರನ್ನು ಎತ್ತಿ ಕಟ್ಟುವ ಹಿಂಸಾ ಕೃತ್ಯಗಳಿಗೆ ಎಳೆಸುವುದು ಅಗತ್ಯವಿದೆಯೇ? ಆಗಸ್ಟ್ 15 ರ ಒಳಗೆ ಇತ್ಯರ್ಥ ಗೊಳಿಸದಿದ್ದರೆ ಅಲ್ಲಿರುವ ಪ್ರಾರ್ಥನಾ ಕಟ್ಟಡವನ್ನೇ ಧ್ವಂಸಗೊಳಿಸುವುದಾಗಿ ಹಿಂದುತ್ವವಾದಿಗಳು ಹೇಳುತ್ತಿರುವುದರ ಅರ್ಥವೇನು? ಯಾವುದೇ ಆಸ್ತಿ ಒಡೆತನದ ವಿವಾದಗಳಿಗೆ ನಾಗರಿಕ ಸಮಾಜದಲ್ಲಿ ಕಾನೂನಾತ್ಮಕ ವಿಧಿ ವಿಧಾನಗಳಿವೆ. ಸಮಾಜದ ಒಟ್ಟು ಸ್ವಾಸ್ತ್ಯವನ್ನು ಗಮನದಲ್ಲಿರಿಸಿ ಸಹಮತದಿಂದ ನಡೆದುಕೊಂಡು ಹೋಗಬೇಕಾದ ವಿವೇಕ ಕೂಡ ಸಹಜ ನ್ಯಾಯವಾಗಿ ಇದೆ. ಈಗಲೂ ಬೆಂಗಳೂರು ಒಳಗೊಂಡಂತೆ ರಾಜ್ಯದ ಅನೇಕ ಕಡೆಗಳಲ್ಲಿ ಸಾರ್ವಜನಿಕ–ಸರಕಾರಿ ಸ್ಥಳಗಳಲ್ಲಿ ಇದ್ದಕ್ಕಿದ್ದಂತೆ ಮಂದಿರಗಳು ಉದ್ಭವವಾಗಿ ರಾಷ್ಟ್ರೀಯ ಹೆದ್ದಾರಿಯನ್ನು, ನಗರಗಳ ಹೃದಯ ಭಾಗದಲ್ಲಿರುವ ಮೈದಾನಗಳನ್ನೂ ಆತಿಕ್ರಮಿಸಿ ಕೊಂಡಿರುವ ಅನೇಕ ನಿದರ್ಶನಗಳು ಕಣ್ಣೆದುರುಗಡೆ ಇವೆ. ಇವಾವುದನ್ನೂ ತಪ್ಪು ಎಂದು ಭಾವಿಸದ ಸಂಘ ಪರಿವಾರ ಇಷ್ಟು ದೊಡ್ಡ ಪ್ರಮಾಣದಲ್ಲಿ ವಿದ್ವೇಷದ ಕೃತ್ಯಗಳಿಗೆ ತೊಡಗುವುದಕ್ಕೆ ಏನಾದರೂ ವಿವೇಕಯುತ ಅರ್ಥವಿದೆಯೇ? ಇವರಿಗೆ ಧರ್ಮವನ್ನು ಕಾಯುವ ನಿಜವಾದ ಇಚ್ಚೆ ಇದೆಯೇ? ಇಂತಹ ವಿಭಜನಕಾರೀ ಹುಚ್ಚಾಟಗಳ ಬಗ್ಗೆ ಸಾರ್ವಜನಿಕರು ಸಮ ಚಿತ್ತದಿಂದ ಯೋಚಿಸಬೇಕು.

ಜೊತೆಗಿರುವನು ಚಂದಿರ ನಾಟಕಕ್ಕೆ ಅಡ್ಡಿ: ಪ್ರತಿಭಟನೆ

ಶಿವಮೊಗ್ಗದ ಸೊರಬ ತಾಲೂಕಿನ ಅನವಟ್ಟಿಯಲ್ಲಿ ನಡೆದ ಜಯಂತ್ ಕಾಯ್ಕಿಣಿ ರಚಿತ ಜೊತೆಗಿರುವವನು ಚಂದಿರ ನಾಟಕದ ಪ್ರದರ್ಶನದ ವೇಳೆ ಸಂಘ ಪರಿವಾರದ ದಾಳಿಯನ್ನು, ಸಾಂಸ್ಕೃತಿಕ ಅಭಿವ್ಯಕ್ತಿಯ ಮೇಲಿನ ಹಲ್ಲೆಯನ್ನು ವಿರೋಧಿಸಿ ಸಮುದಾಯ ಮಂಗಳೂರು ಮತ್ತು ಜಿಲ್ಲೆಯ ಪ್ರಗತಿಪರ ಕಲಾವಿದರಿಂದ ನಗರದ ಕ್ಲಾಕ್ ಟವರ್ ಬಳಿ ಬುಧವಾರ ಪ್ರತಿಭಟನೆ ನಡೆಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಜೆಎನ್‌ಯುನ ನಿವೃತ್ತ ಪ್ರೊಫೆಸರ್ ಡಾ. ಪುರುಷೋತ್ತಮ ಬಿಳಿಮಲೆ 'ಸಂಸ್ಕೃತಿಯ ಹೆಸರಿನಲ್ಲಿ 'ಜೊತೆಗಿರುವವನು ಚಂದಿರ' ನಾಟಕ ನಿಲ್ಲಿಸುವಂತಹ ದಾಂಧಲೆ ಮಾಡುತ್ತಿರುವ ಸಂಘ ಪರಿವಾರದ ನಾಯಕ, ಕಾರ್ಯಕರ್ತರಿಗೆ ಸಂಸ್ಕೃತಿಯ ಲವಲೇಶವೂ ಗೊತ್ತಿಲ್ಲ' ಎಂದರು.

ಭಾಷಾ ದೃಷ್ಟಿಯಿಂದ ಜಾನಪದ ದೃಷ್ಟಿಯಿಂದ ಇತಿಹಾಸದ ದೃಷ್ಟಿಯಿಂದ ಕರ್ನಾಟಕವು ಎಲ್ಲವನ್ನು ತನ್ನೊಳಗೆ ಸೇರಿಸಿಕೊಂಡು ಬೆಳೆದ ರಾಜ್ಯ. ಇಲ್ಲಿ ಹಿಂದೂ ಧರ್ಮ ಮತ್ತು ಇಸ್ಲಾಂ ಧರ್ಮದ ಒಳಗಡೆ ಎರಡೂ ಇಲ್ಲದ ಸಂಗಮ ಧರ್ಮ ಇರುವುದು ಇಲ್ಲಿನ ಸೌಂದರ್ಯವಾಗಿದೆ. ಆದರೆ ಇಂದಿನ ಸರಕಾರವು ಇಂತಹ ಶ್ರೀಮಂತ ಸಂಸ್ಕೃತಿಯನ್ನು ಪೋಷಿಸದೇಇರುವುದು ಶೋಚನೀಯ ಎಂದರು.

ವಿಚಾರವಾದಿ ಪ್ರೊ. ನರೇಂದ್ರ ನಾಯಕ್ ಮಾತನಾಡಿ, 'ಭಾರತವು ಬಹುತ್ವದ ದೇಶ. ಹಿಂದಿನಿಂದಲೂ ಇಲ್ಲಿ ಸಾಂಸ್ಕೃತಿಕ ಕೊಂಡುಕೊಳ್ಳಿವಿಕೆಗೆ ಯಾವತ್ತೂ ಅಡ್ಡಿ ಇರಲಿಲ್ಲ. ಹಿಂದೆ ಇಲ್ಲಿನ ಭಜನೆಗಳನ್ನು ಕೂಡಾ ಮುಸ್ಲಿಮ್ ಹಾಡುಗಾರರು ಹಾಡಿದಾಗಲೂ ದೇಶದಲ್ಲಿ ಸಮಸ್ಯೆ ಇರಲಿಲ್ಲ. ಲತಾ ಮಂಗೇಶ್ಕರ್ ಈಶ್ವರ್ ಅಲ್ಲಾಹ್ ತೇರೇ ನಾಮ್ ಎಂದು ಅಂದು ಹಾಡಿದ್ದರು. ಆದರೆ ಇಂದು ಆ ಹಾಡನ್ನು ಹಾಡಿದರೆ ಹಿಂದೂ ಕೋಮುವಾದಿಗಳೂ ಮುಸ್ಲಿಮ್ ಮೂಲಭೂತವಾದಿಗಳೂ ಹಾಡುಗಾರರ ಮೇಲೆ ಮುಗಿ ಬೀಳಬಹುದಾದ ಪರಿಸ್ಥಿತಿ ಇರುವುದು ಪ್ರಜಾಪ್ರಭುತ್ವ ಭಾರತದ ದುರಂತ. ಇದು ನಡೆಯುತ್ತಿರುವುದು ರಾಜಕೀಯ ದುರುದ್ದೇಶ ಭಾಗವಾಗಿದೆ' ಎಂದರು.

ನಿವೃತ್ತ ಉಪನ್ಯಾಸಕ ಪ್ರೊ. ಪಟ್ಟಾಭಿರಾಮ ಸೋಮಯಾಜಿ ಮಾತನಾಡಿದರು.

ಪ್ರತಿಭಟನೆಯಲ್ಲಿ ಪ್ರಗತಿಪರ ಚಿಂತಕರಾದ ಪ್ರಭಾಕರ್ ಕಾಪಿಕಾಡ್, ಶ್ಯಾಮಸುಂದರ್ ರಾವ್, ಡಾ.ಕೃಷ್ಣಪ್ಪ ಕೊಂಚಾಡಿ, ಗುಲಾಬಿ ಬಿಳಿಮಲೆ, ಸಮುದಾಯ ಮಂಗಳೂರು ಕೋಶಾಧಿಕಾರಿ ವಾಸುದೇವ ಉಚ್ಚಿಲ್, ರಂಗ ನಿರ್ದೇಶಕರಾದ ವಿದ್ದು ಉಚ್ಚಿಲ್, ಕ್ರಿಸ್ಟೋಫರ್, ದಲಿತ ಚಳುವಳಿಯ ಎಂ.ದೇವದಾಸ್, ವಿದ್ಯಾರ್ಥಿ ನಾಯಕರಾದ ಮಾಧುರಿ ಬೋಳಾರ್, ರೇವಂತ್, ವಿನಿತ್ ದೇವಾಡಿಗ, ಯುವಜನ ನಾಯಕರಾದ ಸಂತೋಷ್ ಬಜಾಲ್, ನಿತಿನ್ ಕುತ್ತಾರ್, ಪ್ರದೀಪ್, ಸಮುದಾಯ ಮಂಗಳೂರು ಕಾರ್ಯದರ್ಶಿ ಮನೋಜ್ ವಾಮಂಜೂರು ಮುಂತಾದವರು ಭಾಗವಹಿಸಿದ್ದರು.

ವರದಿ: ವಾ.ಉ.

ಇಂದಿನ ಶಿಕ್ಷಣ ವ್ಯವಸ್ಥೆ ಮತದ ಪ್ರವಚನದಂತಿದೆ: ಚಂದ್ರಪೂಜಾರಿ



ಜಾತಿ ಧರ್ಮ ಹಾಗೂ ಲಿಂಗ ಭೇದವಿಲ್ಲದೆ ವಿದ್ಯಾರ್ಥಿಗಳ ಐಕ್ಯತೆಗಾಗಿ, ಸಮಾನ ಗುಣಮಟ್ಟದ ಶಿಕ್ಷಣಕ್ಕಾಗಿ ಎಸ್‌ಎಫ್‌ಐ ನಡೆಸುತ್ತಿರುವ ಈ ಅಧ್ಯಯನ ಶಿಬಿರ ಉದ್ಘಾಟನೆ ಮಾಡಲು ಖುಷಿಯಾಗುತ್ತದೆ. ಇಂದಿನ ಶಿಕ್ಷಣ ವ್ಯವಸ್ಥೆಯೂ ಮತದ ಪ್ರವಚನದಂದೆ ಆಗಿದ್ದು ವಿದ್ಯಾರ್ಥಿಗಳು ಪ್ರಶ್ನೆ ಮಾಡುವ ಮನೋಭಾವ ಕಳೆದುಕೊಂಡಿದ್ದಾರೆ ಎಂದು ಪ್ರೊ. ಎಂ. ಚಂದ್ರ ಪೂಜಾರಿ ಅವರು ಹೇಳಿದರು.

ಜುಲೈ 16 ರಂದು "ಸಮಾನ ಗುಣಮಟ್ಟದ ಶಿಕ್ಷಣಕ್ಕಾಗಿ ಮತ್ತು ವಿದ್ಯಾರ್ಥಿಗಳ ಐಕ್ಯತೆಗಾಗಿ" ನಡೆದ ಭಾರತ ವಿದ್ಯಾರ್ಥಿ ಫೆಡರೇಶನ್‌ನ (ಎಸ್‌ಎಫ್‌ಐ) ಜಿಲ್ಲಾ ಮಟ್ಟದ ವಿದ್ಯಾರ್ಥಿ ಶಿಬಿರವನ್ನು ಉದ್ಘಾಟಿಸಿ ಪ್ರೊ.ಚಂದ್ರ ಪೂಜಾರಿ ಮಾತಾನಾಡಿದರು.

ಆಧ್ಯಯನ ಶಿಬಿರದ ಉದ್ಘಾಟನೆ ಮಾಡಿದ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರು, ನಾಡಿನ ಚಿಂತಕ ಪ್ರೊ. ಎಂ. ಚಂದ್ರ ಪೂಜಾರಿ ಅವರು, ಪಠ್ಯ ಕೊಡುವ ಸಮಾಜಕ್ಕೂ ಮತ್ತು ನಿಜ ಜೀವನದ ಸಮಾಜಕ್ಕೂ ತುಂಬಾ ಅಂತರವಿದೆ. ಸ್ಥಳೀಯ ಆಚಾರ–ವಿಚಾರ–ಸಂಸ್ಕೃತಿಯ ಬಗ್ಗೆ ಎಲ್ಲೂ ಪಠ್ಯದಲ್ಲಿ ಹೇಳಿರುವುದಿಲ್ಲ. ಭಾರತದ ಶಿಕ್ಷಣದಲ್ಲಿಯೂ ಸಮಾನತೆ ಇಲ್ಲ. ಕೇಂದ್ರೀಯ ವಿದ್ಯಾಲಯಗಳಲ್ಲಿ ಇರುವ ಗುಣಮಟ್ಟದ ಶಿಕ್ಷಣವು ಸರಕಾರಿ ಶಾಲೆಗಳಲ್ಲಿ ಲಭಿಸುತ್ತಿಲ್ಲ. ಇನ್ನುಳಿದಂತೆ ಖಾಸಗಿ ಕಾಲೇಜುಗಳ ಸ್ಥಿತಿ ಬೇರೆಯೇ ಇದೆ ಎಂದರು.

ಸಮಾಜದಲ್ಲಿನ ಬಲಾಢ್ಯರ ಸಂಸ್ಕೃತಿಯನ್ನು ಎಲ್ಲರ ಮೇಲೆ ಹೇರಲಾಗುತ್ತಿದೆ. ಶಿಕ್ಷಣ ನಾಯಕತ್ವವನ್ನು ಹುಟ್ಟು ಹಾಕುವುದರ ಬದಲಾಗಿ ಕಾರ್ಮಿಕರನ್ನು ಹುಟ್ಟಿ ಹಾಕುತ್ತಿದೆ. ಬಹು ಸಂಸ್ಕೃತಿಯನ್ನು ಹೊಂದಿರುವ ರಾಷ್ಟ್ರ ನಮ್ಮದು. ವಿವಿಧತೆಯಲ್ಲಿ ಏಕತೆಯನ್ನು ಸಾರುವ ಘೋಷಣೆಗಳನ್ನು ದೇಶಾದ್ಯಂತ ಎಸ್‌ಎಫ್‌ಐ ವಿದ್ಯಾರ್ಥಿ ಸಂಘಟನೆ ಎತ್ತಿ ಹಿಡಿಯುತ್ತಿದೆ. ಅಂತಹ ಸಂಘಟನೆಗೆ ನೀವು ಸೇರಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಭಾರತಕ್ಕೆ ನೈಜ ನಾಯಕತ್ವದ ಕೊರತೆಯಿದ್ದು, ವಿದ್ಯಾರ್ಥಿ ಚಳುವಳಿ ನೈಜ ನಾಯಕತ್ವವನ್ನು ಬೆಳೆಸಬೇಕಿದೆ. ನಾಯಕತ್ವ ಗುಣಗಳನ್ನು ಯುವ ಸಮುದಾಯದ ನಡುವೆ ಬಿತ್ತರಿಸಬೇಕಾಗಿದೆ. 'ಸಿಂಪತಿ' ನಾಯಕತ್ವ ನಿಜವಾದ ಗುಣವಲ್ಲ. ಮತ್ತೊಬ್ಬರ ಜಾಗದಲ್ಲಿ ನಿಂತು ಯೋಚಿಸುವುದೇ ನಾಯಕತ್ವದ ಬಹು ದೊಡ್ಡ ಗುಣ. ಸತ್ಯ ಯಾವುದು?, ಬಹುತೇಕರ ಆಸಕ್ತಿಗೆ ಪೂರಕವಾದದ್ದು ಯಾವುದು? ಯಾರ ಮೇಲೆ ದಬ್ಬಾಳಿಕೆಗಳು ಆಗುತ್ತಿವೆ. ಯಾರ ಮೇಲೆ ಯಜಮಾನಿಕೆ ಆಗುತ್ತಿದೆ?, ಏನು ಅನ್ಯಾಯಗಳು ಆಗುತ್ತಿದೆ?, ಎನ್ನುವ ಅರಿವು ಮತ್ತು ಅನ್ಯಾಯವನ್ನು ಪ್ರಶ್ನಿಸುವ ಧೈರ್ಯ ಮತ್ತು ಪ್ರಾಮಾಣಿಕತೆ ನಾಯಕನಿರಬೇಕು" ಎಂದು ತಿಳಿಸಿದರು.

"ನಾಯಕನಿಗೆ ಮತ್ತೊಬ್ಬರನ್ನು ಅರ್ಥ ➚

ಬಿಬಿಎಂಪಿ ಕಸದ ಲಾರಿಗೆ ಇನ್ನೆಷ್ಟು ಬಲಿ ಬೇಕು!

ಸಿಲಿಕಾನ್ ಸಿಟಿಯಲ್ಲಿ ಬಿಬಿಎಂಪಿ ಕಸದ ಲಾರಿ ಡಿಕ್ಕಿ ಹೊಡೆದು ಪದೇ ಪದೇ ಅಪಘಾತ ಸಂಭವಿಸುತ್ತಿದೆ. ವಾರಕ್ಕೊಂದರಂತೆ ದುರ್ಘಟನೆಗಳು ನಡೆಯುತ್ತಿವೆ. ಬಿಬಿಎಂಪಿ ಕಸದ ವಾಹನಗಳು 'ಕಿಲ್ಲರ್ ಲಾರಿಗಳು' ಎಂಬ ಕುಖ್ಯಾತಿಯನ್ನು ಪಡೆದಿವೆ. ಬಿಬಿಎಂಪಿ ಲಾರಿಗಳನ್ನು ನೋಡಿದರೆ ಭಯವಾಗುವ ವಾತಾವರಣ ಸೃಷ್ಟಿಯಾಗಿದೆ. ಒಂದೇ ತಿಂಗಳಲ್ಲಿ ನಾಲ್ಕು ಜನರನ್ನು ಬಿಬಿಎಂಪಿ ಲಾರಿಗಳು ಬಲಿ ಪಡೆದಿವೆ ಎಂದರೆ ರಸ್ತೆಯಲ್ಲಿ ಪಾದಚಾರಿಗಳು, ದ್ವಿಚಕ್ರ ವಾಹನ ಸವಾರರು ಓಡಾಡುವುದಾದರೂ ಹೇಗೆ? ಎಂಬ ಪ್ರಶ್ನೆ ಸಾರ್ವಜನಿಕರಿಂದ ಬರುತ್ತಿದೆ.

ಗುರುರಾಜ ದೇಸಾಯಿ

ಬೆಂಗಳೂರಿನಲ್ಲಿ ಕಸದ ಲಾರಿಗಳು ಹೇಗಂದರೆ ಹಾಗೇ ಚಲಿಸುವ ಮೂಲಕ ಜನರ ಪ್ರಾಣವನ್ನು ತೆಗೆಯುತ್ತಿವೆ. ಬಿಬಿಎಂಪಿಯ ಅಧಿಕೃತ ಮಾಹಿತಿಯ ಪ್ರಕಾರ ಒಂದು ತಿಂಗಳಲ್ಲಿ ನಾಲ್ಕರಿಂದ ಐದು ಅಪಘಾತಗಳು ಸಂಭವಿಸುತ್ತಿವೆ. ಈ ಅಪಘಾತಗಳು ಸಂಭವಿಸಿದಾಗಲೆಲ್ಲ ಜನ ಆಕ್ರೋಶ ವ್ಯಕ್ತ ಪಡಿಸುತ್ತಲೇ ಇದ್ದಾರೆ. ಆದರೆ ಬಿಬಿಎಂಪಿ ಮಾತ್ರ ಇನ್ನೂ ಎಚ್ಚುತ್ತುಕೊಳ್ಳುತ್ತಿಲ್ಲ. ಸುರಕ್ಷತೆ ಇಲ್ಲದ ವಾಹನಗಳು, ತರಬೇತಿ ಇಲ್ಲದ ಚಾಲಕರು, ರಸ್ತೆ ನಿಯಮಗಳ ಉಲ್ಲಂಘನೆಯಂತಹ ಅಂಶಗಳು ಅಪಘಾತಕ್ಕೆ ಪ್ರಮುಖ ಕಾರಣವಾಗಿ ಸಿಗುತ್ತಿವೆ.

ಕಿಲ್ಲರ್ ಬಿಬಿಎಂಪಿ:

ಕಳೆದ ಮಾ.21 ರಂದು ಶಾಲೆ ಹೋಗುವ 14 ವರ್ಷದ ಬಾಲಕಿ ಅಕ್ಷಯಾ ರಸ್ತೆ ದಾಟುತ್ತಿದ್ದ ವೇಳೆ ಚಾಲಕ ನಿಯಂತ್ರಣ ತಪ್ಪಿದ ಪಾಲಿಕೆ ಕಸದ ವಾಹನ ಆಕೆಯ ಮೇಲೆ ಹರಿದ ಪರಿಣಾಮ ಸಾವನ್ನಪ್ಪಿದ್ದಳು. ಈ ಘಟನೆಗೆ ಪರಿಹಾರ ನೀಡಿ ಆಕೆಯ ಪೋಷಕರನ್ನು ಸಮಾಧಾನ ಪಡಿಸಿದ ಬೆನ್ನಲ್ಲೆ ಬಾಗಲೂರಿನಲ್ಲಿ ಮಾ.31 ರಂದು ರೇವಾ ಕಾಲೇಜ್ ಬಳಿ ಬಾಗಲೂರು ನಿವಾಸಿ ರಾಮಯ್ಯ ಮೇಲೆ ಕಸದ ಲಾರಿ ಹರಿದು ಮೃತಪಟ್ಟಿದ್ದರು.

ಈ ಎರಡೂ ಘಟನೆಗಳು ಮಾಸುವ ಮುನ್ನವೇ ಏಪ್ರಿಲ್ 18 ರಂದು ನಾಯಂಡಹಳ್ಳಿಯಲ್ಲಿ ಕಸದ ಲಾರಿ ಹರಿದು ಪದ್ಮಿನಿ ಸಾವನ್ನಪ್ಪಿದ್ದಾರೆ. ಬಿಬಿಎಂಪಿ ಕಸದ ಲಾರಿಗೆ ಮತ್ತೊಬ್ಬರು ಬಲಿಯಾಗಿದ್ದಾರೆ. ಮೇ 14 ರಂದು ಥಣಿ ಸಂದ್ರ ಮುಖ್ಯ ರಸ್ತೆಯಲ್ಲಿ ಕಸದ ಲಾರಿ ಹರಿದು ಡೆಲಿವರಿ ಬಾಯ್ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ನಡೆದಿದೆ. ಯಾದಗಿರಿ ಜಿಲ್ಲೆ ಸುರಪುರ ಮೂಲದ ದೇವಣ್ಣ(25) ಮೃತಪಟ್ಟ ವ್ಯಕ್ತಿ. ಬೈಕ್‌ಗೆ ಬಿಬಿಎಂಪಿ ಕಸದ ಲಾರಿ ಡಿಕ್ಕಿ ಹೊಡೆದ ಪರಿಣಾಮ ದಂಪತಿ ಮೃತಪಟ್ಟಿದ್ದಾರೆ. ಜು.9 ರಂದು ನಾಗರಬಾವಿ



ರಿಂಗ್ ರಸ್ತೆ ಸಮೀಪದ ಸರ್ವೀಸ್ ರಸ್ತೆಯಲ್ಲಿ ಅಪಘಾತ ಸಂಭವಿಸಿತ್ತು. ಮಾನಸ ನಗರ ಬಸ್ ನಿಲ್ದಾಣ ಕಡೆಯಿಂದ ಚಂದ್ರಾಲೇಔಟ್ ಕಡೆಗೆ ತೆರಳುತ್ತಿದ್ದ ಬಿಬಿಎಂಪಿ ಕಸದ ಲಾರಿ, ಮುಂದೆ ಹೋಗುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಮರಿಯಪ್ಪನ ಪಾಳ್ಯದ ವಿಜಯಕಲಾ (37) ಅದೇ ದಿನ ಚಿಕಿತ್ಸೆ ಲಿಸದೆ ಅಸ್ಪತ್ರೆಯಲ್ಲಿ ಮೃತಪಟ್ಟಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಪತಿ ಯೋಗೇಂದ್ರ (41) ಅವರಿಗೆ ಚಿಕಿತ್ಸೆ ಮುಂದುವರಿಸಲಾಗಿತ್ತಾದರೂ ಗುರುವಾರ ಅಸುನೀಗಿದ್ದಾರೆ.



ಈ ಎಲ್ಲಾ ಸಾವುಗಳು ಸಂಭವಿಸಿದ ನಂತರ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ಪದ್ಮಿನಿಯವರು ಮೃತರಾದ ನಂತರ ಅವರ ಮಕ್ಕಳು ಅನಾಥರಾಗಿದ್ದಾರೆ. ತಂದೆ ತಾಯಿ ಇಬ್ಬರನ್ನೂ ಕಳೆದುಕೊಂಡ ಮಕ್ಕಳ ಸಂಕಷ್ಟವನ್ನು ಕೇಳುವವರು ಯಾರೂ ಇಲ್ಲದಂತಾಗಿದೆ. ದುಡಿಮೆಗೆಂದು ವಲಸೆ ಬಂದಿದ್ದ ದೇವಣ್ಣ ಸಾವಿನಿಂದ ಕುಟುಂಬ ಬೀದಿಗೆ ಬಿದ್ದಿದೆ. ವಿಜಯಕಲಾ ಮತ್ತು ಯೋಗೇಂದ್ರ ದಂಪತಿ ಸಾವಿನ ನಂತರ ಅವರ ಕುಟುಂಬ ಕಣ್ಣೀರಿನಲ್ಲಿ ಕೈ ತೆಳೆಯುವಂತಾಗಿದೆ. ಬಿಬಿಎಂಪಿ ಒಂದಿಷ್ಟು ಪರಿಹಾರ ಘೋಷಿಸಿದ್ದು ಬಿಟ್ಟರೆ ಅವರಿಗೆ ಯಾವ ಸಹಾಯವೂ ಸಿಕ್ಕಿಲ್ಲ. ಘೋಷಣೆಯಾದ ಹಣವೂ ಇನ್ನೂ ಅವರನ್ನು ತಲುಪಿಲ್ಲ ಎಂಬ ಮಾಹಿತಿ ಇದೆ.

ಪಾದಚಾರಿ ಮಾರ್ಗದ ಕೊರತೆ:

ಪಾದಚಾರಿಗಳಿಗೆ ನಗರದಲ್ಲಿ ಪ್ರಾಮುಖ್ಯತೆಯೇ ಇಲ್ಲವಾಗಿದೆ. ರಸ್ತೆಗಳೆಂದರೆ ಕೇವಲ ವಾಹನಗಳ ಸಂಚಾರಕ್ಕೆ ಸೀಮಿತ ಎಂಬಂತೆ ಆಗಿದೆ. ಯಾವುದೇ ವಾಹನದಲ್ಲಿ ಹೋಗುವವರು ಮೊದಲಿಗೆ ಮತ್ತು ಕೊನೆಗೆ ಪಾದಚಾರಿಗಳೇ ಆಗಿರುತ್ತಾರೆ. ಮಹಿಳೆಯರು, ಮಕ್ಕಳು, ವೃದ್ಧರು, ಅಂಗವಿಕಲರು ರಸ್ತೆ ದಾಟುವುದೇ ಕಷ್ಟವಾಗಿದೆ. ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ(ಸಿಬಿಡಿ) ಟೆಂಡರ್ ಶ್ಯೂರ್ ರಸ್ತೆಗಳಲ್ಲಿ ಮಾತ್ರ ಪಾದಚಾರಿ ಮಾರ್ಗಗಳು ಉತ್ತಮವಾಗಿವೆ. ನಗರ ಹೊರ ವಲಯದಲ್ಲಿ ವಿಸ್ತಾರಗೊಳ್ಳುತ್ತಿದೆ. ಜಯನಗರ, ಬಸವನಗುಡಿ, ಮಲ್ಲೇಶ್ವರದಂತೆ ಯೋಜನಾಬದ್ಧವಾಗಿ ಬೆಳೆಯುತ್ತಿಲ್ಲ. ಹಳ್ಳಿಗಳೇ ನಗರವಾಗಿ ಮಗ್ಗಲು ಬದಲಿಸುತ್ತಿವೆ. ಅಲ್ಲಿಗೆ ಪೂರಕವಾದ ಬೇರೆ ರೀತಿಯ ಪಾದಚಾರಿ ಮಾರ್ಗಗಳನ್ನು ನಿರ್ಮಿಸುವತ್ತ ಗಮನ ಹರಿಸಬೇಕಿದೆ. ರಸ್ತೆ ಅಭಿವೃದ್ಧಿ ಬದಲು ಪಾದಚಾರಿ ಮಾರ್ಗಗಳ ಅಭಿವೃದ್ಧಿಗೆ ಮೊದಲ ಆದ್ಯತೆ ದೊರೆಯಬೇಕಿದೆ. ಅದೇ ರೀತಿ ನಗರದಲ್ಲಿ ವಾಹನಗಳ ವೇಗಕ್ಕೂ ಕಡಿವಾಣ ಹಾಕಬೇಕಿದೆ.

ಚಾಲಕರಿಗೆ ತರಬೇತಿ ಅಗತ್ಯ:

ಬಿಬಿಎಂಪಿ ಕಸದ ಲಾರಿಗಳನ್ನು ಓಡಿಸುವ ಚಾಲಕರು ಪಾಲಿಕೆಯ ಗೈಡ್‌ಲೈನ್ಸ್ ಅನ್ನು ಚಾಲಕರು ಗಾಳಿಗೆ ತೂರಿದ್ದಾರಾ? ಎನ್ನುವ ಮಾತುಗಳು ಕೇಳಿ ಬರುತ್ತಿವೆ. ರಸ್ತೆಯಲ್ಲಿ ನಿಧಾನವಾಗಿ ಚಾಲನೆ ಮಾಡುವ ಬಗ್ಗೆ ವಿಶೇಷ ತರಬೇತಿ ಕೊಡುವ ಅಗತ್ಯವಿದೆ. ಬೇರೆ ವಾಹನಗಳು ಮತ್ತು ಜನರ ಪ್ರಾಣ ಲೆಕ್ಕಿಸದೆ ಚಾಲನೆ ಮಾಡುವವರ ಪರವಾನಗಿ ರದ್ದುಗೊಳಿಸಬೇಕು. ಅಲ್ಲದೇ ಲಾರಿಗಳು ಸುಸ್ಥಿತಿಯಲ್ಲಿ ಇವೆಯೇ ಎಂಬುದನ್ನೂ ಪರಿಶೀಲಿಸಬೇಕು. ಎಲ್ಲಾ ಕಾಂಪ್ಯಾಕ್ಟರ್, ಟಿಪ್ಪರ್‌ಗಳಿಗೆ ವೇಗ ನಿಯಂತ್ರಕಗಳನ್ನು ಅಳವಡಿಸಿರುವ ಕುರಿತು ಸಾರಿಗೆ ಪ್ರಾಧಿಕಾರ ದೃಢೀಕರಿಸಬೇಕು. ಈ ಬಗ್ಗೆ ಕಾರ್ಯಪಾಲಕ ಅಭಿಯಂತರರು ಹಾಗೂ ಟ್ರಾಫಿಕ್ ಪೊಲೀಸರೊಂದಿಗೆ ಚೆಕ್ಕಿಂಗ್ ಕೈಗೊಂಡು ವಾಹನ ಸಂಚಾರ ಯೋಗ್ಯವಾಗಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು.

ಚಾಲಕರ ಬಳಿ ಚಾಲನಾ ಪರವಾನಗಿ ಇದೆಯೇ ಎಂಬುದನ್ನು ಮೊದಲು ಪರೀಕ್ಷಿಸಬೇಕಿದೆ. ಸಾಮಾನ್ಯವಾಗಿ ಚಾಲಕರು ಬೈಕ್, ಕಾರು ಮತ್ತು ಟ್ರಾಕ್ಟರ್ ಓಡಿಸಬಹುದು. ಎಲ್‌ಎಂವಿ & ಟ್ರ್ಯಾಕ್ಟರ್ ಚಾಲನೆ ಲೈಸೆನ್ಸ್ ಮಾತ್ರ ಹೊಂದಿದ್ದಾನೆ. ಹೆವಿ ಮೋಟಾರ್ ವೆಹಿಕಲ್ ಲೈಸೆನ್ಸ್ ಹೊಂದಿಲ್ಲ ಎಂಬ ಮಾಹಿತಿ ಇದೆ. ಪ್ರಮುಖವಾಗಿ ಕಸದ ಲಾರಿಗಳು ಫ್ಲೈ ಓವರ್‌ಗಳ ಅಕ್ಕಪಕ್ಕದಲ್ಲಿ ಬಹಳ ವೇಗವಾಗಿ ಸಂಚರಿಸುತ್ತವೆ. ಇಂತಹ ಜಾಗದಲ್ಲಿ ಮಾರ್ಗ ಮಧ್ಯೆಯ ರಸ್ತೆ ವಿಭಜಕದ ಎತ್ತರ ಏರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ವೇಗದ ಮಿತಿಗೂ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಬೇಕಿದೆ. ಒಟ್ಟಾರೆ ಪಾದಚಾರಿಗಳು ಮತ್ತು ದ್ವಿಚಕ್ರ ವಾಹನ ಸವಾರರ ಪ್ರಾಣ ರಕ್ಷಣೆಯಾಗಬೇಕು.

ವೇಗಕ್ಕೆ ನಿಯಂತ್ರಣವೇ ಇಲ್ಲದೆ ಲಾರಿ ಚಾಲನೆ ಮಾಡುವುದರಿಂದ ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಸಾಮಾನ್ಯ ಜನರಿಗೆ ಪ್ರಾಣಕ್ಕೆ ಬೆಲೆಯೇ ಇಲ್ಲವಾಗಿದೆ. ಬಿಬಿಎಂಪಿ ಚಾಲಕರ ನಿರ್ಲಕ್ಷ್ಯ ಇದೇ ರೀತಿ ಮುಂದುವರಿದರೆ ಜನ ಕಾನೂನು ಕೈಗೆತ್ತಿಕೊಳ್ಳುತ್ತಾರೆ. ಅದಕ್ಕೆ ಅವಕಾಶ ಆಗದಂತೆ ಬಿಬಿಎಂಪಿ ಚಾಲಕರಿಗೆ ಅಧಿಕಾರಿಗಳು ಎಚ್ಚರಿಕೆ ನೀಡಬೇಕು ಮತ್ತು ಸುಸ್ಥಿತಿಯಲ್ಲಿರುವ ಲಾರಿಗಳನ್ನಷ್ಟೇ ರಸ್ತೆಗೆ ಇಳಿಸಬೇಕು. ಪಾದಚಾರಿಗಳು ರಸ್ತೆ ದಾಟಲು ಮತ್ತು ರಸ್ತೆ ಬದಿಯಲ್ಲಿ ಸುರಕ್ಷಿತವಾಗಿ ನಡೆದು ಸಾಗಲು ಅನುಕೂಲ ಆಗುವಂತೆ ಮಾರ್ಗಗಳನ್ನು ಕಲ್ಪಿಸಬೇಕು ಎನ್ನುತ್ತಾರೆ ಬಸವನಗುಡಿಯ ಅಟೋ ಡ್ರೈವರ್ ರಾಘವೇಂದ್ರ.

ವಾಹನ ಚಾಲಕರು ಜೋರಾಗಿ ವಾಹನವನ್ನು ಚಲಾಯಿಸುತ್ತಾರೆ. ಶಾಲಾ–ಕಾಲೇಜು ಇದೆ ಎಂದು ಗೊತ್ತಿದ್ದರೂ ಈ ರೀತಿ ಓಡಿಸುತ್ತಾರೆ. ಬಹುಷಃ ತರಬೇತಿ ಇಲ್ಲದ ಚಾಲಕರು ಇಲ್ಲವೆ ಕುಡಿದು ವಾಹನ ಚಲಾಯಿಸುವ ಚಾಲಕರ ಸಂಖ್ಯೆ ಹೆಚ್ಚಿರುವ ಕಾರಣ ಇಂತಹ ಅಪಘಾತಗಳು ನಡೆಯುತ್ತಿವೆ. ಕೇವಲ ಪರಿಹಾರ ನೀಡಿದರಷ್ಟೆ ಸಾಲದ, ಅವರ ಮೇಲೆ ಅವಲಂಬಿತರಾಗಿದ್ದ ಕುಟುಂಬಕ್ಕೆ ಕೆಲಸ ನೀಡುವುದು ಹಾಗೂ ಮಕ್ಕಳಿಗೆ ಶಿಕ್ಷಣಕ್ಕೆ ಸಹಾಯ ಮಾಡುವ ಯೋಜನೆಗಳು ಜಾರಿಗೆ ಬರಬೇಕು ಮುಖ್ಯವಾಗಿ ಇಂತಹ ಅಪಘಾತಗಳು ನಡೆಯದಂತೆ ಬಿಬಿಎಂಪಿ ಎಚ್ಚರಿಕೆ ವಹಿಸಬೇಕು ಎಂದೆನ್ನುತ್ತಾರೆ ಖಾಸಗಿ ಶಾಲಾ ಶಿಕ್ಷಕಿ ಜಿ. ರೂಪಾ.

ನಗರ ಪ್ರದೇಶದಲ್ಲಿ ವೇಗಕ್ಕೆ ನಿಯಂತ್ರಣವೇ ಇಲ್ಲದೆ ಲಾರಿ ಚಾಲನೆ ಮಾಡುವುದರಿಂದ ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಸಾಮಾನ್ಯ ಜನರಿಗೆ ಪ್ರಾಣಕ್ಕೆ ಬೆಲೆಯೇ ಇಲ್ಲವಾಗಿದೆ. ಬಿಬಿಎಂಪಿ ಚಾಲಕರ ನಿರ್ಲಕ್ಷ್ಯ ಇದೇ ರೀತಿ ಮುಂದುವರಿದರೆ ಜನ ಕಾನೂನು ಕೈಗೆತ್ತಿಕೊಳ್ಳುತ್ತಾರೆ. ಅದಕ್ಕೆ ಅವಕಾಶ ಆಗದಂತೆ ಚಾಲಕರಿಗೆ, ಬಿಬಿಎಂಪಿ ಅಧಿಕಾರಿಗಳು ಎಚ್ಚರಿಕೆ ನೀಡಬೇಕು ಮತ್ತು ಸುಸ್ಥಿತಿಯಲ್ಲಿರುವ ಲಾರಿಗಳನ್ನಷ್ಟೇ ರಸ್ತೆಗೆ ಇಳಿಸಬೇಕು. ಪಾದಚಾರಿಗಳು ರಸ್ತೆ ದಾಟಲು ಮತ್ತು ರಸ್ತೆ ಬದಿಯಲ್ಲಿ ಸುರಕ್ಷಿತವಾಗಿ ನಡೆದು ಸಾಗಲು ಅನುಕೂಲ ಆಗುವಂತೆ ಮಾರ್ಗಗಳನ್ನು ಕಲ್ಪಿಸಲು ಮುಂದಾಗಬೇಕಿದೆ.

ಮಾಡಿಕೊಳ್ಳುವ ಮನಸ್ಸು ಇರಬೇಕು. ಆದರೆ ಇಂದಿನ ನಾಯಕರೆನ್ನುವ ರಾಜಕಾರಣಿಗಳಲ್ಲಿ ಈ ಯಾವ ಗುಣಗಳು ಇಲ್ಲ. ನಮ್ಮ ಪ್ರಧಾನ ಮಂತ್ರಿಗಳು ಬೆಳಗಾವಿಯಲ್ಲಿ ನೆರೆಯಿಂದ ಜನ ಕಷ್ಟಪಡುತ್ತಿರುವಾಗ ಬೆಂಗಳೂರಿಗೆ ಬಂದು ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ದೆಹಲಿಗೆ ಮರಳುತ್ತಾರೆ. ಆದರೆ ಬೆಳಗಾವಿಯ ನೆರೆಪೀಡಿತ ಪ್ರದೇಶಗಳಿಗೆ ಭೇಟಿ ನೀಡಬೇಕೆಂದು ಅಲ್ಲಿನ ಜನರ ನೋವುಗಳಿಗೆ ಸ್ಪಂದಿಸಬೇಕೆಂದು ಅವರಿಗೆ ಅನಿಸಲೇ ಇಲ್ಲ" ಎಂದು ಟೀಕಿಸಿದರು.

ಪ್ರಾಸ್ತಾವಿಕ ಮಾತುಗಳನ್ನು ಆಡಿದ ವಿದ್ಯಾರ್ಥಿ ನಾಯಕಿ ಮಾಧುರಿ ಬೋಳಾರ್ ಜಿಲ್ಲೆಯಲ್ಲಿ ಕೆಲವೊಂದಿಷ್ಟು ವರ್ಷಗಳಿಂದ ವಿದ್ಯಾರ್ಥಿಗಳು ಧರ್ಮಗಳ ಆಧಾರದ ಮೇಲೆ ವಿಂಗಡನೆ ಆಗುತ್ತಿದ್ದಾರೆ. ಇದು ಜಿಲ್ಲೆಯ ಅಭಿವೃದ್ಧಿಗೆ ಅಂತಕಕಾರಿ ಬೆಳವಣಿಗೆ ಹಾಗಾಗಿ ವಿದ್ಯಾರ್ಥಿಗಳ ಮಧ್ಯೆ ಐಕ್ಯತೆಯನ್ನು ಬೆಸೆಯಲು ಹಾಗೂ ಎಲ್ಲಾ ವಿದ್ಯಾರ್ಥಿಗಳಿಗೂ ಸಮಾನ ಗುಣಮಟ್ಟದ ಶಿಕ್ಷಣ ಪಡೆಯಲು ನಾವುಗಳು ಜೊತೆಯಾಗಬೇಕು. ಇವುಗಳ ಬಗ್ಗೆ ಈ ಅಧ್ಯಯನ ಶಿಬಿರ ಚಿಂತನೆಗೆ ಹಚ್ಚಿ ವಿದ್ಯಾರ್ಥಿಗಳನ್ನು ಅರಿವು ಮೂಡಿಸಲಿದೆ ಎಂದು ಹೇಳಿದರು.



ಎಸ್‌ಎಫ್‌ಐ ಮಾಜಿ ಜಿಲ್ಲಾ ಮುಖಂಡ ಮನೋಜ್ ವಾಮಂಜೂರು, ಎಸ್‌ಎಫ್‌ಐ ರಾಜ್ಯ ಜಂಟಿ ಕಾರ್ಯದರ್ಶಿ ಭೀಮನಗೌಡ ಸುಂಕೇಶ್ವರಹಾಳ, ಮಾಧುರಿ ಬೋಳಾರ, ಜಿಲ್ಲಾ ಮುಖಂಡರಾದ ವಿನೀತ್ ದೇವಾಡಿಗ, ವಿನುಶ ರಮಣ ಉಪಸ್ಥಿತರಿದ್ದರು.

ಶಿಬಿರದಲ್ಲಿ ಶಿಕ್ಷಣ ಉಳಿಸಿ, ಸಂವಿಧಾನ ಉಳಿಸಿ, ಭಾರತ ಉಳಿಸಿ ಎಂಬ ಘೋಷಣೆಯಡಿಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ನಡೆಯಲಿರುವ ಜಾಥಾದ ಭಿತ್ತಿಪತ್ರವನ್ನು ಬಿಡುಗಡೆ ಮಾಡಿದರು.

ಜನಶಕ್ತಿ ಕನ್ನಡ ವಾರಪತ್ರಿಕೆ

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ
ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467



ಪುಕ್ಕ ತೊಯಿಸಿ ಬೆಂಕಿ ನಂದಿಸುವ ತೀಸ್ತಾ

2002ರಲ್ಲಿ ಗುಜರಾತಿನಲ್ಲಿ ಕೊಲೆಯಾದ 2000ಕ್ಕಿಂತ ಹೆಚ್ಚಿನ ಜನರ ಸಾವು ಸಂಭವಿಸಲೇ ಇಲ್ಲವೇ? ಹಾಗಾದರೆ ಅಪರಾಧಿಗಳಾರು? ಆಗ ಪ್ರಧಾನಿಯಾಗಿದ್ದ ವಾಜಪೇಯಿಯವರು ಸಹ ಬೇಸರದಿಂದ "ಜಾತಿ, ಮತ, ಧರ್ಮಗಳ ಭೇದವಿಲ್ಲದೆ ರಾಜಧರ್ಮವನ್ನು ಪಾಲಿಸಿ" ಎಂದು ಸೂಚ್ಯವಾಗಿ ಹೇಳಿದ್ದರು. ಗಲಭೆ, ದಂಗೆಗಳ ಸಮಯದಲ್ಲಿ ರಾಜ್ಯ ಸರ್ಕಾರದ ಜವಾಬ್ದಾರಿ ಏನು ಎಂಬುದನ್ನು ಸುಪ್ರೀ ಕೋರ್ಟು ಪ್ರಶ್ನಿಸುತ್ತಿಲ್ಲ. ಬದಲಾಗಿ ಸಂತ್ರಸ್ತರೊಂದಿಗೆ ಸಹಾಯಕ್ಕೆ ನಿಂತವರನ್ನೇ ಪ್ರಶ್ನಿಸುವುದು ಯಾವ ನ್ಯಾಯ?



ಡಾ.ಕೆ.ಷರೀಫಾ

ಸತ್ಯ ಬಿಚ್ಚಿಡಲು ಎಂಟೆದೆಯ ಛಾತಿ
ಅನ್ಯಾಯದ ವಿರುದ್ಧ ನ್ಯಾಯದ ಹೋರಾಟ
ಕೋಮುವಾದಿ ಬೆಂಕಿ ಆರಿಸುವ
ಸಂವಿಧಾನದ ಕಾಲಾಳುವೇ.
ಅಗ್ನಿಜ್ವಾಲೆಗಳು ದೇಶ ವ್ಯಾಪಿಸಿ,
ರಾಜಿಯಿಲ್ಲದ ಪುಟ್ಟ ಹಕ್ಕಿಯೇ
ಪುಕ್ಕ ತೊಯಿಸಿ ಬೆಂಕಿ ನಂದಿಸುವಾಸೆ
ಸಂವಿಧಾನದ ಪುಟ್ಟ ಕಾಲಾಳುವೆ.
ಧ್ಯಾನಸ್ಥ ಗುಬ್ಬಿಯ ಹೋರಾಟ
ಅನುದಿನವೂ ಹನಿ ಹನಿ ನೀರಾಟ
ರಾಜಿಯಿಲ್ಲದೇ ಹೋರಾಟ ಮಾಡಿದೆ
ನ್ಯಾಯಪಥದ ಪಯಣಿಗ ಗುಬ್ಬಿಯೇ.
ನಿನ್ನ ಬಂಧಿಸಲು ಸರಪಳಿ ಸಿಕ್ಕದು
ದಿಟ್ಟ ನ್ಯಾಯದ ಹೋರಾಟದಲ್ಲಿ
ಸತ್ಯಕ್ಕೆ ಯಾವತ್ತೂ ಗೆಲುವು ಕಟ್ಟಿಟ್ಟದ್ದು
ಸುಳ್ಳಿಗೆ ಇಂದಲ್ಲ ನಾಳೆ ಸೋಲು, ಸೋಲು, ಸೋಲು.

ಗುಜರಾತ್ ದಂಗೆಗಳಲ್ಲಿ ನೊಂದ ಸಂತ್ರಸ್ತರ ಪರವಾಗಿ ನಿಂತು ಅವರ ಹೊರಾಟದ ಕಿಡಿ ಆರದಂತೆ ನೋಡಿಕೊಂಡು ಸಂತ್ರಸ್ತರ ಸಂಗಾತಿಯಾಗಿ ನಿಂತವರು ತೀಸ್ತಾ ಸೆತಲ್ವಾಡ್. ವಿಶ್ವಸಂಸ್ಥೆಯ ಅಧಿಕಾರಿಯವರು ತೀಸ್ತಾರವರ ಬಂಧನದ ಬಗ್ಗೆ ಸರ್ಕಾರದ ಕ್ರಮವನ್ನು ಖಂಡಿಸಿ "ಮಾನವ ಹಕ್ಕುಗಳನ್ನು ರಕ್ಷಿಸುವುದು ಅಪರಾಧವಲ್ಲ" ಎಂದು ಹೇಳಿದ್ದಾರೆ. ವಿಶ್ವಸಂಸ್ಥೆಯ ಮಾನವ ಹಕ್ಕುಗಳ ರಕ್ಷಕ ವಿಶೇಷ ವರದಿಗಾರ್ತಿ ಮೇರಿ ಲಾಲರ್ ತೀಸ್ತಾ ಅವರ ಬಂಧನದ ಕುರಿತು ಆಳವಾದ ಕಳವಳ ವ್ಯಕ್ತಪಡಿಸುತ್ತಾ "ತೀಸ್ತಾ ದ್ವೇಷ ಮತ್ತು ತಾರತಮ್ಯದ ವಿರುದ್ಧ ಬಲವಾದ ಧ್ವನಿಯಾಗಿದ್ದಾರೆ" ಎಂದು ಹೇಳಿದ್ದಾರೆ. ರೋಮಿಲಾ ಥಾಪರ್ ರವರು "ನಿಮ್ಮಂತವರ ಸಂತತಿ ಹೆಚ್ಚಲಿ" ಎಂದು ಹಾರೈಸಿದ್ದಾರೆ. ಈ ರೀತಿಯ ಬಂಧನಗಳಿಗೆ ಹೆದರಿ ಪ್ರತಿಭಟನೆಗಳು ನಿಲ್ಲುವುದಿಲ್ಲ. ಅನ್ಯಾಯದ ವಿರುದ್ದ ನ್ಯಾಯದ ಹೋರಾಟ ಬಹಳ ಹಿಂದಿನದು.




ತೀಸ್ತಾ ಅವರ ತಾತ ಭಾರತದ ಮೊಟ್ಟ ಮೊದಲ ಅಟಾರ್ನಿ ಜನರಲ್ ಆಗಿದ್ದರು. ಮತ್ತು ತೀಸ್ತಾರವರ ಮುತ್ತಾತ ಜಲಿಯನವಾಲಾ ಬಾಗ್ ಹತ್ಯಾಕಾಂಡದ ವಿಚಾರಣೆ ನಡೆಸಿದ ಆಯೋಗದ ಸದಸ್ಯರಾಗಿದ್ದರು.

ಭಾರತದ ಆಳುವ ಸರ್ಕಾರ ಒಂದು ಕಡೆ ನಾಗರೀಕ ಮತ್ತು ಅಭಿವ್ಯಕ್ತಿ ಸ್ವಾತಂತ್ರದ ಪರ ಮಾತನಾಡುತ್ತಲೇ ಯಾವ ರೀತಿ ಸತ್ಯವನ್ನು ಮರೆಮಾಚುತ್ತಿದೆ ಮತ್ತು ಹತ್ತಿಕ್ಕುತ್ತಿದೆ ಎಂಬುದಕ್ಕೆ ಈ ಘಟನೆಯೇ ಉದಾಹರಣೆಯಾಗಿದೆ. ಜರ್ಮನಿಯಲ್ಲಿ ಪ್ರವಾಸದಲ್ಲಿರುವ ಭಾರತದ ಪ್ರಧಾನ ಮಂತ್ರಿ ಮೋದಿ ಒಂದು ಕಡೆಗೆ "ನಾಗರಿಕ ಸಮಾಜದ ಸ್ವಾತಂತ್ರ್ಯ ಮತ್ತು ಸಮಾಜದ ವಿವಿಧತೆಗೆ ಕಾವಲಾಗಿರಲು ಹಾಗೂ ಆನ್ ಲೈನ್, ಆಫ್ ಲೈನ್, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸಲು ಕರೆ ನೀಡಿರುವ ಹೇಳಿಕೆಗೆ ಭಾರತವೂ ಜಿ-7 ದೇಶಗಳು ಮತ್ತು ಇತರೆ ದೇಶಗಳೊಂದಿಗೆ ಸಹಿ ಹಾಕುತ್ತಲೇ "ದಬ್ಬಾಳಿಕೆ ಮತ್ತು ಹಿಂಸಾಚಾರದ ವಿರುದ್ಧ ನಿಂತಿರುವ ಪ್ರಜಾಸತ್ತಾತ್ಮಕ ವ್ಯವಸ್ಥೆಗಳ ಎಲ್ಲ ಧೈರ್ಯಶಾಲಿ ರಕ್ಷಕರನ್ನು ನಾವು ಪ್ರಶಂಸಿಸುತ್ತೇವೆ ಮತ್ತು ಜಾಗತಿಕವಾಗಿ ಪ್ರಜಾಸತ್ತಾತ್ಮಕ ಸಮಾಜಗಳ ಸುಸ್ಥಿರತೆಯನ್ನು ಉತ್ತಮಗೊಳಿಸಲು ಅಂತರ್ ರಾಷ್ಟ್ರೀಯ ಸಹಕಾರವನ್ನು ನಾವು ಹೆಚ್ಚಿಸುತ್ತೇವೆ" ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ. ತೀಸ್ತಾ, ಸುಧಾ ಭರದ್ವಾಜ, ಸ್ಟ್ಯಾನ್ ಸ್ವಾಮಿ, ಉಮರ್ ಖಾಲಿದ್, ಆನಂದ್ ತೇಲ್ತುಂಬ್ಡೆ, ಸಂಜೀವಕುಮಾರ, ಶ್ರೀಕುಮಾರ್, ಮತ್ತು ಇತ್ತೀಚಿಗೆ ಪತ್ರಕರ್ತ ಝುಬೈರ್ ಬಂಧಿತರಾಗಿದ್ದಾರೆ. ಇವರಾರೂ ಬಂಧನಕ್ಕೆ ಹೆದರುವವರಲ್ಲ.

2002ರ ಗುಜರಾತ ದಂಗೆಗಳ ಬಗ್ಗೆ ಎಸ್‌ಐಟಿ ಯಿಂದ ಮೋದಿಗೆ ಕ್ಲೀನ್ ಚೀಟ್ ಸಿಕ್ಕಿದೆ. ತೀಸ್ತಾ ಸೆತಲ್ವಾಡ್ ಎಂಭತ್ತೈದು ವರ್ಷದ ಝಕೀಯಾ ಜಾಫ್ರೀಯವರಿಗೆ ಮೋದಿಯ ವಿರುದ್ಧ ಉತ್ತೇಜಿಸಿದ್ದಾರೆಂದು ಕ್ಲೀನ್ ಚೀಟ್ ಬಂದ ಕೂಡಲೇ ಅಮಿತ್ ಷಾ ಸಂದರ್ಶನದಲ್ಲಿ ಹೇಳುತ್ತಾರೆ. ಆ ಕೂಡಲೇ ತೀಸ್ತಾ ಅವರನ್ನು ಬಂಧಿಸಲಾಗಿದೆ. ಕಾಂಗ್ರೆಸ್ ಪಕ್ಷದ ಪಾರ್ಲಿಮೆಂಟ್ ಸದಸ್ಯರಾದ ಎಹೆಸಾನ್ ಜಾಫ್ರಿಯವರನ್ನು ಭೀಕರವಾಗಿ ಹಾಡುಹಗಲೇ, ಗುಜರಾತಿನ ದಂಗೆಗಳಲ್ಲಿ ಕೊಂದು ಹಾಕಲಾಗಿತ್ತು. ಈ ಪ್ರಕರಣದಲ್ಲಿ ಸರಿಯಾದ ದಾಖಲೆಗಳಿಲ್ಲವೆಂದು ಆಪಾದಿತರಿಗೆ ಕ್ಲೀನ್ ಚೀಟ್ ನೀಡಲಾಗಿದೆ. ಇದರ ವಿರುದ್ಧ ಜಾಫ್ರೀಯವರ ಮಡದಿ 85 ವರ್ಷದ ಝಾಕಿಯಾ ಜಾಫ್ರೀ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಅದರ ಬಗ್ಗೆ ನ್ಯಾಯಮೂರ್ತಿ ಕನ್ವಲಕರ್ ನೇತೃತ್ವದ ಮೂರು ಸದಸ್ಯರ ಪೀಠ ಮೋದಿ ಮತ್ತವರ ಸಂಗಡಿಗರಿಗೆ ಕ್ಲೀನ್ ಚೀಟ್ ನೀಡಿರುವುದನ್ನು ಎತ್ತಿ ಹಿಡಿದಿದೆ. ಹಾಗಾದರೆ 2002ರಲ್ಲಿ ಕೊಲೆಯಾದ 2000ಕ್ಕಿಂತ ಹೆಚ್ಚಿನ ಜನರ ಸಾವು ಸಂಭವಿಸಲೇ ಇಲ್ಲವೇ? ಹಾಗಾದರೆ ಅಪರಾಧಿಗಳಾರು? ಗರ್ಭಿಣಿಯರ ಮೇಲೆ ಮಕ್ಕಳ ಮೇಲೆ ಸಾಮೂಹಿಕ ಅತ್ಯಾಚಾರ, ಗರ್ಭಿಣಿಯರ ಹೊಟ್ಟೆ ಸೀಳಿ ಲೋಕವನ್ನೇ ಕಾಣದ ಮಗುವಿಗೂ ಚುಚ್ಚಿ ಚುಚ್ಚಿ ಸಾಯಿಸಿ, ತ್ರಿಶೂಲಕ್ಕೆ ಸಿಕ್ಕಿಸಿ ಕುಣಿದವರೆಲ್ಲ ಅಪರಾಧಿಗಳಲ್ಲವೆ? ಪತ್ರಕರ್ತರು ಮಾನವ ಹಕ್ಕುಗಳ ಹೋರಾಟಗಾರರು ಜೈಲಿನಲ್ಲಿ ಅಪರಾಧಿಗಳಾಗಿರಬೇಕೆ?

ತೀಸ್ತಾ ಭಯೋತ್ಪಾದನೆಯ ಯಾವ ಕೆಲಸವನ್ನೂ ಮಾಡಿರಲಿಲ್ಲ. ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ರನ್ನು ಗುಜರಾತಿನ ಪೋಲೀಸರು ವಶಪಡಿಸಿಕೊಂಡಿದ್ದಾರೆ. ಭಯೋತ್ಪಾದನೆ ನಿಗ್ರಹ ದಳದವರು(ಎಟಿಎಸ್)ರವರು ದಿನಾಂಕ 25-6-2022 ರಂದು ಅವರನ್ನು ಬಂಧಿಸಿ ಅಹಮದಾಬಾದ್‌ಗೆ ಕರೆತಂದಿದ್ದಾರೆ. ಸುಪ್ರಿಂ ಕೋರ್ಟಿನ ಈ ತೀರ್ಮಾನವೂ ಸುಪ್ರಿಂ ಕೋರ್ಟ್ ತೀರ್ಮಾನಗಳಲ್ಲಿಯೇ ತಲೆತಗ್ಗಿಸುವ ತೀರ್ಮಾನವಾಗಿದೆ. ಇದು ಪ್ರಜಾಸತ್ತೆಗೊಂದು ದೊಡ್ಡ ಕಳಂಕವಾಗಿದೆ. ಇಂದಿನ ಈ ವ್ಯವಸ್ಥೆಯಲ್ಲಿ ನ್ಯಾಯ ಸಿಗುವುದು ದುಸ್ತರವಾಗುತ್ತಿದೆ.

"ಬೆಸ್ಟ್ ಬೇಕರಿ" ಪ್ರಕರಣದಲ್ಲಿ ಬಿಲ್ಕಿಸ್ ಬಾನು ಮೇಲೆ ಸಾಮೂಹಿಕ ಬಲತ್ಕಾರ ಮಾಡುತ್ತಾರೆ. ದಿನಾಂಕ 2002ರ ಫೆಬ್ರುವರಿ 28ರಂದು ಗುಲ್ಬರ್ಗ ಸೊಸೈಟಿಯಲ್ಲಿ ಕಾಂಗ್ರೆಸಿನ ಸಂಸದರಾದ ಎಹಸಾನ್ ಜಾಫ್ರಿಯವರು ಬಹುದೊಡ್ಡ ಮುಸ್ಲಿಂ ನಾಯಕರು. ಸುಮಾರು 69 ಜನರು ಅವರ ಮನೆಯಲ್ಲಿ ಆಶ್ರಯ ಪಡೆದಿದ್ದರು. "ಅವರನ್ನು ಬಿಟ್ಟು ಬಿಡಿ ನನಗೆ ಬೇಕಾದರೆ ಕೊಂದು ಬಿಡಿ" ಎಂದು ಯೆಹ್ಸಾನ್ ಜಾಫ್ರಿಯವರು ನಿಂತಾಗ ಅವರನ್ನು ಅವರ ಪತ್ನಿ ಝಕಿಯಾ ಜಾಫ್ರಿಯವರ ಮುಂದೆಯೇ ಕೊಚ್ಚಿ ಕೊಚ್ಚಿ ಕೊಂದು ಸಾಯಿಸಿ, ಮನೆಗೆ ಬೆಂಕಿ ಹಚ್ಚಲಾಗಿತ್ತು. ತನ್ನ ಸಹಾಯಕ್ಕೆ ನಿಂತಿದ್ದ ತೀಸ್ತಾರವರಿಗೆ ಝಕೀಯಾ ಜಾಫ್ರೀಯವರು "ನಿಮಗೆ ನನ್ನ ಸಲಾಂ" ಎನ್ನುತ್ತಾರೆ. ಆಗ ವಾಜಪೇಯಿಯವರು ಸಹ ಬೇಸರದಿಂದ "ಜಾತಿ, ಮತ, ಧರ್ಮಗಳ ಭೇದವಿಲ್ಲದೆ ರಾಜಧರ್ಮವನ್ನು ಪಾಲಿಸಿ" ಎಂದು ಸೂಚ್ಯವಾಗಿ ಹೇಳಿದ್ದರು. ಗಲಭೆ, ದಂಗೆಗಳ ಸಮಯದಲ್ಲಿ ರಾಜ್ಯ ಸರ್ಕಾರದ ಜವಾಬ್ದಾರಿ ಏನು? ಎಂಬುದನ್ನು ಸುಪ್ರೀ ಕೋರ್ಟು ಪ್ರಶ್ನಿಸುತ್ತಿಲ್ಲ. ಬದಲಾಗಿ ಸಂತ್ರಸ್ತರೊಂದಿಗೆ ಸಹಾಯಕ್ಕೆ ನಿಂತವರನ್ನೇ ಪ್ರಶ್ನಿಸುವುದು ಯಾವ ನ್ಯಾಯ? ಸರ್ಕಾರಿ ಅಂಕಿ ಸಂಖ್ಯೆಗಳ ಪ್ರಕಾರವೇ 1200 ಮುಸಲ್ಮಾನರನ್ನು ಹತ್ಯೆಗೈಯಲಾಗಿದೆ. ಜನಾಭಿಪ್ರಾಯದ ಪ್ರಕಾರ 3000 ಜನರನ್ನು ಹತ್ಯೆ ಮಾಡಲಾಗಿದೆ.



ಮಡಕೆ ಕುದಿಯುತ್ತಲೇ ಇರುವಂತೆ ಮಾಡಿದವರು ಯಾರು?
ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

ನಮ್ಮ ಪ್ರಧಾನಿ 25ನೇ ಜೂನ್ 2022ರಂದು ಜರ್ಮನಿಯಲ್ಲಿ "ಇಂದಿರಾಗಾಂಧಿಯವರು ಭಾರತದಲ್ಲಿ ತುರ್ತುಪರಿಸ್ಥಿತಿಯನ್ನು ಘೋಷಿಸಿ, ಪ್ರಜಾಸತ್ತೆಯನ್ನು ಸಾಯಿಸಿದ್ದರು. ಆದರೆ ಈಗ ಭಾರತದಲ್ಲಿ ಪ್ರಜಾಸತ್ತೆಯು ನಳನಳಿಸುತ್ತಿದೆ" ಎಂದು ಹೇಳುತ್ತಿರುವಾಗಲೇ ಭಾರತದ ಮಾನವ ಹಕ್ಕುಗಳ ಹೋರಾಟಗಾರ್ತಿ ತೀಸ್ತ್ ಸೆಟಲ್ವಾಡ್‌ರನ್ನು ಅವರ ಮೇಲೆ ಸೆಕ್ಷನ್ 194, 211, 218, 120(ಬಿ) ಗಳನ್ನು ಹೊರಿಸಿ ಬಂಧಿಸಲಾಗಿರುತ್ತದೆ. ಈ ಮೂಲಕ ಪ್ರಜಾಸತ್ತೆಗೆ ಇನ್ನೂ ದೊಡ್ಡ ಕಳಂಕ ತರುವ ನಡೆಯನ್ನು ಈ ಮೋದಿ ಸರ್ಕಾರ ಮಾಡಿದೆ. ಇಂತಹ ಬಹುದೊಡ್ಡ ಕಳಂಕಕ್ಕೆ ಕೋರ್ಟುಗಳೂ ಪಾತ್ರವಾಗಿವೆ. ಗುಜರಾತ್ ದಂಗೆಗೆ ಒಂದು ದಿನ ಮುಂಚೆ ಪೊಲೀಸ್ ಅಧಿಕಾರಿಗಳ ಸಭೆ ಕರೆದು "ಹಿಂದುಗಳು ತಮ್ಮ ಕೋಪವನ್ನು ಹೊರ ಹಾಕಲಿ" ಎಂದು ಗೋದ್ರಾದ ಸುಟ್ಟ ಶವಗಳ ಯಾತ್ರೆ ನಡೆಸಿ ಹಿಂದೂಗಳನ್ನು ಕೆರಳಿಸಿ, ಪೊಲೀಸರ ಕೈ ಬಾಯಿಗಳನ್ನು ಕಟ್ಟಿಹಾಕಿತು, ಎಂದು ಮೋದಿ ಹೇಳಿದ್ದರು ಎಂದು ಹೇಳಿಕೆ ನೀಡಿದ ಶ್ರೀಕುಮಾರ ಮತ್ತು ಸಂಜೀವ್ ಭಟ್‌ರವರನ್ನು ಜೈಲಿಗೆ ತಳ್ಳಿತು. ಈಗ ಪತ್ರಕರ್ತೆ ಮತ್ತು ಮಾನವ ಹಕ್ಕುಗಳ ಹೋರಾಟಗಾರ್ತಿ ತೀಸ್ತಾ ಹಾಗೂ ಒಂದು ಟ್ವೀಟ್‌ನ ಕಾರಣಕ್ಕೆ ಪತ್ರಕರ್ತ ಝುಬೈರ್‌ರನ್ನು ಬಂಧಿಸಲಾಗಿದೆ. ಇದು ನೀಡುವ ಸಂದೇಶವೇನು? ಅದು ಸಂಜೀವ್ ಭಟ್ ಆಗಲಿ, ಶ್ರೀಕುಮಾರ್ ಆಗಲಿ ಅಥವಾ ತೀಸ್ತಾರೇ ಆಗಲಿ; ಸತ್ಯ ನುಡಿಯದಿರಿ. ಸತ್ಯ ನುಡಿದವರಿಗೆ ಶಿಕ್ಷೆ ಕಾದಿಟ್ಟ ಬುತ್ತಿ ಎಂಬುದೇ ಸಂದೇಶ ಎಂದು ಜನ ಅರ್ಥ ಮಾಡಿಕೊಳ್ಳಬೇಕಾಗಿದೆ.

ಶಬನಮ್ ಹಾಷ್ಮಿಯರು ಹೇಳುವ ಪ್ರಕಾರ "ಜನರ ಗೆಳತಿಯಾಗಿ ಅವರಿಗೆ ನ್ಯಾಯಕ್ಕಾಗಿ ಹೋರಾಡುವ ತೀಸ್ತಾರವರಿಗೆ ಅಪರಾಧಿಯನ್ನಾಗಿಸುವ ಮತ್ತು ನಿಜವಾದ ಕ್ರಿಮಿನಲ್ ವ್ಯಕ್ತಿಗಳಿಗೆ ಕ್ಲೀನ್ ಚೀಟ್ ನೀಡುವ ನ್ಯಾಯಾಲಯದ ನೈತಿಕತೆ ಪ್ರಶ್ನಾರ್ಹವಾಗಿದೆ."





ಕಟ್ಟಡ ನಿರ್ಮಾಣ ಕಾರ್ಮಿಕರ ಹಕ್ಕುಗಳ ರಕ್ಷಣೆ ಸೌಲಭ್ಯಗಳಿಗಾಗಿ ಬಲಿಷ್ಟ ಚಳವಳಿ

ಕಾರ್ಮಿಕರ 4ನೇ ರಾಜ್ಯ ಸಮ್ಮೇಳನ ತೀರ್ಮಾನ

ಕಟ್ಟಡ ಉದ್ಯಮದ ಬೆಳವಣಿಗೆ ಜತೆಯಲ್ಲಿ ಕಾರ್ಮಿಕರ ಬದುಕು ರಕ್ಷಣೆಯಾಗಬೇಕು ಕಟ್ಟಡ ಕಾರ್ಮಿಕ ಕಾನೂನುಗಳು ಮತ್ತು ಕಲ್ಯಾಣ ಮಂಡಳಿಗಳು ಇನ್ನಷ್ಟು ಬಲಗೊಳ್ಳಬೇಕು.

ದೇಶದಲ್ಲಿ ಕಟ್ಟಡ ನಿರ್ಮಾಣ ಉದ್ಯಮವು ತೀವ್ರ ಗತಿಯಲ್ಲಿ ಬೆಳೆಯುತ್ತಿದೆ. ಕೇಂದ್ರ ಸರ್ಕಾರವು ನಿರ್ಮಾಣ ವಲಯದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ಮಾಡಿಕೊಟ್ಟಿದೆ ಇದರಿಂದಾಗಿ ನೂರಾರು ಬಿಲಿಯನ್ ಡಾಲರ್ ವಿದೇಶಿ ಬಂಡವಾಳ ನಿರ್ಮಾಣ ವಲಯದಲ್ಲಿ ಹರಿದು ಬರುತ್ತಿದೆ. ಇದರ ಪರಿಣಾಮ ನಮ್ಮ ದೇಶದಲ್ಲಿ ವಿದ್ಯುತ್, ರೈಲ್ವೆ, ರಾಷ್ಟ್ರೀಯ ಹೆದ್ದಾರಿ, ವಿಮಾನ ನಿಲ್ದಾಣ ಹಾಗೂ ರಿಯಲ್ ಎಸ್ಟೇಟ್ ವಲಯಗಳಲ್ಲಿ ಕೋವಿಡ್ ನಂತರದಲ್ಲಿ ನಿರ್ಮಾಣ ಚಟುವಟಿಕೆಗಳು ಮತ್ತೆ ಗರಿಗೆದರಿವೆ. ಆದರೆ ಅದೇ ವೇಳೆಗೆ ನಿರ್ಮಾಣ ವಲಯದಲ್ಲಿ ದುಡಿಯುತ್ತಿರುವ ದೇಶದ 7 ಕೋಟಿ ಕಾರ್ಮಿಕರ ಬದುಕು ಅಸುರಕ್ಷಿತವಾಗಿದೆ. ಮಾತ್ರವಲ್ಲ, ಕೋಟ್ಯಾಂತರ ಕಾರ್ಮಿಕರು ಮತ್ತು ಅವರ ಅವಲಂಬಿತರು ಸಾಮಾಜಿಕ ಭದ್ರತೆಯ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ ಎಂದು ಜೂನ್ 26–27 ರಂದು ತುಮಕೂರಿನಲ್ಲಿ ನಡೆದ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾ ಕಾರ್ಮಿಕ ಫೆಡರೆಷನ್ (ರಿ) ಆಯೋಜಿಸಿದ್ದ 4 ನೇ ರಾಜ್ಯ ಸಮ್ಮೇಳನವನ್ನು ತೀವ್ರ ಆತಂಕ ಮತ್ತು ಕಳಕಳಿಯನ್ನು ವ್ಯಕ್ತಪಡಿಸಿದೆ.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ 24 ಲಕ್ಷ ಕಾರ್ಮಿಕರು ನೊಂದಣಿಯಾಗಿದ್ದು 19 ಸೌಲಭ್ಯಗಳು ಘೋಷಿಸಲ್ಪಟ್ಟಿವೆ. ಈ ಎಲ್ಲ ಸೌಲಭ್ಯಗಳನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು, ಕೋವೀಡ್ ಪರಿಹಾರದ ಹೆಸರಲ್ಲಿ ನಡೆದಿರುವ ನೂರಾರು ಕೋಟಿ ಖರೀದಿಗಳ ಅವ್ಯವಹಾರವನ್ನು ತನಿಖೆಗೆ ಒಳಪಡಿಸಬೇಕು ಹಾಗೂ ಕಟ್ಟಡ ಕಾರ್ಮಿಕರಿಗಾಗಿ ಇರುವ ಎರಡು ಕಾನೂನುಗಳು ಮತ್ತು ಕಲ್ಯಾಣ ಮಂಡಳಿಯನ್ನು ರಕ್ಷಿಸಬೇಕೆಂದು ಸಮ್ಮೇಳನ ನಿರ್ಣಯ ಕೈಗೊಂಡಿದ್ದು ಈ ಬೇಡಿಕೆಗಳಿಗಾಗಿ ಇದೇ ಜುಲೈ 7 ರಂದು ರಾಜ್ಯಾದ್ಯಂತ ಕಟ್ಟಡ ಕಾರ್ಮಿಕರ ಹೋರಾಟಗಳನ್ನು ನಡೆಸಲು ನಿರ್ಧರಿಸಿದೆ.

ಬಹಿರಂಗ ಅಧಿವೇಶನ ಉದ್ಘಾಟನೆ:
ವಂಚಿತ ಸಮುದಾಯಗಳಿಗೆ ಕಾನೂನಿನ ರಕ್ಷಣೆ ಇಂದಿನ ಅಗತ್ಯ
ಕಾನೂನು ತಜ್ಞ ಡಾ ಸುರೇಶ ವಿ. ನಾಡಗೌಡರ್ ಅಭಿಮತ

ಜೂನ್ 26 ರ ಬೆಳಿಗ್ಗೆ ತುಮಕೂರು ನಗರದ ಗುಬ್ಬಿ ವೀರಣ್ಣ ಕಲಾ ಕ್ಷೇತ್ರದಲ್ಲಿ ನಡೆದ ಬಹಿರಂಗ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡಿದ ಬೆಂಗಳೂರು ಯೂನಿರ್ವಸಿಟಿ ಲಾ ಕಾಲೇಜಿನ ಪ್ರಾಂಶುಪಾಲ ಮತ್ತು ಡೀನ್ ಡಾ.ಸುರೇಶ ವ್ಹಿ ನಾಡಗೌಡರ್ ಅವರು ಕಾನೂನಾತ್ಮಕವಾಗಿ ದೊರೆಯಬೇಕಾದ ಸೌಲಭ್ಯಗಳಿಂದ ವಂಚಿತರವಾಗಿರುವ ಸಮುದಾಯಗಳನ್ನು ಗುರುತಿಸಿ, ಅವರಿಗೆ ಸರಕಾರದ ಸೌಲಭ್ಯಗಳು ದೊರೆಯುವಂತೆ ಮಾಡುವ ಗುರುತರ ಜವಾಬ್ದಾರಿ ಕಾನೂನು ಸೇವಾ ಪ್ರಾಧಿಕಾರಗಳ ಮೇಲಿದ್ದು, ಈ ನಿಟ್ಟಿನಲ್ಲಿ ಕಾನೂನು ಕಾಲೇಜುಗಳು ತಮ್ಮಲ್ಲಿರುವ ಕಾನೂನು ಸೇವಾ ವಿಭಾಗಗಳಿಂದ ಸಮರ್ಪಕವಾಗಿ ರಚಿಸಬೇಕಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.



ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (CWFI) ಅಖಿಲ ಭಾರತ ಉಪಾಧ್ಯಕ್ಷ ದೇಬಂಜನ್ ಚಕ್ರವರ್ತಿ ಮಾತನಾಡಿ, ನಮ್ಮ ಸಂವಿಧಾನದ ಕಲಂ 14 ದೇಶದ ಎಲ್ಲಾ ಪ್ರಜೆಗಳು ಸಮಾನರು ಎಂದು ಹೇಳುತ್ತದೆ. ಆದರೆ ಉದ್ಯಮಿಗಳು, ರಾಜಕಾರಣಗಳ ರೀತಿ ಕಾರ್ಮಿಕರು ಬದುಕಲು ಇಂದಿಗೂ ಸಾಧ್ಯವಾಗಿಲ್ಲ. ಸಂವಿಧಾನದ ಕಲಂ 19(1) ರ ಅಡಿಯಲ್ಲಿ ಕಾರ್ಮಿಕ ಸಂಘಟನೆ ಕಟ್ಟಿಕೊಳ್ಳಲು ಅವಕಾಶವಿದೆ. ಆದರೆ ಕೇಂದ್ರದ ನರೇಂದ್ರಮೋದಿ ನೇತೃತ್ವದ ಸರಕಾರ ಇದಕ್ಕೆ ಅವಕಾಶ ನೀಡುತ್ತಿಲ್ಲ. ಬದಲಾಗಿ ಕಾರ್ಮಿಕರ ಮುಷ್ಕರ ನಡೆಸುವಂತಿಲ್ಲ ಎಂಬ ಕಾಯ್ದೆಯನ್ನು ತಂದಿದೆ. ಇದರ ವಿರುದ್ದ ಹೋರಾಟ ಅನಿವಾರ್ಯ ಎಂದರು.

ಸಿಐಟಿಯು ರಾಜ್ಯ ಸಮಿತಿ ಅಧ್ಯಕ್ಷರಾದ ಎನ್. ವರಲಕ್ಷ್ಮಿ ಮುಖ್ಯ ಅತಿಥಿಗಳಾಗಿ ಹಾಗೂ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಫಡರೇಷನ್ ರಾಜ್ಯಾಧ್ಯಕ್ಷ ಎನ್. ವೀರಸ್ವಾಮಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ಜಿಲ್ಲಾ ಸಮಿತಿ ಅಧ್ಯಕ್ಷ ಸೈಯದ್ ಮುಜೀಬ್, ಪ್ರಧಾನ ಕಾರ್ಯದರ್ಶಿ ಬಿ. ಕಮಲ, cwfi ಜಿಲ್ಲಾಧ್ಯಕ್ಷ ಬಿ.ಉಮೇಶ್, ಸ್ವಾಗತಿಸಿ, ಲಿಂಗರಾಜು ಮಳವಳ್ಳಿ ಅವರು ನಿರೂಪಿಸಿ. ಸುರೇಶ್ ಕಲ್ಲಾಗಾರ್ ಅವರು ವಂದಿಸಿದರು. ವೇದಿಕೆಯಲ್ಲಿ ಸ್ವಾಗತ ಸಮಿತಿಯ ಗೋವಿಂದರಾಜು, ಖಲೀಲ್, ಗಂಗಾಧರ್, ಎನ್.ಕೆ ಸುಬ್ರಮಣ್ಯ ಮತ್ತಿತರರು ಇದ್ದರು.

ಸಮಾರಂಭದಲ್ಲಿ 75 ವರ್ಷ ತುಂಬಿದ ಹಿರಿಯ ಚಿಂತಕ, ಕೆ. ದೊರೆರಾಜು, CWFI ರಾಜ್ಯಾಧ್ಯಕ್ಷ ಎನ್. ವೀರಸ್ವಾಮಿ ಅವರನ್ನು ಸಮ್ಮೇಳನದಲ್ಲಿ ಅಭಿನಂದಿಸಲಾಯಿತು. ದೇಶದ ಸೌಹಾರ್ದತೆ–ಸಹಬಾಳ್ವೆ– ಸಾಮರಸ್ಯವನ್ನು ಹಾಳು ಮಾಡುತ್ತಿರುವ ಶಕ್ತಿಗಳನ್ನು ವಿರುದ್ದ–ಸೌಹಾರ್ಧತೆ ಸಾರುವ ಮಹಾನೀಯರ ಭಿತ್ತಿಪತ್ರವನ್ನು ಹಿಡಿದು ಸೌಹಾರ್ಧತಾ ಸಂದೇಶವನ್ನು ಸಾರಲಾಯಿತು. ಕಾರ್ಯಕ್ರಮಕ್ಕಿಂತ ಪೂರ್ವದಲ್ಲಿ ದಾವಣಗೆರೆ ರಂಗ ಅನಿಕೇತನ ತಂಡದ ದಿಂದ "ಇವಾ ನಿಮ್ಮವ" ನಾಟಕವನ್ನು ನಾಟಕವನ್ನು ಪ್ರದರ್ಶಿಸಲಾಯಿತು. ಸಮ್ಮೇಳನವನ್ನು ಸಂಸ್ಥಾಪನಾ ಅಧ್ಯಕ್ಷರಾದ ಬಿ. ಮಾಧವ ಹಾಗೂ ಇತೀಚಿಗೆ ಆಗಲಿದ ಸಂಘಟನೆ ಮುಖಂಡರಾದ ವಿಠ್ಠಲ ಪೂಜಾರಿ, ವೀರಮಣಿ ಸುಭಾಶ ಕೊಪ್ಪಿಕರ್, ಪುರುಷೋತ್ತಮ ಕಲಾಲಬಂಡಿ ಹಾಗೂ ಹೊನ್ನೂರು ತಿಮ್ಮಣ್ಣ ನೆನಪಿನಲ್ಲಿ ಆಯೋಜಿಸಲಾಗಿತ್ತು.

ಪ್ರತಿನಿಧಿ ಅಧಿವೇಶನ

ಜೂನ್ 26 ಮಧ್ಯಾಹ್ನ 4 ಗಂಟೆಗೆ ಉಪ್ಪಾರಹಳ್ಳಿಯಲ್ಲಿರುವ ಶ್ರೀಮತಿ ಮುಕ್ತಾಂಭಾ ಜಿ.ಎಸ್. ಪರಮಶಿವಯ್ಯ ಕಲ್ಯಾಣ ಮಂಟಪದಲ್ಲಿ ಧ್ವಜಾರೋಹಣದೊಂದಿಗೆ ಪ್ರತಿನಿಧಿ ಅಧಿವೇಶನಕ್ಕೆ ಚಾಲನೆ ನೀಡಲಾಯಿತು. ರಾಜ್ಯದ 25 ಜಿಲ್ಲೆಗಳನ್ನು ಪ್ರತಿನಿಧಿಸಿ 33 ಮಹಿಳೆಯರು ಸೇರಿದಂತೆ ಒಟ್ಟು 280 ಜನ ಪ್ರತಿನಿಧಿ ವೀಕ್ಷಕರು ಎರಡು ದಿನಗಳ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸಂಜೆ ಅಗಲಿದ ಗಣ್ಯರು ಹಾಗೂ ಜನ ಚಳವಳಿಯ ವಿವಿಧ ನಾಯಕರುಗಳಿಗೆ ಭಾವಪೂರ್ಣ ನಮನಗಳನ್ನು ಸಲ್ಲಿಸಲಾಯಿತು. ಬಳಿಕ ಎರಡು ದಿನಗಳ ಕಲಾಪ ನಡೆಸಲು ವಿವಿಧ ಸಮಿತಿಗಳನ್ನು ಆಯ್ಕೆ ಮಾಡಲಾಯಿತು.

ನಂತರ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ್ ನಾಲ್ಕು ವರ್ಷಗಳ ಅವಧಿಯ ಕರಡು ವರದಿಯನ್ನು ಚರ್ಚೆಗಾಗಿ ಸಭೆಯಲ್ಲಿ ಮಂಡಿಸಿದರು. ಈ ವರದಿಯು ಪ್ರಮುಖವಾಗಿ ಸಂಘಟನೆ ಹಾಗೂ ಲೆಕ್ಕಪತ್ರಗಳು, ಭಾರತದಲ್ಲಿ ಕಟ್ಟಡ ನಿರ್ಮಾಣ ಉದ್ಯಮ, ಕರ್ನಾಟಕ ರಾಜ್ಯದಲ್ಲಿ ನಿರ್ಮಾಣ ವಲಯ ಮತ್ತು ಕಾರ್ಮಿಕರ ಸ್ಥಿತಿ–ಗತಿ, 2017 ರ ಬಳಿಕ ನಮ್ಮ ಮಧ್ಯ ಪ್ರವೇಶ ಹಾಗೂ

ಹೋರಾಟಗಳು ಸಮ್ಮೇಳನದ ನಿರ್ಣಯಗಳು:

ಕಲ್ಯಾಣ ಮಂಡಳಿ ದಾಖಲಾತಿಗಳು ಮತ್ತು ಮಾಹಿತಿ ಹಕ್ಕು ಪ್ರತಿಗಳು ಇತ್ಯಾದಿಗಳನ್ನು ಒಳಗೊಂಡಿತ್ತು.

ಸಮ್ಮೇಳನವನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಪ್ರದಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ರಾಜ್ಯ ಉಪಾಧ್ಯಕ್ಷರಾದ ಡಾ: ಕೆ. ಪ್ರಕಾಶ್ ಹಾಗೂ ವಿವಿಧ ಕಟ್ಟಡ ಕಾರ್ಮಿಕ ಸಂಘದ ಧನಶೇಖರ್ ಹಾಗೂ ಅಪ್ಪಣ್ಣ ಮಾತನಾಡಿದರು.

ನೂತನ ಪದಾಧಿಕಾರಿಗಳ ಸಮಿತಿ:

ಸಮ್ಮೇಳನವು ಈ ಕೆಳಕಂಡ 27 ಜನರ ನೂತನ ರಾಜ್ಯ ಪದಾದಿಕಾರಿಗಳನ್ನು ಆಯ್ಕೆ ಮಾಡಿತು. ಮತು 51 ಜನರ ರಾಜ್ಯ ಫೆಡರೆಷನ್‌ನ್ನು ಸರ್ವಾನುಮತದಿಮದ ಆಯ್ಕೆ ಮಾಡಿತು. ಅಧ್ಯಕ್ಷರು: ಬಾಲಕೃಷ್ಣಶೆಟ್ಟಿ, ಕಾರ್ಯಧ್ಯಕ್ಷರು: ಬಿ. ಉಮೇಶ್, ಪ್ರಧಾನ ಕಾರ್ಯದರ್ಶಿ: ಕೆ.ಮಹಾಂತೇಶ್, ಖಜಾಂಚಿ: ಲಿಂಗರಾಜು.





ದ್ವೀಪರಾಷ್ಟ್ರದಲ್ಲಿ ನಿಲ್ಲದ ಜನ ಸಂಘರ್ಷ ಸರ್ವಾಧಿಕಾರಿ ಗೋಟಬೊಯಿ ಕುಟುಂಬ ಪರಾರಿ

ಶ್ರೀಲಂಕಾ ಗಂಭೀರ ರಾಜಕೀಯ, ಆರ್ಥಿಕ ಅರಾಜಕತೆಯಲ್ಲಿ ಸಿಲುಕಿದೆ. ದೇಶವನ್ನು ಈ ಸ್ಥಿತಿಗೆ ದೂಡಿದ ರಾಜಕಾರಣಿಗಳು ರಾತ್ರೋರಾತ್ರಿ ದೇಶದಿಂದ ಕಾಲ್ಕೀಳುತ್ತಿದ್ದಾರೆ. ಮೇಲಿಂದ ಮೇಲೆ ತುರ್ತು ಪರಿಸ್ಥಿತಿಗಳನ್ನು ಘೋಷಿಸಲಾಗುತ್ತಿದೆ. ಇದು ಅಲ್ಲಿನ ಜನತೆ ತತ್ತರಿಸುವಂತೆ ಮಾಡಿದೆ.

ಪ್ರಕಾಶ್ ಕಾರಟ್

ಜುಲೈ 9 ರಂದು ಹತ್ತಾರು ಸಾವಿರ ಜನ ಶ್ರೀಲಂಕಾದ ಅಧ್ಯಕ್ಷರ ಅರಮನೆ, ಅವರ ಕಾರ್ಯಾಲಯ ಮತ್ತು ಪ್ರಧಾನಿಯ ಅಧಿಕೃತ ನಿವಾಸಗಳಿಗೆ ಮುತ್ತಿಗೆ ಹಾಕಿ ವಶಪಡಿಸಿಕೊಳ್ಳುವ ಮೂಲಕ ಜನಶಕ್ತಿಯ ವಿರಾಟ್ ದರ್ಶನವಾಗಿದೆ. ಪೊಲೀಸ್ ಮತ್ತು ಸೇನೆಯ ಬಿಗಿ ಬಂದೋಬಸ್ತನ್ನು ಎಳ್ಳಷ್ಟೂ ಲೆಕ್ಕಿಸದೆ ಮುನ್ನುಗ್ಗಿದ ಲಕ್ಷಾಂತರ ಜನ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಹಿಳೆಯರೂ ಸೇರಿದಂತೆ 20 ಲಕ್ಷ ಜನ ಅಧ್ಯಕ್ಷ ಗೋಟಬಯ ರಾಜಪಕ್ಸ ಹಾಗೂ ರಾಜಪಕ್ಸ ಕುಟುಂಬದ ಸರ್ವಾಧಿಕಾರಿ–ಭ್ರಷ್ಟ ಆಡಳಿತವನ್ನು ಕೊನೆಗೊಳಿಸುವ ಸಂಕಲ್ಪದೊಂದಿಗೆ ದೇಶದ ನಾನಾ ಭಾಗಗಳಿಂದ ರಾಜಧಾನಿಗೆ ಬಂದಿದ್ದರು.

ಅಧ್ಯಕ್ಷರ ಅರಮನೆಯಿಂದ ಸೇನಾ ನೆಲೆಯೊಂದಕ್ಕೆ ಕರೆದೊಯ್ಯಲಾಗಿದ್ದ ಗೋಟಬಯ, ಜುಲೈ 13ರಂದು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಪ್ರಕಟಿಸಿದ್ದರು. ಅದೇ ದಿನ, ಅಂದರೆ ಜುಲೈ 13ರ ಮುಂಜಾನೆ ಗೋಟಬಯ ಮಿಲಿಟರಿ ವಿಮಾನವೊಂದರಲ್ಲಿ ಮಾಲ್ದೀವ್ಸ್‌ಗೆ ಪಲಾಯನ ಮಾಡಿದರು. ಇದರೊಂದಿಗೆ ಜನರ ಆಕ್ರೋಶಕ್ಕೆ ಗುರಿಯಾಗಿರುವ ರಾಜಪಕ್ಸ ಕುಟುಂಬದ ಒಂದು ಭಾಗ ಮುಗಿಯಿತು. ಆದರೆ ಪರಾರಿಯಾಗುವುದಕ್ಕೂ ಮೊದಲು ಗೋಟಬಯ, ಪ್ರಧಾನಿ ರನಿಲ್ ವಿಕ್ರಮಸಿಂಘೆಯನ್ನು ಕಾರ್ಯಕಾರಿ ಅಧ್ಯಕ್ಷರಾಗಿ ನೇಮಿಸಿದರು. ಇದು ಪ್ರಭುತ್ವದ ಮೇಲೆ ಹೇಗಾದರೂ ಮಾಡಿ ಒಂದಿಷ್ಟು ನಿಯಂತ್ರಣ ಸಾಧಿಸುವ ಹತಾಶ ಪ್ರಯತ್ನವಾಗಿತ್ತು. ಸರ್ವ ಪಕ್ಷಗಳ ಸರ್ಕಾರವೊಂದು ರಚನೆಯಾದ ತಕ್ಷಣವೇ ತಾನು ಪದತ್ಯಾಗ ಮಾಡುವುದಾಗಿ ವಿಕ್ರಮಸಿಂಘೆ ಪ್ರಮಾಣ ಮಾಡಿದ್ದರು. ಗೋಟಬಯ ರಾಜಿನಾಮೆ ನೀಡುವವರೆಗೆ ಅಧಿಕಾರದಲ್ಲಿ ಮುಂದುವರಿಯಲು ಕಾಲ ವಿಳಂಬ ಮಾಡುವ ತಂತ್ರ ಅದಾಗಿತ್ತು. ಶ್ರೀಲಂಕಾ ಸಂವಿಧಾನದ ಅನುಸಾರ ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಪ್ರಧಾನಿಯಾದವು ಹಂಗಾಮಿ ಅಧ್ಯಕ್ಷರಾಗಲು ಅವಕಾಶವಿರುವುದೇ ಇದಕ್ಕೆ ಕಾರಣ.

ವಿಕ್ರಮಸಿಂಘೆ ಹಂಗಾಮಿ ಅಧ್ಯಕ್ಷರಾಗಿರುವುದಕ್ಕೂ ಜನ ಆಕ್ರೋಶಗೊಂಡಿದ್ದಾರೆ. ಏಕೆಂದರೆ ದೇಶದ ಪ್ರಸಕ್ತ ಬಿಕ್ಕಟ್ಟಿಗೆ ರಾಜಪಕ್ಸರಂತೆ ವಿಕ್ರಮಸಿಂಘೆ ಕೂಡ ಅಷ್ಟೇ ಹೊಣೆಗಾರರು ಎನ್ನುವುದೇ ಜನರ ಸಿಟ್ಟಿಗೆ ಕಾರಣ. ಗೋಟಬಯರ ಸೋದರ ಮಹಿಂದ ರಾಜಪಕ್ಸ ಮೇ 9ರಂದು ರಾಜೀನಾಮೆ ನೀಡುವ ಅನಿವಾರ್ಯಕ್ಕೆ ಸಿಲುಕಿದ ನಂತರ ಸಂಸತ್ತಿನಲ್ಲಿ ಯುಎನ್‌ಪಿ ಪಕ್ಷದ ಏಕೈಕ ಪ್ರತಿನಿಧಿಯಾಗಿದ್ದ ವಿಕ್ರಮಸಿಂಘೆಯನ್ನು ಸಚಿವ ಸಂಪುಟದ ಮುಖ್ಯಸ್ಥರಾಗಿ, ಅಂದರೆ ಪ್ರಧಾನಿಯಾಗಿ ಗೋಟಬಯ ಆಯ್ಕೆ ಮಾಡಿದ್ದರು.

ರಾಜಪಕ್ಸರಂತೆ ಅಪಖ್ಯಾತಿಗೆ ಗುರಿಯಾಗಿದ್ದ ವಿಕ್ರಮಸಿಂಘೆ ತುರ್ತು ಪರಿಸ್ಥಿತಿ ಘೋಷಿಸಿದ್ದರು, ಸೇನೆಯನ್ನು ಕರೆಸಿ ಕಾನೂನು ಸುವ್ಯವಸ್ಥೆ ಸ್ಥಾಪನೆಗೆ ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಿ ಎಂದು ಆದೇಶ ನೀಡಿದರು. ಇದೇ ಸಂದರ್ಭದಲ್ಲಿ 'ಫ್ಯಾಸಿಸ್ಟ್ ಶಕ್ತಿಗಳು' ಅಧಿಕಾರ ಹಿಡಿಯಲು ಪ್ರಯತ್ನಿಸುತ್ತಿವೆ ಎಂದು ಆರೋಪಿಸಿದರು. ಆದರೆ ಜನರ ದೃಢ ಸಂಕಲ್ಪ ಮತ್ತೊಮ್ಮೆ ಪ್ರದರ್ಶನಗೊಂಡಿದ್ದು ಆಳುವ ವರ್ಗದ ತಂತ್ರಗಳನ್ನು ವಿಫಲಗೊಳಿಸಲಿದ್ದಾರೆ. ಜುಲೈ 9ರಂತೆ ಪ್ರತಿಭಟನಾ ನಿರತ ಜನ ಪ್ರಧಾನಿ ಕಚೇರಿಗೆ ಬೃಹತ್ ಸಂಖ್ಯೆಯಲ್ಲಿ ತೆರಳಿ ಸ್ವಾಧೀನ ಪಡಿಸಿಕೊಂಡರು. ಪೊಲೀಸರು ಹಾಗೂ ಸೈನಿಕರು ಸಿಡಿಸಿದ ನೂರಾರು ಟಿಯರ್ ಗ್ಯಾಸ್ ಶೆಲ್‌ಗಳನ್ನು ಲೆಕ್ಕಿಸದೆ ಮುನ್ನುಗ್ಗಿ ಪ್ರಧಾನಿ ಕಚೇರಿಯನ್ನು ವಶಪಡಿಸಿಕೊಂಡರು.

ಮಾರ್ಚ್ 31ರಂದು ಅರಗಲಯ (ಹೋರಾಟ) ಆರಂಭವಾಗಿ ನಾನಾ ವಿಭಾಗಗಳ ಜನ ರಾಷ್ಟ್ರಪತಿ ಕಾರ್ಯಾಲಯದ ಹೊರಗಿನ 'ಗಾಲೆ ಫೇಸ್ ಗ್ರೀನ್' ಬಳಿ ನೆರೆದು ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಪ್ರತಿರೋಧ ದಾಖಲಿಸಿದ್ದರು. ಆರ್ಥಿಕ ಬಿಕ್ಕಟ್ಟಿನಿಂದಾಗಿ ಆಹಾರ ಕೊರತೆ, ಇಂಧನ ಕೊರತೆ, ಗಗನಕ್ಕೇರಿರುವ ಹಣದುಬ್ಬರವನ್ನು ಖಂಡಿಸಿದರು.

ಆರ್ಥಿಕತೆ ಕುಸಿದು ವಿದೇಶಿ ಸಾಲ ಮರುಪಾವತಿಸಲಾಗದೆ ಸುಸ್ತಿಯಾಗಿದ್ದನ್ನು ವಿರೋಧಿಸಿ ಈ ಶಾಂತಿಯುತ ಚಳವಳಿ 'ಗೋಟಾ ಹೋ ಗಾಮ'(ಗೋತಾ ಮನೆಗೆ ಹೋಗು) ಘೋಷಣೆ ಮೂಲಕ ಗಾಲೆ ಫೇಸ್ ಮತ್ತು ಪ್ರಧಾನಿ ಮಹಿಂದ ರಾಜಪಕ್ಸರ ಅಧಿಕೃತ ನಿವಾಸದ ಮುಂದೆ ಜಮಾಯಿಸಿದ್ದರು.

ಪ್ರಧಾನಿ ಮಹಿಂದ ರಾಜಪಕ್ಸ ತನ್ನ ಪಕ್ಷದ ಗೂಂಡಾಗಳನ್ನು ಕರೆಸಿಕೊಂಡು ಪ್ರತಿಭಟನಕಾರರ ಮೇಲೆ ದಾಳಿ ನಡೆಸಿದ ಮೇ 9 ಪ್ರಮುಖ ತಿರುವು ಪಡೆದ ದಿನವಾಗಿದ್ದು ಪ್ರತಿಭಟನಕಾರರ ಮೇಲೆ ದಾಳಿ ನಡೆಸಿದರು. ಆದರೆ ಇದನ್ನು ಲೆಕ್ಕಿಸದ ಜನ ಪ್ರತೀಕಾರಕ್ಕೆ ಮುಂದಾಗಿದ್ದು ಮಹಿಂದ ರಾಜಪಕ್ಸರನ್ನು ಪ್ರಧಾನಿ ಹುದ್ದೆ ತ್ಯಜಿಸಲು ಕಾರಣವಾಯಿತು.

ಸಾಮೂಹಿಕ ಪ್ರತಿಭಟನಾ ಚಳವಳಿ ಎರಡು ಸಾರ್ವತ್ರಿಕ ಮುಷ್ಕರಗಳನ್ನು ಕಂಡಿತು. ಮೊದಲನೆಯದು ಕಾರ್ಮಿಕರದು ಮತ್ತು ಎರಡನೆಯದು ಎಲ್ಲ ಧರ್ಮಗಳ ಮುಖಂಡರು ಸೇರಿದಂತೆ ಸಮಾಜದ ಎಲ್ಲ ವಿಭಾಗಗಳ ಜನ ಪಾಲ್ಗೊಂಡಿದ್ದು. ಅಧಿಕಾರಕ್ಕೆ ಅಂಟಿಕೊಂಡಿರುವ ಗೋಟಬಯರ ಮೋಸದ ಪ್ರಯತ್ನಗಳು ಮೇ 9ರ ನಂತರ ರನಿಲ್ ವಿಕ್ರಮಸಿಂಘೆಯನ್ನು ಪ್ರಧಾನಿಯಾಗಿ ನೇಮಿಸುವ ಮೂಲಕ ಬಹಿರಂಗವಾಗಿತ್ತು. ಸಮಯಸಾಧಕತನದ ಪರಮಾವಧಿ ತೋರಿದ ವಿಕ್ರಮಸಿಂಘೆ ಆಳುವ ಶ್ರೀಲಂಕಾ ಪೊದುಜನ ಪೆರುಮನ (ಎಸ್‌ಎಲ್‌ಪಿಪಿ) ನೇತೃತ್ವದ ಸರ್ಕಾರದ ನಾಯಕತ್ವ ವಹಿಸಲು ತಕ್ಷಣವೇ ಒಪ್ಪಿಕೊಂಡರು. ಆದರೆ ಈ ತಂತ್ರ ಗೋಟಬಯರಿಗೆ ಅಲ್ಪಕಾಲವಷ್ಟೆ ಅವಕಾಶ ನೀಡಿತ್ತು.

ಸರಕಾರ ಎಷ್ಟೇ ಕಾನೂನುಬದ್ಧವಾಗಿದ್ದರೂ ಜನಸಮೂಹದ ಅತೃಪ್ತಿ ಹೆಚ್ಚಿದ್ದರಿಂದ ಜನತಾ ಚಳವಳಿ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಲು ಸೇನೆ, ಪೊಲೀಸರು ಮತ್ತು ನ್ಯಾಯಾಂಗ ಕೂಡ ಯಾವುದೇ ಕ್ರಮ ಕೈಗೊಳ್ಳಲು ನಿರಾಕರಿಸಿತ್ತು.

ರಾಷ್ಟ್ರಾಧ್ಯಕ್ಷರ ಮನೆ ಮುತ್ತಿಗೆ



ರಾಜಪಕ್ಸ ಕುಟುಂಬದ ಎರಡು ದಶಕಗಳ ರಾಜಕೀಯ ಹಿಡಿತದಿಂದ ಬಿಡಿಸಿಕೊಳ್ಳುವ ಅಂತಿಕ ಹಂತಕ್ಕೆ ಶ್ರೀಲಂಕಾ ತಲುಪಿದೆ. ಮೊದಲಿಗೆ ಮಹಿಂದ ರಾಜಪಕ್ಸ ಸಿಂಹಳ ಬೌದ್ಧ ಬಹುಸಂಖ್ಯಾತವಾದವನ್ನು ಪ್ರತಿಪಾದಿಸಿ ಸರ್ವಾಧಿಕಾರವನ್ನು ಕ್ರೋಢಕರಿಸಿದರು. ಕಾರ್ಯಕಾರಿ ಅಧ್ಯಕ್ಷ ಸ್ಥಾನವನ್ನು ತನ್ನ ಸರ್ವಾಧಿಕಾರ ಕೇಂದ್ರೀಕರಣಕ್ಕೆ ಬಳಸಿದರು. ಸರ್ಕಾರದ ಎಲ್ಲ ಹಂತಗಳಲ್ಲಿ ಭ್ರಷ್ಟ ಜಾಲವನ್ನು ರೂಪಿಸಿದರು.

ಗೋಟಬಯ ರಾಜಪಕ್ಸ 2019ರಲ್ಲಿ ಅಧ್ಯಕ್ಷರಾಗಿ ಆಯ್ಕೆಯಾದ ನಂತರ, ಶ್ರೀಲಂಕಾ ಸಂವಿಧಾನಕ್ಕೆ ಮಾಡಲಾದ 20ನೇ ತಿದ್ದುಪಡಿ ಕಾರ್ಯಕಾರಿ ಅಧ್ಯಕ್ಷರಿಗೆ ವ್ಯಾಪಕ ಅಧಿಕಾರಗಳನ್ನು ನೀಡಿತು. ಹಿರಿಯ ನ್ಯಾಯಮೂರ್ತಿಗಳ ನೇಮಕಾತಿ, ಚುನಾವಣೆ ಆಯೋಗ, ಪೊಲೀಸ್ ಆಯೋಗ ಹಾಗೂ ಭ್ರಷ್ಟಾಚಾರ ತನಿಖಾ ಆಯೋಗದ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಲು ಅದು ಅವಕಾಶ ಕಲ್ಪಿಸಿತು. ಅಣ್ಣ ಮಹಿಂದ ರಾಜಪಕ್ಸರನ್ನು ಪ್ರಧಾನಿಯಾಗಿ ನೇಮಕದ ಜೊತೆಗೆ ಅವರ ಸಹೋದರರು, ಕುಟುಂಬದ ಇತರ ಹಲವು ಸದಸ್ಯರನ್ನು ಪ್ರಮುಖ ಸಚಿವ ಖಾತೆಗಳು ಹಾಗೂ ಇತರ ಹುದ್ದೆಗಳಿಗೆ ನೇಮಿಸಿದರು. ದೇಶದ ಒಟ್ಟು ಬಜೆಟ್‌ನ ಶೇಕಡ 75ರಷ್ಟು ನೇರವಾಗಿ ರಾಜಪಕ್ಸ ಕುಟುಂಬದ ಸಚಿವರ ವ್ಯಾಪ್ತಿಯಲ್ಲಿತ್ತು. ಪ್ರಸಕ್ತ ಆರ್ಥಿಕ ಬಿಕ್ಕಟ್ಟಿಗೆ ಕೇವಲ ಹಣಕಾಸಿನ ತಪ್ಪು ನಿರ್ವಹಣೆ ಮತ್ತು ಕೆಟ್ಟ ನೀತಿಗಳು ಮಾತ್ರವಲ್ಲ ಹಣಕಾಸು ವ್ಯವಸ್ಥೆಯ ಎಲ್ಲ ಕ್ಷೇತ್ರಗಳಲ್ಲಿನ ತುಂಬಿರುವ ವ್ಯಾಪಕ ಭ್ರಷ್ಟಾಚಾರವೂ.

ಜುಲೈ 13ರ ಸಂಜೆ ಸ್ಪೀಕರ್ ಕರೆದಿದ್ದ ಸರ್ವ ಪಕ್ಷಗಳ ಸಭೆಯಲ್ಲಿ, ರನಿಲ್ ವಿಕ್ರಮಸಿಂಘೆ ರಾಜಿನಾಮೆ ನೀಡಬೇಕು ಹಾಗೂ ಸ್ಪೀಕರ್ ಕಾರ್ಯಕಾರಿ ಅಧ್ಯಕ್ಷರಾಗಬೇಕೆಂದು ನಿರ್ಧಾರವಾಯಿತು. ಸೇನಾ ಪಡೆಗಳು ಈ ಸಾಂವಿಧಾನಿಕ ಕ್ರಮವನ್ನು ಒಪ್ಪಿಕೊಳ್ಳಬೇಕು. ಸೇನೆ ರನಿಲ್‌ರ ಆದೇಶಗಳನ್ನು ಪಾಲಿಸಿದರೆ ಮತ್ತು ಪ್ರತಿಭಟನಕಾರರನ್ನು ಹತ್ತಿಕ್ಕಲು ಮುಂದಾದರೆ ಅಪಾಯಕಾರಿ ಪರಿಸ್ಥಿತಿ ಉದ್ಭವಿಸಲಿದೆ.

ಶ್ರೀಲಂಕಾ ಈಗಿನ ಪರಿಸ್ಥಿತಿಯಿಂದ ಹೊರಬರಲು ತುಂಬಾ ದೀರ್ಘ ದಾರಿ ಇದಾಗಿದೆ. ದೇಶದ ಬಹುತೇಕ ಮುಖ್ಯವಾಹಿನಿ ರಾಜಕೀಯ ವರ್ಗ ಜನರ ವಿಶ್ವಾಸವನ್ನು ಕಳೆದುಕೊಂಡಿರುವುದರಿಂದ ಸರ್ವಸಮ್ಮತ ಪ್ರಧಾನಿಯನ್ನು ಆಯ್ಕೆ ಮಾಡಿಕೊಂಡು ಸರ್ವ ಪಕ್ಷ ಸರ್ಕಾರ ರಚಿಸುವುದು ಅನಿವಾರ್ಯವಾಗಿದೆ. ಸರ್ವಾಧಿಕಾರಕ್ಕೆ ಮೂಲಹೇತುವಾದ ಕಾರ್ಯನಿರ್ವಾಹಕ ಅಧ್ಯಕ್ಷ ಸ್ಥಾನವನ್ನು ತೆಗೆದು ಹಾಕಲು ಸಂವಿಧಾನಕ್ಕೆ ತಿದ್ದುಪಡಿ ತರುವುದು ಮುಂದಿನ ಹೆಜ್ಜೆಯಾಗಬೇಕು.

ಆದರೆ ಮುಂದಿನ ಹಾದಿಯಲ್ಲಿ ಸಾಕಷ್ಟು ಅಡೆತಡೆ, ಅಡ್ಡಿ ಆತಂಕಗಳಿವೆ. ಪ್ರಸಕ್ತ ಸಂಸತ್ತಿನಲ್ಲಿ ರಾಜಪಕ್ಸರ ಎಸ್‌ಎಲ್‌ಪಿಪಿಯೇ ಮೇಲುಗೈ ಹೊಂದಿದೆ. ಜನರ ವಿಶ್ವಾಸ ಗಳಿಸುವ ಹೊಸ ಅಧ್ಯಕ್ಷರನ್ನು ಪಡೆಯುವುದು ದೊಡ್ಡ ಸವಾಲು. ಆರು ತಿಂಗಳ ನಂತರ ಹೊಸದಾಗಿ ಚುನಾವಣೆ ನಡೆಯಬೇಕಿದೆ. ಅಂತಿಮವಾಗಿ, ಆರ್ಥಿಕತೆಯನ್ನು ಪುನರ್ ನಿರ್ಮಾಣ ಮಾಡುವ ಕಷ್ಟಕರ ಸವಾಲು ಎದುರಿಗಿದೆ. ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಒದಗಿಸಿದ ನೆರವಿನ ಪ್ಯಾಕೇಜ್ ಹಲವು ಷರತ್ತುಗಳನ್ನು ಹೊಂದಿದೆ. ಕಠಿಣ ಮಿತವ್ಯಯ ಕ್ರಮ ಅನುಸರಿಸಬೇಕೆನ್ನುವುದು ಸಾಮಾನ್ಯವಾಗಿ ಬಹುಮುಖ್ಯ ಷರತ್ತಾಗಿರುತ್ತದೆ.

ಶ್ರೀಲಂಕಾ ಜನರಿಗೆ ಅರಗಾಲಯ ಇನ್ನೂ ಮುಗಿದಿಲ್ಲ. ಆದರೆ ಈವರೆಗೆ ಅವರು ಸಾಧಿಸಿರುವುದು ಜನಾಂಗೀಯ–ರಾಷ್ಟ್ರವಾದ ಹಾಗೂ ಕೋಮುವಾದಿ ಧ್ರುವೀಕರಣದ ಮೇಲೆ ಬೆಳೆಯುವ ಸರ್ವಾಧಿಕಾರಿ ಆಡಳಿತಗಳಿಗೆ ಎಚ್ಚರಿಕೆಯ ಗಂಟೆಯಾಗಿದೆ. ಹಾಗಿದ್ದರೂ ಜನ ಸುಮ್ಮನಿದ್ದಾರೆ ಎಂದು ಭಾವಿಸಿದರೂ ಸದಾ ಕಾಲ ನಿಮ್ಮ ಅಡಿಯಾಳಾಗಿ ಇರುವುದಿಲ್ಲ. ಒಂದಲ್ಲ ಒಂದು ದಿನ ಅವರು ನಿಮ್ಮನ್ನು ಎದುರಿಸಿಯೇ ಎದುರಿಸುತ್ತಾರೆ.

ಅನು: ವಿಶ್ವ

ದ್ವೇಷ ಭಾಷಣ, ಹಿಂಸಾಚಾರ ಮತ್ತು ಕೋರ್ಟ್ ಟಿಪ್ಪಣಿ



ನೂಪುರ್ ಶರ್ಮ ಮತ್ತು ಪ್ರವಾದಿಯ ವಿರುದ್ಧ ಆಕೆಯ ಹೇಳಿಕೆಯ ವಿರುದ್ಧ ಸುಪ್ರೀಂ ಕೋರ್ಟ್‌ನ, ತಡವಾಗಿಯಾದರೂ, ಸ್ವಾಗತಾರ್ಹವಾದ ಟಿಪ್ಪಣಿಗಳು, ದ್ವೇಷದ ಭಾಷಣ ಮತು ಅದರ ಪರಿಣಾಮಗಳ ನಡುವಿನ ನೇರ ಕೊಂಡಿಯನ್ನು ಕುರಿತಂತೆ ಒಂದು ಮಹತ್ವಪೂರ್ಣ ಅಂಶವನ್ನು ದಾಖಲಿಸಿವೆ. ಇದಕ್ಕೆ ಮೊದಲು ದೆಹಲಿ ಹೈಕೋರ್ಟ್ ತನ್ನ ಇತ್ತೀಚಿನ ಒಂದು ಆದೇಶದಲ್ಲಿ ದ್ವೇಷ ಭಾಷಣ ಮತ್ತು ತದನಂತರದ ಹಿಂಸಾಚಾರದ ನಡುವಿನ ಕೊಂಡಿಯನ್ನು ಹೆಚ್ಚು ಸ್ಪಷ್ಟವಾಗಿ ಗುರುತಿಸಿತ್ತು. ಮೊಹಮ್ಮದ್ ಜುಬೇರನ್ನು ಕೇಂದ್ರ ಗೃಹ ಮಂತ್ರಾಲಯದ ಅಡಿಯಲ್ಲಿರುವ ದಿಲ್ಲಿ ಪೋಲೀಸ್ ಬಂಧಿಸಿದ್ದು, ವಿವಿಧ ಕಿರುಕುಳಗಳಿಗೆ ಒಳಪಡಿಸುತ್ತಿರುವುದು, ಆತ ಟಿವಿಯಲ್ಲಿ ಶ್ರೀಮತಿ ಶರ್ಮಾ ಅವರ ಟಿಪ್ಪಣಿಗಳ ಕ್ಲಿಪ್ಪನ್ನು ಹಂಚಿಕೊಂಡದ್ದಕ್ಕೆ ಎಂಬುದು ರಹಸ್ಯ ಸಂಗತಿಯೇನಲ್ಲ. "ಶರ್ಮ ವಿರುದ್ಧ ಟಿಪ್ಪಣಿಗಳನ್ನು ಹಿಂತೆಗೆದುಕೊಳ್ಳಬೇಕು" ಎಂದು ಅವರ ಬೆಂಬಲಿಗರು ಮುಖ್ಯ ನ್ಯಾಯಾಧೀಶರಿಗೆ ಮನವಿ ಮಾಡಿವೆ. ಹಾಗಾದರೆ ಅದೊಂದು ದುಃಖದ ದಿನವಾಗಿರುತ್ತದೆ. ಸತ್ಯವನ್ನು ಅಳಿಸಿ ಹಾಕಲು ಸಾಧ್ಯವಿಲ್ಲ.

ಬೃಂದಾ ಕಾರಟ್

ಇಬ್ಬರು ನ್ಯಾಯಾಧೀಶರಿರುವ ಒಂದು ನ್ಯಾಯಪೀಠ ನ್ಯಾಯಾಲಯದಲ್ಲಿ ಕೆಲವು ಟಿಪ್ಪಣಿಗಳನ್ನು ಮಾಡುತ್ತದೆ. ಅದರ ವಿರುದ್ಧ ಒಬ್ಬ ವ್ಯಕ್ತಿ ಅವು ದುರುದ್ದೇಶದಿಂದ ಕೂಡಿವೆ ಎಂದು ಟೀಕಿಸುತ್ತಾನೆ. ಇದು ವೈಯಕ್ತಿಕ ಟೀಕೆಯೆಂದರೂ, ಸುಪ್ರಿಂ ಕೋರ್ಟಿನ ಒಬ್ಬ ನ್ಯಾಯಾಧೀಶರು ಅದರ ವಿರುದ್ಧ ನ್ಯಾಯಾಲಯವನ್ನು ರಕ್ಷಿಸಬೇಕಾಗಿ ಬಂದಿರುವುದು ನಿಜಕ್ಕೂ ಈಗ ಎಂತಹ ಸಮಯ ಬಂದಿದೆ ಎಂಬುದರ ಸಂಕೇತ.

ನ್ಯಾಯಾಧೀಶರು ಅಧಿಕಾರದಲ್ಲಿರುವವರಿಗೆ ಇಷ್ಟವಾಗದ ಟಿಪ್ಪಣಿಗಳನ್ನು ಮಾಡಿದರೆ ಎಂತಹ ಒತ್ತಡ ಅವರ ಮೇಲೆ ಬರುತ್ತದೆ ಎಂಬುದು ನೂಪುರ್ ಶರ್ಮ ಪ್ರಕರಣದಲ್ಲಿ ಸ್ಪಷ್ಟವಾಗಿ ಕಾಣ ಬಂದಿದೆ. ಗೃಹ ವ್ಯವಹಾರಗಳ ರಾಜ್ಯ ಸಚಿವರು ಬಹಳ ಚಾಣಾಕ್ಷತನ ತೋರಲು ಪ್ರಯತ್ನಿಸಿದರು. ನ್ಯಾಯಾಧೀಶರು ಮಾಡಿದ ಟಿಪ್ಪಣಿಗಳನ್ನು ಇಷ್ಟಪಡದಿದ್ದರೂ ತಾನು ಟಿಪ್ಪಣಿ ಮಾಡುವುದಿಲ್ಲ, ಬದಲಿಗೆ ಸೂಕ್ತ ರೀತಿಯಲ್ಲಿ ಎತ್ತಿಕೊಳ್ಳುತ್ತೇನೆ ಎಂದರು. ಇದು ನೀಡುವ ಸ್ಪಷ್ಟವಾದ, ಜೋರಾದ ಸಂದೇಶ ಎಂದರೆ, ಸರಕಾರಕ್ಕೆ "ಅಸಂತೋಷ"ವಾಗಿದೆ!

ಇದರ ಬೆನ್ನಹಿಂದೆಯೇ, ಸುಪ್ರಿಂ ಕೋರ್ಟನ್ನು ಅಕ್ಷರಶಃ ಖಂಡಿಸುವ, ಆ ಟಿಪ್ಪಣಿಗಳನ್ನು ಹಿಂತೆಗೆದುಕೊಳ್ಳಬೇಕೆಂದು ಆಗ್ರಹಿಸುವ ಹಲವು ಮಾಜಿ ನ್ಯಾಯಾಧೀಶರು ಮತ್ತು ಉನ್ನತಾಧಿಕಾರಿಗಳ ಬಹಿರಂಗ ಪತ್ರವೊಂದು ಪ್ರಕಟವಾಯಿತು. ಈ ಗಣ್ಯರು ಉತ್ತರಪ್ರದೇಶ ಮತ್ತು ಮಧ್ಯಪ್ರದೇಶದಲ್ಲಿ ಬೃಹತ್ ಧ್ವಂಸ ಕಾರ್ಯ ಮುಂತಾದ ಅಕ್ರಮಗಳಲ್ಲಿ ನ್ಯಾಯದ ಗರ್ಭಪಾತವಾಗುತ್ತಿದ್ದಾಗ ಎಲ್ಲಿ ಅಡಗಿಕೊಂಡಿದ್ದರೋ? ಕನಿಷ್ಟ ಈ ಪ್ರಕರಣದಲ್ಲಾದರೂ, ಸಂಬಂಧಪಟ್ಟ ನ್ಯಾಯಾಧೀಶರು ತಮ್ಮ ಸಹಯೋಗಿಗಳನ್ನು ರಕ್ಷಿಸುತ್ತಾರೆ ಎಂದು ಆಶಿಸೋಣ.

ಮಿತಿಮೀರಿದ ಅಧಿಕಾರಸ್ಥರ ಭಂಡತನ

ನೂಪುರ್ ಶರ್ಮ ಮತ್ತು ಪ್ರವಾದಿಯ ವಿರುದ್ಧ ಆಕೆಯ ಹೇಳಿಕೆಯ ವಿರುದ್ಧ ಸುಪ್ರೀಂ ಕೋರ್ಟ್‌ನ, ತಡವಾಗಿಯಾದರೂ, ಸ್ವಾಗತಾರ್ಹವಾದ ಟಿಪ್ಪಣಿಗಳು, ಈಗಲಾದರೂ ಆಕೆಯ ಬಂಧನದ ತಾರ್ಕಿಕ ಹೆಜ್ಜೆಗೆ ದಾರಿ ಮಾಡಿಕೊಡುತ್ತದೆಯೇ? "ಆಕೆ ದೇಶದ ಉದ್ದಗಲಕ್ಕೂ ಭಾವನೆಗಳನ್ನು ಹೊತ್ತಿಸಿದ ರೀತಿ..... ದೇಶದಲ್ಲಿ ಈಗ ಏನಾಗುತ್ತಿದೆಯೋ ಅದಕ್ಕೆ ಈ ಮಹಿಳೆಯೇ ಏಕೈಕ ಹೊಣೆ" ಎಂದು ನ್ಯಾಯಾಲಯದಲ್ಲಿ ಬಹಿರಂಗವಾಗಿಯೇ ಪೀಠ ಕಟುವಾದ ದೋಷಾರೋಪಣೆ ಮಾಡಿತು. ಸುಪ್ರಿಂ ಕೋರ್ಟ್ ಈ ಟಿಪ್ಪಣಿ ಮಾಡಿದ್ದು ಆಕೆಯ ವಿರುದ್ಧಧ ಎಲ್ಲ ಎಫ್‌ಐಆರ್‌ಗಳನ್ನು ಒಟ್ಟಾಗಿ ತೆಗೆದುಕೊಳ್ಳಬೇಕು ಎಂಬ ಆಕೆಯ ಅರ್ಜಿಯ ವಿಚಾರಣೆ ನಡೆಸುತ್ತಿದ್ದಾಗ. ಆಕೆ ತನ್ನ ಅರ್ಜಿಯನ್ನು ಹಿಂದಕ್ಕೆ ಪಡೆಯಲೇ ಬೇಕಾಗಿ ಬಂದಿದೆ.

ರಾಷ್ಟ್ರೀಯ ಟೆಲಿವಿಷನ್ ಮೇಲೆ ಈಕೆಯ ಹೇಳಿಕೆಯ ನಂತರ ಹಲವು ವಾರಗಳಾದರೂ, ಅದರ ವಿರುದ್ಧ ಹಲವಾರು ಎಫ್‌ಐಆರ್‌ಗಳನ್ನು ಹಾಕಲಾಗಿದ್ದರೂ, ಮೊಹಮ್ಮದ್ ಜುಬೇರನ್ನು ಕೂಡಲೇ ಬಂಧಿಸಿದ, ಕಿರುಕುಳ ಕೊಡುತ್ತಿರುವ ಅಮಿತ್ ಷಾ ರವರ ಪೋಲೀಸರ ಪತ್ತೆಯೇ ಇಲ್ಲ. ತಮ್ಮವರಿಗೆ ರಕ್ಷಣೆ ಒದಗಿಸುವ ಅಧಿಕಾರಸ್ಥರ ಭಂಡತನಕ್ಕೆ ಮಿತಿಯೇ ಇದ್ದಂತಿಲ್ಲ.

ಮೊಹಮ್ಮದ್ ಜುಬೇರನ್ನು ಕೇಂದ್ರ ಗೃಹ ಮಂತ್ರಾಲಯದ ಅಡಿಯಲ್ಲಿರುವ ದಿಲ್ಲಿ ಪೋಲೀಸ್ ಬಂಧಿಸಿದ್ದು, ವಿವಿಧ ಕಿರುಕುಳಗಳಿಗೆ ಒಳಪಡಿಸುತ್ತಿರುವುದು, ಆತ ಟಿವಿಯಲ್ಲಿ ಶ್ರೀಮತಿ ಶರ್ಮಾ ಅವರ ಟಿಪ್ಪಣಿಗಳ ಕ್ಲಿಪ್ಪನ್ನು ಹಂಚಿಕೊಂಡದ್ದಕ್ಕೆ ಎಂಬುದು ರಹಸ್ಯ ಸಂಗತಿಯೇನಲ್ಲ. ಸತ್ಯವನ್ನು ಮತ್ತು ದ್ವೇಷಕೋರತನವನ್ನು ಬಯಲು ಮಾಡಲು ಬದ್ಧನಾದ ಪತ್ರಕರ್ತನಾಗಿ ಆತ ಮಾಡಿದ್ದು ಸಂಪೂರ್ಣವಾಗಿ ಕಾನೂನುಬದ್ಧವಾದ ಮತ್ತು ತಾರ್ಕಿಕ ಹೆಜ್ಜೆಯೇ ಆಗಿತ್ತು. ಪೊಲೀಸರು ಈ ಪ್ರತೀಕಾರದ ಕಾರ್ಯಾಚರಣೆಯನ್ನು ಮರೆಮಾಚಲು ಪ್ರಯತ್ನಿಸಿದ್ದಾರೆ. ಅದಕ್ಕಾಗಿ ಹೃಷಿಕೇಶ ಮುಖರ್ಜಿಯವರು ಮಾಡಿದ ಒಂದು ಚಿತ್ರದ ದೃಶ್ಯವನ್ನು ಉಲ್ಲೇಖಿಸುವ 2018ರ ಒಂದು ಟ್ವೀಟನ್ನು ಹೆಕ್ಕಿ ತೆಗೆದಿದ್ದಾರೆ. ಜುಬೈರ್‌ನ ಆ ಟ್ವೀಟ್ ನಿಂದ ನಾಲ್ಕು ವರ್ಷಗಳ ಕಾಲ ಯಾವ "ಧಾರ್ಮಿಕ ಭಾವನೆ"ಗಳಿಗೂ ನೋವಾಗಿರಲಿಲ್ಲ, ಎಲ್ಲಿಂದಲೂ ಯಾವುದೇ ದೂರು ಬಂದಿರಲಿಲ್ಲ. ಈಗ ಇದ್ದಕ್ಕಿದ್ದಂತೆ, ಒಂದು ಸಾಮಾಜಿಕ ಮಾಧ್ಯಮ ಅಕೌಂಟ್ ತಯಾರಾಗುತ್ತದೆ, ಈ ಹಳೆಯ ಟ್ವೀಟ್ ಮೇಲೆ ದೂರು ಸಲ್ಲಿಸುತ್ತದೆ, ಮತ್ತು ದಿಲ್ಲಿ ಪೋಲಿಸ್ ಕೂಡಲೇ ಕಾರ್ಯಪ್ರವೃತ್ತರಾಗುತ್ತಾರೆ.

ನೂಪುರ್ ಶರ್ಮಾ ತನ್ನ ಟ್ರೋಲಿಂಗ್ ನಡೆಯಲು, ಹಲವಾರು ಕೊಲೆ ಬೆದರಿಕೆಗಳು ಬರಲು ಮೊಹಮ್ಮದ್ ಜುಬೇರನೇ ಕಾರಣ ಎಂದು ಬಲಪಂಥೀಯ ಸುದ್ದಿ ಪೋರ್ಟಲ್ 'ಒಪ್‌ಇಂಡಿಯ'



ಸಂದರ್ಶನವೊಂದರಲ್ಲಿ ದೂಷಿಸಿದ್ದರು. ಆಕೆಗೆ ಬಂದಿದೆ ಎನ್ನಲಾದ ಕೊಲೆ ಬೆದರಿಕೆಯ ಮೂಲಗಳನ್ನು ಪತ್ತೆ ಹಚ್ಚುವುದು ಮತ್ತು ಅವರ ವಿರುದ್ಧ ಕ್ರಮ ಕೈಗೊಳ್ಳುವುದು ಸೈಬರ್ ಅಪರಾಧಗಳ ಸೆಲ್‌ನ ಕೆಲಸ. ಖಂಡಿತವಾಗಿಯೂ ಕೊಲೆ ಬೆರಿಕೆಗಳನ್ನು ಸುಮ್ಮನೇ ಬಿಡಲು ಸಾಧ್ಯವಿಲ್ಲ, ಅದನ್ನು ನಿಲ್ಲಿಸಲು ಕ್ರಮ ಕೈಗೊಳ್ಳೇ ಬೇಕು. ಆದರೆ ಅದಕ್ಕೆ ಮೊಹಮ್ಮದ್ ಜುಬೈರ್ ಹೇಗೆ ದೋಷಿಯಾಗುತ್ತಾರೆ? ಆಕೆಯೇ ಸ್ವತಃ ರಾಷ್ಟ್ರೀಯ ಟೆಲಿವಿಷನ್‌ನಲ್ಲಿ ಹೇಳಿದ್ದನ್ನು ಆತ ಹಂಚಿಕೊಂಡಿದ್ದಾರೆ. ಅಲ್ಲದೆ ಆಕೆ ನಂತರ ಅದಕ್ಕೆ ಕ್ಷಮೆಯನ್ನೂ ಯಾಚಿಸಿದ್ದಾರೆ. ಈಗ, ಆಕೆಯ ಕ್ಷಮಾಯಾಚನೆ ಅರೆಮನಸ್ಸಿನದ್ದು, ಆಕೆ ಇಡೀ ದೇಶದ ಕ್ಷಮೆ ಕೇಳಬೇಕು ಎಂದು ಸುಪ್ರಿಂ ಕೋರ್ಟ್ ಹೇಳುತ್ತಿದೆ. ತಾವು ಪೂರ್ಣ ವಿಡೀಯೋವನ್ನು ನೋಡಿದ್ದೇವೆ ಎನ್ನುತ್ತಾ, ಆ ಇಡೀ ಕಾರ್ಯಕ್ರಮದ ಧ್ವನಿಯನ್ನೇ ನ್ಯಾಯಪೀಠ ಟೀಕಿಸಿದೆ. ಹಾಗಿದ್ದರೆ ನ್ಯಾಯಾಧೀಶರುಗಳು ಕೂಡ ಕೊಲೆ ಬೆದರಿಕೆಗಳನ್ನು ಪ್ರೋತ್ಸಾಹಿಸಿದ್ದಾರೆ ಎಂದು ಆರೋಪಿಸಬಹುದೇ?

ಸುಳ್ಳಿನ ಕಂತೆ–ಕೋಮುವಾದಿ ಪ್ರಚಾರ

ನೂಪುರ್ ಶರ್ಮಾಗೆ ಜುಬೈರನ್ನು ಹೆಸರಿಸಲು ಮತ್ತು ದೂರಲು ವೇದಿಕೆ ಒದಗಿಸಿದ ಅದೇ ಸುದ್ದಿ ಪೋರ್ಟಲ್ ಬಹಿರಂಗವಾಗಿಯೇ ನ್ಯಾಯಾಲಯದ ಟಿಪ್ಪಣಿಗಳನ್ನು ಅಪಾಯಕಾರಿಯಾಗಿ ಮತ್ತು ಉದ್ದೇಶಪೂರ್ವಕವಾಗಿ ತಿರುಚುವ ಕೆಲಸಕ್ಕೆ ಮುಂದಾಗಿದೆ. ಸುಪ್ರಿಂ ಕೋರ್ಟಿನ ಟಿಪ್ಪಣಿಗಳು ಪ್ರಕಟವಾದ ಕೂಡಲೇ ಬಂದ ಆ ಪೋರ್ಟಲ್‌ನ ಸಂಪಾದಕೀಯ ಡೆಸ್ಕ್‌ನ ಒಂದು ಲೇಖನ ಹೀಗೆ ಹೇಳುತ್ತದೆ: "ಸುಪ್ರಿಂ ಕೋರ್ಟ್ ಧರ್ಮಾಂಧರು ಇಸ್ಲಾಮಿನ ಹೆಸರಲ್ಲಿ ಎಸಗಿದ ಹಿಂಸಾಚಾರ ಮತ್ತು ಕೊಲೆಗೆ ಒಬ್ಬ ಮಹಿಳೆಯನ್ನು ಮಾತ್ರ ದೂಷಿಸಿರುವುದಷ್ಟೇ ಅಲ್ಲ" (ಸುಪ್ರೀಂ ಕೋರ್ಟ್ ಎಲ್ಲೂ ಹಿಂಸೆ, ಕೊಲೆ, ಮತಾಂಧರು ಅಥವಾ ಇಸ್ಲಾಂ ಎಂದು ಉಲ್ಲೇಖಿಸಿಲ್ಲ), ಮುಂದುವರೆದು "ಬೇರೆ ರೀತಿಯಲ್ಲಿ ಹೇಳುವುದಾದರೆ, ನ್ಯಾಯಮೂರ್ತಿ ಸೂರ್ಯಕಾಂತ್, ತನ್ನ ಮಟ್ಟಿಗೆ ಶರ್ಮಾ ಅವರು ಇಸ್ಲಾಮ್‌ವಾದಿಗಳನ್ನು 'ಉದ್ರೇಕಿಸುವ' ರೀತಿಯಲ್ಲಿ ಮಾತಾಡಿದ್ದು ಆಕೆಯ ತಪ್ಪೇ ಹೊರು, ತಾವು "ಧರ್ಮನಿಂದಕರು"ಎಂದು ಬಗೆಯುವ ಎಂದು ಯಾರದೇ ಆದರೂ ಶಿರಚ್ಛೇದನ ಮಾಡುವುದಾಗಿ ಬಹಿರಂಗವಾಗಿ ಘೋಷಿಸಿರುವ ಇಸ್ಲಾಮ್‌ವಾದಿಗಳ ತಪ್ಪಲ್ಲ ಎಂದು (ನ್ಯಾಯಾಲಯ ಎಂದೂ ಹೇಳದ ಪದಗಳನ್ನು ಅದರದೆಂದು ಇಲ್ಲಿ ಹೇಳಲಾಗಿದೆ) ಸ್ಪಷ್ಟಪಡಿಸಿದ್ದಾರೆ."

ಕೊನೆಯದಾಗಿ ಈ ಲೇಖನ "ಉದಯಪುರ ಕೊಲೆ, ಅಲ್ಲಿ ಹಿಂದೂ ವ್ಯಕ್ತಿಯೊಬ್ಬನನ್ನು ಶರ್ಮಾರನ್ನು ಬೆಂಬಲಿಸಿದ ಒಂದು ಸಾಮಾಜಿಕ ಮಾಧ್ಯಮದ ಪೋಸ್ಟನ್ನು ಹಂಚಿಕೊಂಡದ್ದಕ್ಕಾಗಿ ಸಾಯಿಸಿರುವುದು ಶರ್ಮಾರ ತಪ್ಪು ಎಂದು ಘೋಷಿಸಿರುವುದರಿಂದ, ಶರ್ಮಾರವರೇ ಸ್ವತಃ ಇಸ್ಲಾಮ್‌ವಾದಿಗಳು ಆಕೆಗೆ ಘೋಷಿಸಿದ ಹಿಂಸಾಚಾರಕ್ಕೆ ಬಲಿಯಾದರೆ, ಆಕೆ ಅದಕ್ಕೆ ಅರ್ಹಳಾಗಿದ್ದರು ಎಂದೇ ಈ ದೇಶದ ಸರ್ವೋಚ್ಚ ನ್ಯಾಯಾಲಯ ಹ್ ೀ ಳ್ ಬ ಹ್ ು ದ್ ೀ ನ್ ೂ ೀ" (ಓಪ್‌ಇಂಡಿಯ. ಕಾಂ). ಇದು ಕೇವಲ ಜನರನ್ನು ಕೋಮುವಾದೀ ದೃಷ್ಟಿಯಿಂದ ಪ್ರಚೋದಿಸುವ ಸುಳ್ಳಿನ ಕಂತೆ. ಖಂಡಿತವಾಗಿಯೂ, ನ್ಯಾಯಾಲಯದ ಟಿಪ್ಪಣಿಗಳಿಗೆ ಕೋಮುವಾದೀ ಬಣ್ಣ ಹಚ್ಚುವ ಇಂತಹ ಸುದ್ದಿ ಪೋರ್ಟಲಿನ ವಿರುದ್ಧ ಒಂದು ಪ್ರಕರಣ ದಾಖಲಿಸಬೇಕು. ಇದು ಕ್ರಿಮಿನಲ್ ನ್ಯಾಯಾಂಗ ನಿಂದನೆಗಿಂತಲೂ ಹೆಚ್ಚಾಗಿ, ನೇರವಾಗಿಯೇ ಉದ್ದೇಶಪೂರ್ವಕವಾದ ಕೋಮುವಾದೀ ಪ್ರತಿಕ್ರಿಯ್ರೆಯನ್ನು ಪ್ರಚೋದಿಸುತ್ತದೆ. ಈ ಪ್ರಶ್ನೆ ಉದ್ಭವಿಸುವುದು ಇವರೆಲ್ಲ ಮಹಾ ಪ್ರಭಾವ ಉಂಟು ಮಾಡುವವರು ಎಂಬುದಕ್ಕಲ್ಲ, ಇಂತಹ ಸಂಘ–ಸಂಸ್ಥೆಗಳು ರಾಜಕೀಯ ಕೃಪಾಪೋಷಣೆ ಮತ್ತು ಬಿಜೆಪಿ ಆಳ್ವಿಕೆಯ ಸರಕಾರಗಳಿಂದ ಉದಾರ ಜಾಹೀರಾತುಗಳ ಮೂಲಕ ಹಣಕಾಸುಗಳನ್ನು ಪಡೆಯುತ್ತಿವೆ ಎಂಬುದಕ್ಕಾಗಿ.

ಹಿಂಸಾಚಾರದ ನೇರ ಕೊಂಡಿ

ದುರದೃಷ್ಟವಶಾತ್, ಬಹಿರಂಗ ಕೋರ್ಟಿನಲ್ಲಿ ನ್ಯಾಯಾಲಯದ ಟಿಪ್ಪಣಿಗಳು ನೂಪುರ್ ಶರ್ಮಾ ತನ್ನ ಅರ್ಜಿಯನ್ನು ಹಿಂಪಡೆಯಲು ಅನುಮತಿ ನೀಡುವ ಅಂತಿಮ ಆದೇಶದಲ್ಲಿ ಪ್ರತಿಫಲಿಸಿಲ್ಲ. ಆದಾಗ್ಯೂ ನೂಪುರ್ ಶರ್ಮಾ ಪ್ರಕರಣವನ್ನೂ ಮೀರಿ ಹೋಗುವ ಈ ಟಿಪ್ಪಣಿಗಳು, ಸಾರ್ವತ್ರಿಕ ಸಂದರ್ಭದಲ್ಲಿ, ದ್ವೇಷದ ಭಾಷಣ ಮತು ಅದರ ಪರಿಣಾಮಗಳ ನಡುವಿನ ನೇರ ಕೊಂಡಿಯನ್ನು ಕುರಿತಂತೆ ಒಂದು ಮಹತ್ವಪೂರ್ಣ ಅಂಶವನ್ನು ದಾಖಲಿಸಿದೆ. ಇದಕ್ಕೆ ಮೊದಲು ದೆಹಲಿ ಹೈಕೋರ್ಟ್ ತನ್ನ ಇತ್ತೀಚಿನ ಒಂದು ಆದೇಶದಲ್ಲಿ ದ್ವೇಷ ಭಾಷಣ ಮತ್ತು ತದನಂತರದ ಹಿಂಸಾಚಾರದ ನಡುವಿನ ಕೊಂಡಿಯನ್ನು ಹೆಚ್ಚು ಸ್ಪಷ್ಟವಾಗಿ ಗುರುತಿಸಿತ್ತು. ಅದು "ದ್ವೇಷಭಾಷಣಗಳು ಗುರಿಯಿಟ್ಟಿರುವ ಸಮುದಾಯದ ವಿರುದ್ಧ ದಾಳಿಗಳ ಪ್ರಾರಂಭದ ಹಂತವಾಗಿದ್ದು, ಇವು ತಾರತಮ್ಯದಿಂದ ಹಿಡಿದುಬಹಿಷ್ಕಾರ, ಕೊಳೆಗೇರೀಕರಣ, ಗಡೀಪಾರು ಮತ್ತು ನರಮೇಧ ವರೆಗೂ ಹೋಗಬಹುದು" ಎಂದು ಹೇಳಿತ್ತು. ಇದು ಈ ಲೇಖಕರು ಬಿಜೆಪಿ ಸರಕಾರದ ಉನ್ನತ ಮತ್ತು ಚುನಾಯಿತ ವ್ಯಕ್ತಿಗಳ ವಿರುದ್ಧ ಅವರ ದ್ವೇಷ ಭಾಷಣಕ್ಕಾಗಿ ಹಾಕಿದ್ದ ಪುಟ 14 ಕ್ಕೆ



ಮುಗಿದ ಪೌರ ಕಾರ್ಮಿಕ ಮುಷ್ಕರ ಕಾರ್ಮಿಕರ ಸಮಸ್ಯೆಗಳಿಗೆ ಸಿಗುವುದೇ ಪರಿಹಾರ?



ಸೈಯದ್ ಮುಜೀಬ್

ನಾಗರಿಕ ಸಮಾಜದ ಮೂಲ ಭೂತ ಸೌಲಭ್ಯಗಳಾದ ಸ್ವಚ್ಚತೆ, ಕುಡಿಯುವ ನೀರು, ಬೀದಿ ದೀಪ, ಪಾರ್ಕ, ಸ್ಮಶಾಣಗಳನ ನಿರ್ವಾಹಣೆಗೆ ನಗರ–ಪಟ್ಟಣಗಳಲ್ಲಿ ದುಡಿಯುವ ಮುನಿಸಿಪಲ್ ಕಾರ್ಮಿಕರಲ್ಲಿ 70–80% ರಷ್ಟು ಜನರನ್ನು ಖಾಯಂಮೇತರರಾಗಿ ದುಡಿಸಲಾಗುತ್ತಿದೆ. ಈ ಕಾರ್ಮಿಕರ ಸೇವೆಗಳನ್ನು ಖಾಯಂ ಮಾಡಬೇಕೆಂದು ರಾಜ್ಯಾದ್ಯಂತ ಮುನಿಸಿಪಲ್ ಕಾರ್ಮಿಕರ ಸಂಘಟನೆಗಳ ಜಂಟಿ ಹೋರಾಟ ಸಮಿತಿ ಅಡಿಯಲ್ಲಿ 4 ದಿನಗಳ ಕಾಲ ಮುಷ್ಕರ ನಡೆಯಿತು. ಈ ಮುಷ್ಕರವು ಮಾನ್ಯ ಮುಖ್ಯ ಮಂತ್ರಿಗಳು 3 ತಿಂಗಳಲ್ಲಿ ನೇರ ಪಾವತಿ ಪೌರ ಕಾರ್ಮಿಕರಿಗೆ ಖಾಯಂಮಾಡುವ, ಬಿ.ಬಿ.ಎಂ.ಪಿ. ಹೊರತಾಗಿ ಬೇರೆ ಕಡೆ ಚಾಲ್ತಿಯಲ್ಲಿರುವ ಗುತ್ತಿಗೆ ಪದ್ದತಿಯನ್ನು ಹಂತ ಹಂತವಾಗಿ ನೇರ ಪಾವತಿಯಡಿಯಲ್ಲಿ ತರಲಾಗುವುದು ಎಂಬ ಲಿಖಿತ ಸಭಾ ನಡವಳಿಕೆಯ ಭರವಸೆಯ ಮೇಲೆ ಮುಷ್ಕರವನ್ನು ಹಿಂಪಡೆಯಲಾಗಿದೆ. ಪೌರ ಕಾರ್ಮಿಕರ ಖಾಯಂಮಾತಿಯ ಭರವಸೆ ಸ್ವಾಗತಾರ್ಹವಾದ್ದದು.

ಅದರೆ ನಾಗರಿಕ ಸಮಾಜದ ಆರೋಗ್ಯಕ್ಕಾಗಿ ತಮ್ಮ ಜೀವವನ್ನು ಪಣಕ್ಕಿಟ್ಟು ದುಡಿಯುವ ಈ ಮುನಿಸಿಪಲ್ ಕಾರ್ಮಿಕರನ್ನು ನೇರ ಪಾವತಿ, ಸಮಾನ ವೇತನ, ದಿನಗೂಲಿ, ಟೈಮ್ ಸ್ಕೆಲ್, ಗುತ್ತಿಗೆ/ ಹೊರಗುತ್ತಿಗೆ ಹೀಗೆ ವಿವಿಧ ಹೆಸರುಗಳಲ್ಲಿ ಕಡಿಮೆ ಕೂಲಿ ನೀಡಿ ಸೌಲಭ್ಯಗಳಿಂದ ವಂಚಿಸಲು ಬೇಕಾಗಿಯೇ ದುಡಿಸಲಾಗುತ್ತಿದೆ. ಎಲ್ಲಾ ಖಾಯಂಮೇತರ ಕಾರ್ಮಿಕರನ್ನು ಖಾಯಂ ಮಾಡುವದನ್ನು ಮಾಡದ ಸರ್ಕಾರ ಪೌರ ಕಾರ್ಮಿಕರ ಖಾಯಂ ಮಾಡುವ ಭರವಸೆ ನೀಡಿ ಉಳಿದಂತೆ ಸ್ವಷ್ಟವಾದ ನಿಲುಮೆ ತಾಳದೆ ಕಾರ್ಮಿಕರಲ್ಲಿ ಒಡಕು ಉಂಟುಮಾಡುವ ತಂತ್ರವನ್ನು ಅನುಸರಿಸಿದೆ. ಸರ್ಕಾರದ ಕುಟಿಲನೀತಿ ಹಿಂದೆ ಆಧಿಕಾರಿಗಳ ಕೈವಾಡವಿದೆ ಎಂದು ಸಂಘಟನೆಗಳ ಮುಖಂಡರು ಆರೋಪಿಸಿದ್ದರೆ ಸಾಲದು ಎಲ್ಲಾರ ಸೇವೆಗಳನ್ನು ಖಾಯಂ ಮಾಡಿಸಲು ಪ್ರಬಲ ಜಂಟಿ ಚಳುವಳಿ ಮುಂದುವರಿಯಬೇಕಾಗಿದೆ.

ನಾಗರಿಕ ಸಮಾಜದ ಮೂಲ ಭೂತ ಸೌಲಭ್ಯಗಳಾದ ಸ್ವಚ್ಚತೆ, ಕುಡಿಯುವ ನೀರು, ಬೀದಿ ದೀಪ, ಪಾರ್ಕ, ಸ್ಮಶಾಣಗಳ ನಿರ್ವಾಹಣೆಗೆ ನಗರ–ಪಟ್ಟಣಗಳಲ್ಲಿ ದುಡಿಯುವ ಮುನಿಸಿಪಲ್ ಕಾರ್ಮಿಕರಲ್ಲಿ 70–80% ರಷ್ಟು ಜನರನ್ನು ಖಾಯಂಮೇತರರಾಗಿ ದುಡಿಸಲಾಗುತ್ತಿದೆ. ಕರ್ನಾಟಕ ಸರ್ಕಾರವು ಪೌರಕಾರ್ಮಿಕರ ಸ್ಥಿತಿಗತಿಗಳ ಸುಧಾರಣೆಗಾಗಿ ಐಪಿಡಿ ಸಾಲಪ್ಪ ಅವರ ನೇತೃತ್ವದಲ್ಲಿ ಸಮಿತಿಯನ್ನು ಎಪ್ಪತ್ತರ ದಶಕದಲ್ಲೇ ನೇಮಿಸಿತ್ತು ಅದು ಅಧ್ಯಯನ ನಡೆಸಿ ಸಲ್ಲಿಸಿದ ವರದಿಯ ಪ್ರಸ್ತಾವನೆಯಲ್ಲಿ ಹೇಳಿರುವ ಮಾತುಗಳಿವು "ನಮ್ಮ ದೇಶ ರಾಜಕೀಯ ಮತ್ತು ತಂತ್ರಜ್ಞಾನದಲ್ಲಿ ಸಾಧನೆ ಮಾಡಿದ್ದರೂ ಪೌರಕಾರ್ಮಿಕರ ಸಮುದಾಯ ಹೀನಾಯ ಪರಿಸ್ಥಿತಿಯಲ್ಲಿರುವುದಕ್ಕೆ ಮುಖ್ಯ ಕಾರಣ ದಪ್ಪ ಚರ್ಮ, ಯಾವುದೇ ದೂರದೃಷ್ಟಿ ಇಲ್ಲದ ಅಮಾನವೀಯ ವಿಧಾನಗಳು ಹಾಗೂ ಸಾರ್ವಜನಿಕರ ಉಪೇಕ್ಷೆ ಮತ್ತು ಉದಾಸೀನತೆಯೇ ಆಗಿದೆ". 1976 ರಲ್ಲಿ ಬಂದ ವರದಿಯಲ್ಲಿ ಹೇಳಿರುವ ಈ ಮಾತುಗಳು ಇಂದಿಗೂ ವಾಸ್ತವವೇ ಆಗಿ ಉಳಿದಿದೆ. ಸಾಲಪ್ಪ ವರದಿಯು 500 ಜನಸಂಖ್ಯೆಗೆ ಒಬ್ಬರು ಪೌರಕಾರ್ಮಿಕರನ್ನು ನೇಮಕ ಮಾಡಲು ಶಿಫಾರಸ್ಸು ಮಾಡಿತ್ತು. ಆಗ ಇದ್ದ ಜನಸಂಖ್ಯೆ ಮತ್ತು ಬೀಳುತ್ತಿದ್ದ ಕಸಕ್ಕೆ ಅನುಗುಣವಾಗಿ ಆ ಶಿಫಾರಸ್ಸನ್ನು ಮಾಡಲಾಗಿತ್ತು. ಈಗ ಬೆಂಗಳೂರಿನ ಜನಸಂಖ್ಯೆ ಕೋಟಿ ದಾಟುತ್ತಿದೆ. ದಿನ ಒಂದರಲ್ಲಿ ಬೀಳುವ ಕಸ 5000 ಟನ್. ಕಾರ್ಮಿಕರ ಸಂಖ್ಯೆಯನ್ನು ಹೆಚ್ಚಿಸುವ ಬದಲಿಗೆ 700 ಜನರಿಗೆ ಒಬ್ಬರನ್ನು ನೇಮಕ ಮಾಡಿರುವುದು ಕೆಲಸದ ಹೊರೆಯನ್ನು ಸೂಚಿಸುತ್ತದೆ.

ಕರ್ನಾಟಕ ಸರ್ಕಾರವು 1973ರಲ್ಲಿಯೇ ಶ್ರೀ. ಬಿ. ಬಸವಲಿಂಗಪ್ಪನವರು ಪೌರಾಡಳಿತ ಸಚಿವರಾಗಿದ್ದಾಗ ಸರ್ಕಾರ ಮಲಬಾಚುವ ಪದ್ಧತಿಯನ್ನು ನಿಷೇಧಿಸಿತ್ತು ಆದರೆ ಕಳೆದ 10 ವರ್ಷಗಳಲ್ಲಿ ಮ್ಯಾನ್ ಹೋಲ್ ಮತ್ತು ಮಲದ ಗುಂಡಿಗಳಲ್ಲಿ ಬಿದ್ದು 80ಕ್ಕೂ ಹೆಚ್ಚು ಜನ ಪೌರಕಾರ್ಮಿಕರು ತೀರಿಕೊಂಡಿದ್ದಾರೆ.

ಘನತೆಯಿಂದ ಬದುಕಲು ಬೇಕಾದ ವೇತನ, ಅತ್ಯಗತ್ಯವಾದ ಸುರಕ್ಷಾ ಸಲಕರಣೆಗಳು, ರಜೆ, ಕುಡಿಯುವ ನೀರು, ಶೌಚಾಲಯ ಇತ್ಯಾದಿ ಇಲ್ಲದೆ ದಾರುಣವಾಗಿ ಬದುಕುವಂತಹ ಸ್ಥಿತಿ ಪೌರಕಾರ್ಮಿಕರದಾಗಿದೆ. 2017ರಲ್ಲಿ ಗುತ್ತಿಗೆ ವ್ಯವಸ್ಥೆ ಎಂಬ ಆಧುನಿಕ ಜೀತಪದ್ಧತಿಯಿಂದ ಮುಕ್ತಗೊಳಿಸಲಾಯಿತು. ಆದರೆ ಖಾಯಮಾತಿ ಮಾಡುವ ಭರವಸೆ ಮಾತ್ರ ಅಲ್ಲೇ ನಿಂತು ಹೋಗಿದೆ. ಕೋವಿಡ್ ಸಂಕಟಮಯ ಸ್ಥಿತಿಯಲ್ಲಿಯೂ ಪ್ರಾಣ ಪಣಕ್ಕಿಟ್ಟು ಜನರನ್ನು ಕಾಪಾಡಲು ದುಡಿದ ನೇರ ಪಾವತಿ, ಗುತ್ತಿಗೆ ಪೌರಕಾರ್ಮಿಕರು, ದಿನಗೂಲಿ ಲೋಡರ್ಸ್, ಕಸದ ವಾಹನ ಚಾಲಕರು, ಒಳಚರಂಡಿ ಸ್ವಚ್ಛತಾ, ಪಾರ್ಕ್, ಸ್ಮಶಾಣ, ಘನ ತ್ಯಾಜ್ಯ ಘಟಕ, ಯು.ಜಿ.ಡಿ ನೀರು ಸಂಸ್ಕರಣಾ ಘಟಕದ ಕಾರ್ಮಿಕರನ್ನು, ನೀರು ಸರಬರಾಜು ಕಾನೂನು ಬದ್ಧವಾಗಿ ಸಿಗಬೇಕಾದ ಉದ್ಯೋಗ ಭದ್ರತೆಯಾಗಲಿ, ಆರೋಗ್ಯಕರ ಕೆಲಸದ ವಾತಾವರಣ, ಗ್ಲೋವ್ಸ್–ಗಂಬೂಟ್ಸ್, ರೈನ್ ಕೋಟ್ ನಂತಹ ಸುರಕ್ಷಾ ಸಲಕರಣೆಗಳನ್ನಾಗಲಿ ಕೊಡುವ ಇಚ್ಚಾಶಕ್ತಿಯನ್ನು ಸರ್ಕಾರ ತೋರುತ್ತಿಲ್ಲ. ಬದಲಿಗೆ ಬಡವರ ಬೆವರಿನಲ್ಲಿ ಲಾಭಮಾಡಿಕೊಳ್ಳಲು ಗುತ್ತಿಗೆದಾರ ಪರವೇ ಕೆಲಸಮಾಡುತ್ತಾ ಬಂದಿದೆ. ಈ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ನಗರ ಪಾಲಿಕೆ, ಪುರಸಭೆ, ನಗರ ಸಭೆ, ಪೌರ ಕಾರ್ಮಿಕರ ಮಹಾ ಸಂಘ, ಬಿ.ಬಿ.ಎಂ.ಪಿ. ಪೌರ ಕಾರ್ಮಿಕರ ಸಂಘ (ಎಐಸಿಸಿಟಿಯು) ಕರ್ನಾಟಕ ರಾಜ್ಯ ಮುನಿಸಿಪಲ್ ಕಾರ್ಮಿಕರ ಸಂಘ ರಿ (ಸಿಐಟಿಯು) ಸಫಾಯಿ ಕರ್ಮಚಾರಿ ಕಾವಲು ಸಮಿತಿ, ಸ್ಲಂ ಜನಾಂದೋಲನ, ದಲಿತ ಸಂಘರ್ಷ ಸಮಿತಿ ಮತ್ತಿತರೆ ವಿವಿಧ ಸಂಘಟನೆಗಳು ಜಂಟಿಯಾಗಿ ಜುಲೈ 1 ರಿಂದ ಸ್ವಚ್ಚತೆಯ ಕೆಲಸವನ್ನು ಸ್ಥಗಿತ ಮಾಡಿ ಜಿಲ್ಲಾಧಿಕಾರಿಗಳ ಕಛೇರಿ ಎದುರು ಅನಿಧಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದ್ದವು.

ಸರ್ಕಾರ ಮುಷ್ಕರಕ್ಕೆ ಮುನ್ನವೆ ಅಧಿಕಾರಿಗಳ ಮತ್ತು ಸಫಾಯಿ ಕರ್ಮಚಾರಿಗಳ ಅಯೋಗದ ಅಧ್ಯಕ್ಷರನ್ನು ಒಳಗೊಂಡು ಸಭೆ ನಡೆಸಿತು. ದಿ. 27, ಜೂನ್ ರಂದು ಎಲ್ಲಾ ಮುನಿಸಿಪಲ್ ಕಾರ್ಮಿಕರ ಸಂಘಟನೆಗಳ ಮುಖಂಡರು ಒಳಗೊಂಡು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯು ಸಮಸ್ಯೆ ಬಗೆಹರಿಸದ ಕಾರಣ ಮುಷ್ಕರ ಅರಂಭವಾಗಿಯೇ ಬಿಟ್ಟಿತು.

ರಾಜ್ಯಾದ್ಯಂತ ನಗರ ಪ್ರದೇಶಗಳು (ನಗರ ಸ್ಥಳೀಯ ಸಂಸ್ಥೆಗಳು) ಮತ್ತು ಗ್ರಾಮೀಣ ಭಾಗಗಳಲ್ಲಿ (ಗ್ರಾಮ ಪಂಚಾಯಿತಿಗಳು) ಮತ್ತು ಖಾಸಗಿ ವಲಯಗಳಲ್ಲಿ (ಬಸ್ ನಿಲ್ದಾಣ, ವಿಶ್ವವಿದ್ಯಾಲಯಗಳು, ಆಸ್ಪತ್ರೆಗಳು, ಕಂಪನಿಗಳು, ದೊಡ್ಡ ಕಛೇರಿಗಳು, ಲಾಡ್ಜ್‌ಗಳು, ಹೋಟೆಲ್ ಇತ್ಯಾದಿ ಕಡೆಗಳಲ್ಲಿ) ಸ್ವಚ್ಛತಾ ಕೆಲಸಗಳನ್ನು ಮಾಡುತ್ತಿರುವ ಸಾವಿರಾರು ಸ್ವಚ್ಛತಾ ಕಾರ್ಮಿಕರ ನೇಮಕಾತಿ, ವೇತನ ಮತ್ತು ಇತರ ಸಾಮಾಜಿಕ ಭದ್ರತೆಗಾಗಿ ಬೇಕಾದ ಸೂಕ್ತ ಕಾಯ್ದೆ ನಮ್ಮ ರಾಜ್ಯದಲ್ಲಿಲ್ಲ. ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯ, ಬೆಂಗಳೂರು ಇವರು ನಡೆಸಿರುವ ಅಧ್ಯಯನದ ಶಿಫಾರಸ್ಸಿನಂತೆ ಸ್ವಚ್ಛತಾ ಕಾರ್ಮಿಕರ ಭದ್ರತೆ, ಅರೋಗ್ಯ ರಕ್ಷಣೆ ಮತ್ತು ಸಾಮಾಜಿಕ ಭದ್ರತೆ–ನ್ಯಾಯಕ್ಕಾಗಿ ಸೂಕ್ತ ಕಾನೂನು ಜಾರಿಮಾಡಬೇಕು.

ಅಂಜದೆ–ಅಭೂತ ಪೂರ್ವ ಐಕ್ಯತೆ ತೋರಿದ ಮುನಿಸಿಪಲ್ ನೌಕರರರು

ಮುಷ್ಕರ ಅರಂಭವಾದ ದಿನದಂದು ಪೌರ ಕಾರ್ಮಿಕರು, ಕಸದ ಅಟೋಚಾಲಕರು, ಸಹಾಯಕರು, ಯುಜಿಡಿ ಕಾರ್ಮಿಕರು, ನೀರು ಸರಬರಾಜು ನೌಕರರು, ಚಾಲಕರು, ಒಳ ಚರಂಡಿ ನೀರು ಮತ್ತು ಘನ ತ್ಯಾಜ್ಯ ವಿಲೇವಾರಿ ಘಟಕದ, ಸ್ಮಶಾಣ, ಪಾರ್ಕ, ಕಛೇರಿ, ಕಂಪೂಟರ್ ಅಪರೇಟರಗಳು ಎಲ್ಲಾರು ಐಕ್ಯತೆಯಿಂದ ಮುಷ್ಕರದಲ್ಲಿ ಭಾಗಿಯಾಗಿ ಹಗಲು–ರಾತ್ರಿ ಧರಣಿಯಲ್ಲಿ ಬಾಗಿಯಾಗಿ ಮುಷ್ಕರದ ಯಶಸ್ವಿಗೆ ರಾಜ್ಯದ ಮೂಲೆ–ಮೂಲೆಗಳಲ್ಲಿ ಬೆಂಬಲ ವ್ಯಕ್ತಪಡಿಸಿದ್ದಾರೆ. ಸುರಿವ ಮಳೆಯನ್ನು ಲೆಕ್ಕಿಸದೆ ಬೆಂಗಳೂರು, ಉತ್ತರ ಕನ್ನಡ, ತುಮಕೂರು, ಬೆಳಗಾಂ, ಹಾಸನ, ಮಂಡ್ಯ, ಬಾಗಲಕೋಟೆ, ಬಳ್ಳಾರಿ, ದಾರವಾಡ, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಕೊಪ್ಪಳ, ರಾಯಚೂರು, ವಿಜಯಪುರ, ಮತ್ತಿತರೆ ಜಿಲ್ಲೆಗಳಲ್ಲಿ ಕೆಲಸ ಸ್ಥಗಿತ ಮಾಡಿ ಧರಣಿಯಲ್ಲಿ ಭಾಗಿಯಾಗಿದ್ದಾರೆ.

ಮುಷ್ಕರದಲ್ಲಿನ ನೌಕರ ನಡುವೆ ಒಡಕು ಮೂಡಿಸಿ–ಬೆದರಿಕೆ ಒಡ್ಡಿ ಮುಷ್ಕರ ಮುರಿಯಲು ಕೆಲ ಜಿಲ್ಲೆಗಳಲ್ಲಿ ಅಧಿಕಾರಿಗಳು ನಡೆಸಿದ ಪ್ರಯತ್ನಗಳ ನಡುವೆಯೂ ಮುನಿಸಿಪಲ್ ಕಾರ್ಮಿಕರು ಅಂಜದೆ ಅಭೂತ ಪೂರ್ವವಾದ ಐಕ್ಯತೆಯನ್ನು ಪ್ರರ್ದಶಿಸಿದ್ದಾರೆ. ಈ ಐಕ್ಯತೆಗೆ ನ್ಯಾಯ ಒದಗಿಸುವ ಜವಾಬ್ದಾರಿ ನಾಯಕತ್ವ ಮೇಲಿದೆ.

ಮುಷ್ಕರ ಅರಂಭವಾದ ದಿನ ಮತ್ತು ಸರ್ಕಾರ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಚಳುವಳಿಯ ನಾಯಕರ ಜೊತೆಯಲ್ಲಿ ಸಭೆಯನ್ನು ನಡೆಸಿತ್ತು. ಸಭೆಯಲ್ಲಿ ನೇರ ಪಾವತಿ ಪೌರ ಕಾರ್ಮಿಕರ ಸೇವೆಗಳನ್ನು ಖಾಯಂ ಮಾಡಲು ಬೇಕಾಗಿ ತಾತ್ವಿಕ ಒಪ್ಪಿಗೆ ಮಾತ್ರ ನೀಡಿದ ಸಭಾ ನಡವಳಿಕೆ ಲಿಖಿತ ಪತ್ರಿಗಳನ್ನು ನೀಡಿದ್ದರು. ಇದನ್ನು ಒಪ್ಪದ ಸಂಘಟನೆಗಳು ಮುಷ್ಕರವನ್ನು ಮುಂದುವರಿಸಿದ ಕಾರಣ ಮತ್ತೆ 4 ಜುಲೈ 2022 ರಂದು ಸಭಾ ನಡವಳಿಕೆಯ ಲಿಖಿತ ಪ್ರತಿಯನ್ನು ನೀಡಲಾಗಿದೆ. ಸರ್ಕಾರ ನೇಮಕಾತಿ ನಿಯಮಗಳಲ್ಲಿ ಮಾರ್ಪಾಡು ಮಾಡಿ ಸಚಿವ ಸಂಪುಟ/ಉಭಯ ಸದನಗಳಲ್ಲಿ ಅನುಮೋದನೆಯನ್ನು ಮೂರು ತಿಂಗಳಲ್ಲಿ ಪಡೆಯುವುದಾಗಿ ತಿಳಿಸಿದೆ. ಪೌರ ಕಾರ್ಮಿಕರ ಕಾನೂನಾತ್ಮಕ ರಕ್ಷಣೆಗೆ ವಿಶೇಷ ಕಾಯ್ದೆ ಮಾಡಲಾಗುವುದು ಎಂದು ಸಹ ತಿಳಿಸಿದೆ.

ಐ.ಪಿ.ಡಿ ಸಾಲಪ್ಪ ಮತ್ತು ಚಂದ್ರಶೇಖರ್ ಸಮಿತಿಯ ವರದಿ ಮತ್ತು ರಾಷ್ಟ್ರೀಯ ಕಾನೂನು ಶಾಲೆಯ ವರದಿಗಳ ಅಧಾರದಲ್ಲಿ ಮುನಿಸಿಪಲ್ ಕಾರ್ಮಿಕರ ಸಮಸ್ಯೆಗಳು ಸರ್ಕಾರಕ್ಕೆ ಮನವರಿಕೆಯಾಗಿದೆ–ಮಾನವಿಯತೆಯಿಂದ ಸ್ವಂಧಿಸಲಿದೆ, ಸಮಾನ ಕೆಲಸಕ್ಕೆ ಸಮಾನ ವೇತನದ ಬೇಡಿಕೆ ಕುರಿತು ಸರ್ಕಾರ ನೇಮಿಸುವ ಸಮಿತಿಯು ಪರಿಶೀಲಿಸಲಿದೆ ಎಂಬ ಆಶಯ ಕೆಲಸಗಾರರದ್ದು.

ಪೌರ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ರೈತ ವಿದ್ಯಾನಿಧಿ ಮಾದರಿಯಲ್ಲಿ ವಿದ್ಯಾರ್ಥಿ ವೇತನ–ಮಹಿಳಾ ಕಾರ್ಮಿಕರಿಗೆ ಸರ್ಕಾರಿ ನೌಕರರಿಗೆ ನೀಡುವಂತೆ ಹೆರಿಗೆ ರಜೆ, ವಿಶ್ರಾಂತಿ ಕೊಠಡಿ ನೀಡಲು ಒಪ್ಪಿದೆ.



ಇತರೆ ಕಡೆಗಳಲ್ಲಿನ ಗುತ್ತಿಗೆ ಪದ್ದತಿಯನ್ನು ಹಂತ–ಹಂತವಾಗಿ ನೇರವಾವತಿಯಡಿಯಲ್ಲಿ ತರಲಾಗುವುದು ಎಂದು ತಿಳಿಸಲಾಗಿದೆ. ಇದರ ಜಾರಿಗೆ ಜಂಟಿ ಸಮಿತಿಯು ಮುತರ್ವಜಿಯು ಸರ್ಕಾರ ಇಚ್ಚಾಶಕ್ತಿಯಷ್ಟೆ ಮುಖ್ಯ.

ಈ ಐತಿಹಾಸಿಕ ಮುಷ್ಕರವು ಒಂದು ಹೆಜ್ಜೆಯನ್ನು ಮುಂದು ತಂದಿದೆ. ಸರ್ಕಾರ ನೀಡಿರುವ ಅಶ್ವಾಸನೆಗಳನ್ನು ಕಾರ್ಯ ರೂಪಕ್ಕೆ ಇಳಿಸುವ ಮತ್ತು ಇತರೆ ಗುತ್ತಿಗೆ ಅಡಿಯಲ್ಲಿರುವ ಎಲ್ಲಾ ಮುನಿಸಿಪಲ್ ಕಾರ್ಮಿರಕರ ಸೇವೆ ಖಾಯಂಗೆ ಪ್ರಯತ್ನಗಳ ಮುಂದುವರಿಸುವ ಹೊಣೆಗಾರಿಕೆ ಜಂಟಿ ಸಮಿತಿಯ ಮೇಲಿದೆ.

ಪದ ಬಳಕೆ ನಿಷೇಧ ಸಾಕೇ ಆ ವಿಶೇಷಣ ಹೊಂದಿರುವವರ ನಿಷೇಧವೆಂದು?

ಪುರುಷೋತ್ತಮ ಬಿಳಿಮಲೆ

ಭಾಷೆಯು ನಮ್ಮ ಸುತ್ತಲಿನ ಜಗತ್ತನ್ನು ಕೆಲವು ಸಂಕೇತಗಳ ಮೂಲಕ ವಿವರಿಸುತ್ತದೆ ಮತ್ತು ನಮ್ಮ ಸಾಮಾಜಿಕ ಸಂಬಂಧಗಳನ್ನು (ಗಂಡ–ಹೆಂಡತಿ, ಅಣ್ಣ–ತಂಗಿ) ನಿರ್ಣಾಯಕವಾಗಿ ವಿಶದೀಕರಿಸುತ್ತದೆ. ಅದು ಅಧಿಕಾರ ಸ್ಥಾಪನೆಗೂ ನೆರವಾಗುತ್ತದೆ, ಅಧಿಕಾರ ನಾಶಕ್ಕೂ ಕಾರಣವಾಗುತ್ತದೆ.

ಪ್ರಜಾಪ್ರಭುತ್ವ, ಸ್ವರಾಜ್ಯ, ಸರ್ವಾಧಿಕಾರ ಇತ್ಯಾದಿ ಪದಗಳು ಒಂದು ನಿರ್ದಿಷ್ಟ ರಾಜಕೀಯ ಸ್ಥಿತಿಯನ್ನು ವಿವರಿಸಿದ ಹಾಗೆ, ಕಳ್ಳ, ಸುಳ್ಳ , ಮೋಸಗಾರ, ವಂಚಕ ಇತ್ಯಾದಿ ವಿಶೇಷಣಗಳು ವ್ಯಕ್ತಿಗಳ ಗುಣದೋಷಗಳನ್ನು ಸ್ಪಷ್ಟಪಡಿಸುತ್ತವೆ. ಹೀಗಾಗಿಯೇ ಅಧಿಕಾರದಲ್ಲಿರುವವರು ಜನರ ಮೇಲೆ ಹಿಡಿತ ಸಾಧಿಸಲು ಮಾಧ್ಯಮಗಳ ಮೊರೆಹೋಗುತ್ತಾರೆ. ಕೆಲವರಿಗೆ ಕೆಲವು ಪದಗಳನ್ನು ಮಾತ್ರ ಬಳಸಲು ಅದು ಒತ್ತಡ ಹೇರುತ್ತದೆ.

ಏನಿದ್ದರೂ ಒಂದು ಕಾಲಾವಧಿಯಲ್ಲಿ ಬಳಕೆಯಲ್ಲಿರುವ ಪದಗಳು ಆ ಕಾಲದ ಅಧಿಕಾರ ರಾಜಕಾರಣದ ಗುಣಗಳನ್ನು ಹಿಡಿದಿಡುತ್ತವೆ. ಸದ್ಯ ಭಾರತದ ಸಂಸತ್ತು ಜುಮ್ಲಾ ಜೀವಿ, ಬಾಲ ಬುದ್ಧಿ ಕೋವಿಡ್ ಹರಡುವವನು, ನಾಚಿಕೆಗೇಡು, ದುರುಪಯೋಗ, ವಂಚನೆ, ಭ್ರಷ್ಟ, ನಾಟಕ, ಆಷಾಢಭೂತಿತನ, ಅದಕ್ಷ, ಅರಾಜಕತ್ವ, ಶಕುನಿ, ನಿರಂಕುಶಾಧಿಕಾರಿ, ವಿನಾಶ್ ಪುರುಷ್, ಖಲಿಸ್ತಾನಿ, ಚಮಚಾಗಿರಿ, ಚೇಲಾ, ಅಪರಾಧಿ, ಕ್ರೂರಿ, ಗೂಂಡಾಗಳು, ಮೊದಲಾದ ಪದಗಳನ್ನು ಕಡತದಿಂದ ತೆಗೆದು ಹಾಕಲು ನಿರ್ಧರಿಸಿದೆ.

ಆದರೆ ತೆಗೆದು ಹಾಕಲಾದ ಪದಗಳೇ ಕಾಲಾಂತರದಲ್ಲಿ ಭಾರತದ ಸಂಸತ್ತು ಹೇಗೆ ಕಾರ್ಯ ನಿರ್ವಹಿಸುತ್ತಿತ್ತು ಎಂಬುದನ್ನು ಮುಂದಿನ ತಲೆಮಾರಿಗೆ ತಿಳಿಸುತ್ತವೆ ಮತ್ತು ಅಲ್ಲಿ ಯಾರ್ಯಾರು ಇದ್ದರು ಎಂಬುದನ್ನೂ ದಾಖಲಿಸುತ್ತದೆ.

ಈ ಪದಗಳನ್ನು ತೆಗೆದು ಹಾಕಿದ ತಕ್ಷಣ ಅಲ್ಲಿ ಅಂತವರು ಯಾರೂ ಇರಲಿಲ್ಲ ಎಂದೇನೂ ಅರ್ಥವಲ್ಲ. 2019ರಲ್ಲಿ ಪ್ರಕಟವಾದ ವರದಿಯೊಂದು ಲೋಕಸಭೆಯಲ್ಲಿರುವ ಕ್ರಿಮಿನಲ್ ಪ್ರಕರಣದ ಆರೋಪಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಅದರ ಪ್ರಕಾರ 2019ರ ಲೋಕಸಭಾ ಚುನಾವಣೆಯಲ್ಲಿ ಆಯ್ಕೆಯಾಗಿರುವ ಜನಪ್ರತಿನಿಧಿಗಳಲ್ಲಿ ಅಪರಾಧ ಹಿನ್ನೆಲೆಯುಳ್ಳ ಸಂಸದರ ಸಂಖ್ಯೆ ಶೇ. 43. 2014ರ ಲೋಕಸಭಾ ಚುನಾವಣೆಗೆ ಹೋಲಿಸಿದರೆ ಇದು ಶೇ. 26ರಷ್ಟು ಹೆಚ್ಚು. ಅಂದರೆ, ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವಾಗ ಮತದಾರರು ತಮ್ಮ ಚುನಾವಣಾ ಕ್ಷೇತ್ರದ ಅಭ್ಯರ್ಥಿಯು ಭ್ರಷ್ಟಾಚಾರ ಮತ್ತು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದರೂ ಅದನ್ನು ಕಡೆಗಣಿಸಿ ಮತದಾನ ಮಾಡಿದ್ದಾರೆ ಎಂಬುದು ಸ್ಪಷ್ಟ.

ಅಕ್ರಮ ಸಂಪಾದನೆ, ಹಣದ ಅವ್ಯವಹಾರ ಮತ್ತು ಭಯೋತ್ಪಾದನೆ ಕೃತ್ಯಗಳ ಆರೋಪಿಯಾಗಿರುವ ಸಂಸದರು ಲೋಕಸಭೆಯಲ್ಲಿದ್ದಾರೆ. ಮಾಲೆಗಾಂವ್ ಪ್ರಕರಣದ ಆರೋಪಿ ಬಿಜೆಪಿಯ ಸಾಧ್ವಿ ಪ್ರಜ್ಞಾ ಸಿಂಗ್ ಠಾಕೂರ್, ಕಾಂಗ್ರೆಸ್‌ನ ಹಿರಿಯ ನೇತಾರ ಪಿ.ಚಿದಂಬರಂ ಅವರ ಪುತ್ರ ಕಾರ್ತಿ ಚಿದಂಬರಂ, ಹತ್ಯೆ ಪ್ರಕರಣದ ಆರೋಪಿಯಾದ ಉತ್ತರ ಪ್ರದೇಶದ ಅಫ್ಜಲ್ ಅನ್ಸಾರಿ ಮೊದಲಾದವರು ಕೆಲವು ಉದಾಹರಣೆಗಳಷ್ಟೇ. ಕೇರಳದ ಇಡುಕ್ಕಿ ಲೋಕಭಾ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ ಡೀನ್ ಕುರಿಯಕೋಸ್ (ಕಾಂಗ್ರೆಸ್) ವಿರುದ್ಧ 204 ಅಪರಾಧ ಪ್ರಕರಣಗಳು ಇವೆ.

ಪದ ಬಳಕೆಯನ್ನು ನಿಷೇಧಿಸುವ ಪಕ್ಷಗಳು ಆ ವಿಶೇಷಣಗಳನ್ನು ಹೊಂದಿರುವ ಅಭ್ಯರ್ಥಿಗಳನ್ನೇನೂ ನಿಷೇಧಿಸುವುದಿಲ್ಲ. 2019ರಲ್ಲಿ ಗೆಲುವು ಸಾಧಿಸಿದ 233 ಸಂಸದರು ಅಪರಾಧ ಹಿನ್ನಲೆಯುಳ್ಳವರಾಗಿದ್ದಾರೆ. ಇದರಲ್ಲಿ ಬಿಜೆಪಿಯ 116, ಕಾಂಗ್ರೆಸ್‌ನ 29, ಜೆಡಿಯುನ 13, ಡಿಎಂಕೆಯ 10, ಮತ್ತು ಟಿಎಂಸಿಯ 9 ಸಂಸದರಿದ್ದಾರೆ. ದ್ವೇಷ ಭಾಷಣ ಮಾಡಿದ ಆರೋಪವಿರುವ 29 ಸಂಸದರು ಲೋಕಸಭೆಯಲ್ಲಿದ್ದಾರೆ. ಇವರು ಅನ್ಯಾಯ ಮಾಡಬಹುದು, ಸುಳ್ಳು ಹೇಳಬಹುದು, ಆದರೆ ಅವರನ್ನು ನೀವು ಅನ್ಯಾಯಗಾರ, ಸುಳ್ಳ, ವಂಚಕ ಎಂದೆಲ್ಲಾ ಕರೆಯಬಾರದು ಅಷ್ಟೆ.

ಲೋಕಸಭೆ, ರಾಜ್ಯಸಭೆಗಳು ಘನತೆಯಿಂದ ಕಾರ್ಯನಿರ್ವಹಿಸಬೇಕಾದ್ದು ಅವಶ್ಯಕ. ಅದಕ್ಕೆ ಅಷ್ಟೇ ಘನತೆಯುಳ್ಳ ವ್ಯಕ್ತಿಗಳು ಅಲ್ಲಿರಬೇಕು.



ಮಾರ್ಯದೆಗೇಡು ಹತ್ಯೆ ಖಂಡಿಸಿ ಮೈಸೂರು ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರತಿಭಟನೆ

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾ.ಮೆಲ್ಲಹಳ್ಳಿ ಗ್ರಾಮದಲ್ಲಿ ನಡೆದ ಮಾರ್ಯದೆಗೇಡು ಹತ್ಯೆ ಖಂಡಿಸಿ. ದಲಿತ ಹಕ್ಕುಗಳ ಸಮಿತಿ ವತಿಯಿಂದ 6 ಜುಲೈ 2022 ರಂದು ಮೈಸೂರು ಜಿಲ್ಲಾಧಿಕಾರಿ ಕಛೇರಿ ಮುಂದೆ ಹತ್ಯೆಗೆ ಕಾರಣರಾದ ಎಲ್ಲಾ ಅರೋಪಿಗಳನ್ನು ಬಂದಿಸಬೇಕಾಗಿ ಒತ್ತಾಯಿಸಲಾಯಿತು.

ಮೆಲ್ಲಹಳ್ಳಿ ಗ್ರಾಮದ ದಲಿತ ಯುವಕ ಮಂಜು, ಮೇಲ್ಜಾತಿಯ ಯುವತಿ ಶಾಲಿನಿ ಇಬ್ಬರು ಪ್ರೀತಿಸುತ್ತಿದ್ದರು. ಇದನ್ನ ಸಹಿಸದ ಕುಟುಂಬದ ತಂದೆ ತಾಯಿಗಳಾದ ಸುರೇಶ ಬೇಬಿ ರವರುಗಳು ಶಾಲಿನಿಯನ್ನು ಕತ್ತು ಹಿಸುಕಿ ಸಾಯಿಸಿರುತ್ತಾರೆ. ಈ ಕೃತ್ಯ ನಡೆಯುವುಕ್ಕಿಂತ ಮುಂಚೆ ಶಾಲಿನಿಯ ತಂದೆ ತಾಯಿ ಪಿರಿಯಾಪಟ್ಟಣ ಪೋಲಿಸ್ ಠಾಣೆಗೆ ದೂರು ಸಲ್ಲಿಸಿದರು. ಈ ದೂರಿನ ಅನ್ವಯ ಪೊಲೀಸರು ದೈಹಿಕವಾಗಿ ಹಿಂಸೆ ಮಾಡಿರುತ್ತಾರೆ. ಈ ಘಟನೆ ಹಿಂದೆ 3 ಬಾರಿ ನಡೆದಿರುತ್ತದೆ. ಅಂತಿಮವಾಗಿ ಪೋಲಿಸ್ ಠಾಣೆಯಲ್ಲಿ ಮಂಜುನದು ಏನೂ ತಪ್ಪಿಲ್ಲ ನಾನು ಅವನನ್ನು ಪ್ರೀತಿಸುತ್ತಿದ್ದೇನೆ ನಾನು ಮುದುವೆ ಯಾಗುತ್ತೇನೆಂದು ಸ್ಪಷ್ಟವಾಗಿ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತಾಳೆ. ಮತ್ತು ನಾನು ತಂದೆ ತಾಯಿ ಮನೆಗೆ ಹೋಗುವುದಿಲ್ಲ ವೆಂದು.ಅವರು ಹೊಡೆದು ಹಿಂಸೆ ನೀಡಿರುತ್ತಾಳೆ ಎಂಬ ಹೇಳಿಕೆ ಕೊಟ್ಟಿರುತ್ತಾಳೆ.

ಆಕೆಗೆ 17 ವರ್ಷ ಆಗಿರುವ ಕಾರಣ ಪೊಲೀಸರು ಮೈಸೂರಿನ ಬಾಲ ಮಂದಿರಕ್ಕೆ ಕಳುಹಿಸಿ ಕೊಡುತ್ತಾರೆ. ಮದ್ಯವರ್ತಿ ವಿದ್ಯಾಳ ನೆರವಿನಿಂದ ತಂದೆ ತಾಯಿ ಮನೆಗೆ ಕರೆದು ಕೊಂಡು ಬಂದು 02 ಜೂನ್ 2022 ರಂದು ಕೊಲೆ ಮಾಡಿ ಬೆಳಗಿವ ಜಾವ ಪೊಲೀಸರಿಗೆ ಶರಣಾಗಿರುತ್ತಾರೆ. ಪಿರಿಯಾಪಟ್ಟಣ ಪೊಲೀಸರು ಮೊಕದ್ದಮೆ ದಾಖಲು ಮಾಡಿಕೊಂಡು ತನಿಖೆ ನಡೆಸುತ್ತಿದ್ದಾರೆ. ಈ ಕೊಲೆಯಲ್ಲಿ ಹುಡುಗಿ ಚಿಕ್ಕಂಪ್ಪದಿರು, ಗಾಳದ ರವಿ ಪ್ರತಾಪ್ ಪ್ರಭು ಮತ್ತು ಸಂಗೀತ ಗಣೇಶ ಇವರುಗಳನ್ನು ಬಂದಿಸಬೇಕು ಮತ್ತು ಶಾಲಿನಿಯ ಹೇಳಿಕೆಯನ್ನು FIRನಲ್ಲಿ ದಾಖಲಿಸಬೇಕೆಂದು ದಲಿತ ಹಕ್ಕುಗಳ ಸಮಿತಿ ಮೈಸೂರಿನ ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರತಿಭಟನೆ ನಡೆಸಿ ಮನವಿ ನೀಡಿ ಒತ್ತಾಯಿಸಲಾಯಿತು. ಪ್ರತಿಭಟನೆ ನೇತೃತ್ವವನ್ನು DHS ರಾಜ್ಯ ಸಹ ಸಂಚಾಲಕರಾದ ರಾಜಣ್ಣ ಮತ್ತು ಜಿಲ್ಲಾ ಸಂಚಾಲಕ ಬೆಳ್ತೂರು ವೆಂಕಟೇಶ್ ಮುಖಂಡರಾದ ಶಿವರಾಮು ಹೆಚ್. ಎಸ್. ಕೀರ್ತಿ ಪ್ರಸಾದ್ ಹುಡುಗನ ತಂದೆ ತಾಯಿಗಳಾದ ಶಿವಣ್ಣ, ಜಯಲಕ್ಷ್ಮಿ, ಸಹೋದರ ಸಂತೋಷ್, ರಾಜೇಂದ್ರ, ಬಸವಯ್ಯ, ಜಗದೀಶ್ ಸೂರ್ಯ, ಕೆ. ಬಸವರಾಜ್, ಈಶ್ವರ ಇಂಚರ, ಶ್ರೀ ಕಂಠಮೂರ್ತಿ ಸೇರಿದಂತೆ 40 ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ರೇವಣ್ಣ ದುರ್ವರ್ತನೆ ಖಂಡಿಸಿ ಸಿಐಟಿಯು ಪ್ರತಿಭಟನೆ ಬಹಿರಂಗ ಕ್ಷಮೆ ಕೇಳಲು ಒತ್ತಾಯ

ವಿವಿಧ ಬೇಡಿಕೆಗಳನ್ನಿಟ್ಟುಕೊಂಡು ಹೊಳೆನರಸೀಪುರದಲ್ಲಿ ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಅಂಗನವಾಡಿ ಕಾರ್ಯಕರ್ತೆರ ಮೇಲೆ ದುರ್ವರ್ತನೆ ತೋರಿದ ಹೊಳೆನರಸೀಪುರ ಶಾಸಕ ಎಚ್.ಡಿ. ರೇವಣ್ಣ ಅಂಗನವಾಡಿ ಕಾರ್ಯಕರ್ತರ ಬಳಿ ಬಹಿರಂಗ ಕ್ಷಮೆ ಕೇಳಬೇಕು ಎಂದು ಸಿಐಟಿಯು ಕಾರ್ಯಕರ್ತರು ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಬಾಬಾಸಾಹೇಬ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು.

ಜುಲೈ 13ರಂದು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ್ದ ರೇವಣ್ಣ, ಇಲ್ಲಿಯ ತನಕ ನಿಮ್ಮಗಳ ಬಗ್ಗೆ ದೂರುಗಳು ಬಂದರೂ ಕ್ರಮಕ್ಕೆ ಸೂಚಿಸಿರಲಿಲ್ಲ, ಇಂದು ವಿನಾಕಾರಣ ಧರಣಿ ನಡೆಸುತ್ತಿದ್ದೀರಿ, ಧರಣಿ ನಡೆಸಿ, ಏನು ಮಾಡಬೇಕು ಎಂದು ನನಗೆ ಗೊತ್ತಿದೆ. ಇವರಿಗೆಲ್ಲಾ ಗೈರುಹಾಜರಿ ಹಾಕಿ, ಗ್ರಾಮೀಣ ಜನರಿಂದ ದೂರು ಕೊಡಿಸಿ ಕೇಸು ದಾಖಲಿಸಿ, ಕೆಲವರನ್ನು ವಜಾ ಗೊಳಿಸಿದರೆ ಬುದ್ದಿ ಕಲಿಯುತ್ತಾರೆ ಎಂದು ರೇಗಿದ್ದರು.

ಈ ಸಂಬಂಧ ಸೋಮವಾರ ಸಿಐಟಿಯು ಮತ್ತು ಜನಪರ ಸಂಘಟನೆಗಳು ಖಂಡನಾ ಸಭೆ ಆಯೋಜಿಸಿದ್ದವು. ಈ ಸಭೆಯಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಸಿಐಟಿಯು ಜಿಲ್ಲಾ ಅಧ್ಯಕ್ಷ ಧರ್ಮೇಶ್, ಅಂಗನವಾಡಿ ಕಾರ್ಯಕರ್ತೆಯರು ಕಳೆದ ಮೂರು ವರ್ಷಗಳಿಂದ ವಿವಿಧ ಬೇಡಿಕೆಗಳ ಸಂಬಂಧ ಅಧಿಕಾರಿಗಳ ಗಮನ ಸೆಳೆಯುತ್ತಿದ್ದ, ಈ ಬಗ್ಗೆ ಗಮನ ಹರಿಸದ ಪರಿಣಾಮ ಸಿಡಿಪಿಓ ಕಚೇರಿ ಮುಖ್ಯಾಧಿಕಾರಿಗೆ ನೋಟಿಸ್ ಅನ್ನು ನೀಡಿ ಪ್ರತಿಭಟನೆ ಕುಳಿತಿದ್ದಾರೆ. ಈ ವೇಳೆ ಏಕಾಏಕಿ ಆಗಮಿಸಿದ ಹೆಚ್.ಡಿ ರೇವಣ್ಣ ಅವರು ಮಹಿಳೆಯರು ಎಂದು ಸಹ ನೋಡದೆ ಅವಾಚ್ಯ ಪದಗಳಿಂದ ನಿಂಧಿಸಿರುವುದು ಖಂಡನಾರ್ಹವಾಗಿದೆ. ರೇವಣ್ಣ ಅವರು ತಮ್ಮ ಘನತೆಗೆ ತಕ್ಕಂತೆ ನಡೆದು ಕೊಳ್ಳಬೇಕು. ಪ್ರತಿಭಟನಾಕಾರರು ರೇವಣ್ಣ ಅವರ ವಿರುದ್ಧ ಹೋರಾಟ ಮಾಡುತ್ತಿರಲಿಲ್ಲ. ಹಲವು ವರ್ಷಗಳಿಂದ ನೌಕರಿ ಕಾಯಂ ಹಾಗೂ ವಿವಿಧ ಬೇಡಿಕೆಗೆ ಈಡೇರಿಕೆ ಆಗ್ರಹಿಸಿ ಕಾರ್ಯಕರ್ತೆಯರು ಹೋರಾಟ ನಡೆಸುತ್ತಿದ್ದಾರೆ ಇದರ ಮುಂದುವರೆದ ಭಾಗವಾಗಿ ಅಂದು ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲಿ ರೇವಣ್ಣ ಅವರ ವರ್ತನೆ ಸರಿಯಲ್ಲ. ಕೂಡಲೇ ಬಹಿರಂಗವಾಗಿ ಅಂಗನವಾಡಿ ನೌಕರರಿಗೆ ಕ್ಷಮೆಯಾಚಿಸಬೇಕೆಂದು ಆಗ್ರಹಿಸಿದರು.



ಬಳಿಕ ಮಾತನಾಡಿದ ಹಿರಿಯ ದಲಿತ ಮುಖಂಡ ಎಚ್.ಕೆ.ಸಂದೇಶ್, ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟನೆ ನಡೆಸುತ್ತಿದ್ದ ಅಂಗನವಾಡಿ ನೌಕರರ ಜೊತೆ ರೇವಣ್ಣ ವರ್ತಿಸಿರುವ ರೀತಿ ಒಬ್ಬ ಜನಪ್ರತಿನಿಧಿಗೆ ತಕ್ಕುದಾದುದಲ್ಲ. ರೇವಣ್ಣ ಅವರ ವರ್ತನೆ ಜಿಲ್ಲೆಯ ಜನಪರ ಚಳವಳಿಗಳಿಗೆ ಮಾಡಿರುವ ಅಪಮಾನ. ದೇವೇಗೌಡ ಮತ್ತು ಅವರ ಕುಟುಂಬದ ರಾಜಕೀಯ ಏಳಿಗೆಯಲ್ಲಿ ಜಿಲ್ಲೆಯ ದಲಿತ ಮತ್ತು ಜನಪರ ಚಳವಳಿಗಳ ಕೊಡುಗೆ ಎಷ್ಟಿದೆ ಎಂದು ಅವರ ತಂದೆ ದೇವೇಗೌಡರ ಬಳಿ ಕೇಳಿ ತಿಳಿದುಕೊಳ್ಳಬೇಕು. ಮಾಜಿ ಪ್ರಧಾನಗಳ ಮಗನಾಗಿ ಹೇಗೆ ಮಾತನಾಡಬೇಕು ಅರಿವು ಇಲ್ಲದಿರುವುದು ವಿಷಾದನೀಯ. ತಮ್ಮ ದುರ್ವರ್ತನೆಗೆ ರೇವಣ್ಣ ಕೂಡಲೇ ಅಂಗನವಾಡಿ ನೌಕರರಲ್ಲಿ ಬಹಿರಂಗವಾಗಿ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

ದಸಂಸ ಜಿಲ್ಲಾ ಸಂಯೋಜಕ ರಾಜಶೇಖರ್ ಮಾತನಾಡಿ, ರೇವಣ್ಣ ತಾವು ಐದಾರು ಬಾರಿ ಸಚಿವ, ಶಾಸಕ ಆಗಿದ್ದವರು, ಮಾಜಿ ಪ್ರಧಾನಿಯವರ ಪುತ್ರ, ಸಂಸದ, ಶಾಸಕರೊಬ್ಬರ ತಂದೆ ಎಂಬುದನ್ನು ಮರೆತುಬಿಟ್ಟಿದ್ದಾರೆ. ಇದನ್ನು ಸದಾ ನೆನಪಲ್ಲಿ ಇಟ್ಟುಕೊಳ್ಳಬೇಕು. ಹೋರಾಟಗಾರರ ಬಗ್ಗೆ ಕೀಳಾಗಿ ಮಾತನಾಡಬಾರದು. ಅವರ ತಂದೆ ಅಂಗನವಾಡಿ ನೌಕರಿಗಿಂತ ಕೀಳಾಗಿ ಬದುಕಿದ್ದರು ಎಂದು ಹಿಂತಿರುಗಿ ನೋಡಬೇಕು. ಗುಂಡೂರಾವ್ ಸರ್ಕಾರದ ವಿರುದ್ಧ ರಾಜ್ಯದ ರೈತ, ದಲಿತರು ನಡೆಸಿದ ಹೋರಾಟದ ಫಲವಾಗಿ ಇವರ ಕುಟುಂಬ ರಾಜಕೀಯವಾಗಿ ಇಷ್ಟು ಎತ್ತರಕ್ಕೆ ಬೆಳೆದಿದ್ದಾರೆ. ಅದೇ ಜನ ತಿರುಗಿಬಿದ್ದರೆ ಏನಾಗಲಿದೆ ಎಂದು ಈಗಾಗಲೇ ಒಂದು ಬಾರಿ ಅನುಭವಿಸಿದ್ದರೂ ಬುದ್ದಿ ಕಲಿತಿಲ್ಲ. ಮಾಡಿರುವ ತಪ್ಪಿಗೆ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಮುಖಂಡರಾದ ಬಾಗೂರು ಮಂಜೇಗೌಡ, ದಸಂಸ ಮುಖಂಡರಾದ ಈರಪ್ಪ, ಅಂಬುಗ ಮಲ್ಲೇಶ್, ಕೃಷ್ಣಕುಮಾರ್, ಆರ್ ಪಿಐ ಸತೀಶ್, ಭೀಮವಿಜಯ ಸಂಪಾದಕ ಹೆತ್ತೂರು ನಾಗರಾಜ, ಮಾದಿಗ ದಂಡೋರ ಸಮಿತಿಯ ವಿಜಯ್ ಕುಮಾರ್, ಸಿಐಟಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ.ಪುಷ್ಪ ಮಾತನಾಡಿದರು, ಕಾರ್ಯದರ್ಶಿಗಳಾದ ಅಶೋಕ್, ಸೌಮ್ಯ ಸಕಲೇಶಪುರ, ಕೆಪಿಆರ್ ಎಸ್ ಜಿಲ್ಲಾ ಅಧ್ಯಕ್ಷ ನವೀನ್ ಕುಮಾರ್, ಕಾರ್ಯದರ್ಶಿ ವಸಂತಕುಮಾರ್, ಡಿಎಚ್‌ಎಸ್ ಪೃಥ್ವಿ, ರಾಜು ಸಿಗರನಹಳ್ಳಿ, ಎಸ್‌ಎಫ್‌ಐನ ರಮೇಶ್, ಹೇಮಂತ, ಸಿಐಟಿಯು, ದಲಿತ ಸಂಘಟನೆಗಳ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.





ಅರಣ್ಯ ಸಂರಕ್ಷಣಾ ಕಾಯ್ದೆಯನ್ನು ಕಾರ್ಪೊರೇಟೀಕರಣ ಮಾಡುವ ಹುನ್ನಾರ

ಅರಣ್ಯ ಸಂರಕ್ಷಣಾ ಕಾಯ್ದೆಯ ನಿಯಮಗಳ ತಿದ್ದುಪಡಿಗಳ ವಿರುದ್ಧ ಮಂತ್ರಿಗಳಿಗೆ ಕೇಂದ್ರಕ್ಕೆ ಬೃಂದಾ ಕಾರಟ್ ಪತ್ರ

ಅರಣ್ಯ ಸಂರಕ್ಷಣಾ ಕಾಯ್ದೆ(ಎಫ್.ಸಿ.ಎ.)ಯ ನಿಯಮಗಳಲ್ಲಿ ಮಾಡಿರುವ ಬದಲಾವಣೆಗಳನ್ನು ಕೇಂದ್ರ ಸರಕಾರ ಜೂನ್ 28, 2022 ರಂದು ಗೆಜೆಟ್ ಮಾಡಿದೆ. ಇದನ್ನು ಕಾರ್ಪೊರೇಟ್‌ಗಳು ಮತ್ತು ಖಾಸಗಿ ಕಂಪನಿಗಳಿಗೆ ಭಾರತದ ಅರಣ್ಯಗಳನ್ನು ಲಭ್ಯಗೊಳಿಸಲು ಮತ್ತು ಅವುಗಳ ಮೇಲೆ ನಿಯಂತ್ರಣವನ್ನು ಪಡೆಯಲು ಸಹಾಯ ಮಾಡುವ ದೂರಗಾಮಿ ಗುರಿಯಿಟ್ಟುಕೊಂಡು ಮಾಡಿರುವ ತಿದ್ದುಪಡಿಗಳು ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಿ ಭೂಪೇಂದರ್ ಯಾದವ್ ಅವರಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಜುಲೈ 11, 2022 ಬರೆದ ಪತ್ರದಲ್ಲಿ ತೀಕ್ಷ್ಣವಾಗಿ ಟೀಕಿಸಿದ್ದಾರೆ.

ತಿದ್ದುಪಡಿ ಮಾಡಿದ ನಿಯಮಗಳು ಗ್ರಾಮ ಸಭೆಗಳು ಮತ್ತು ಬುಡಕಟ್ಟು ಸಮುದಾಯಗಳ ಮತ್ತು ಅರಣ್ಯಗಳಲ್ಲಿ ವಾಸಿಸುವ ಇತರ ಪಾರಂಪರಿಕ ಅರಣ್ಯ ನಿವಾಸಿಗಳ ಹಕ್ಕುಗಳನ್ನು ಸಂಪೂರ್ಣವಾಗಿ ತೊಡೆದು ಹಾಕಿವೆ ಎಂಬುದು ಈ ತಿದ್ದುಪಡಿಗಳನ್ನು ಕುರಿತ ಪ್ರಮುಖ ಆಕ್ಷೇಪ. ಬುಡಕಟ್ಟು ಜನಗಳ ದನಿಗಳನ್ನು ಮತ್ತು ಹಕ್ಕುಗಳನ್ನು ಮೌನವಾಗಿಸುವ ಕೆಲಸವನ್ನು ಈ ನಿಯಮ ಬದಲಾವಣೆಗಳು ಸದ್ದಿಲ್ಲದೆ ಮಾಡಿವೆ.

ಇದು ಸಂಪೂರ್ಣವಾಗಿ ಬುಡಕಟ್ಟು ಸಮುದಾಯಗಳಿಗೆ ನೀಡಿದ ಸಂವಿಧಾನಿಕ ಖಾತರಿಗಳಿಗೆ ವಿರುದ್ಧವಾಗಿದೆ. ಇದು ಸಂವಿಧಾನದ ಐದನೇ ಮತ್ತು ಆರನೇ ಶೆಡ್ಯೂಲ್‌ಗಳು, ಪಂಚಾಯತು ರಾಜ್ಯ(ಪರಿಶಿಷ್ಟ ಪ್ರದೇಶಗಳಿಗೆ ವಿಸ್ತರಣೆ) ಕಾಯ್ದೆ (ಪಿಇಎಸ್ಎ), ತಿದ್ದುಪಡಿಯಾದ ವನ್ಯಜೀವಿ ಸಂರಕ್ಷಣಾ ಕಾಯಿದೆ ಮತ್ತು ಅಂತಿಮವಾಗಿ ಮತ್ತು ಮುಖ್ಯವಾಗಿ ಅರಣ್ಯ ಹಕ್ಕುಗಳ ಕಾಯ್ದೆ(ಎಫ್‌ಆರ್‌ಎ)ಯ ಉಲ್ಲಂಘನೆಯಾಗಿದೆ. ಇದು 2013ರ ನಿಯಮಗಿರಿ ಗಣಿಗಾರಿಕೆ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪಿನ ಉಲ್ಲಂಘನೆಯಾಗಿದೆ ಎಂದು ಉದಾಹರಣೆಗಳ ಸಹಿತ ಬೃಂದಾ ಅವರು ಈ ಪತ್ರದಲ್ಲಿ ಅರಣ್ಯ ಮಂತ್ರಿಗಳ ಗಮನಕ್ಕೆ ತಂದಿದ್ದಾರೆ.

ಪರಿಹಾರಾರ್ಥ ಅರಣ್ಯೀಕರಣಕ್ಕೆ ಭೂ ಬ್ಯಾಂಕ್‌ಗಳ ಪರಿಕಲ್ಪನೆಯನ್ನು ಮುಂದಿಟ್ಟಿರುವ ಈ ತಿದ್ದುಪಡಿಗಳು ಕಡ್ಡಾಯ ಪರಿಹಾರಾರ್ಥ ಅರಣ್ಯೀಕರಣದ ಹೆಸರಿನಲ್ಲಿ ಭೂಮಿಯ ಮೇಲಿನ ಜನರ ಅಸ್ತಿತ್ವದಲ್ಲಿರುವ ಹಕ್ಕುಗಳ ಮೇಲೆ ಅತ್ಯಂತ ಹಾನಿಕಾರಕ ಪರಿಣಾಮವನ್ನು ಬೀರುತ್ತವೆ.

ಇದುವರೆಗೆ "ಅನುಲ್ಲಂಘನೀಯ ಪ್ರದೇಶ" ಎಂದು ಪರಿಗಣಿಸಿರುವ ಭೂಮಿಯನ್ನೂ ಈ ನಿಯಮ ಬದಲಾವಣೆಗಳು ಖಾಸಗಿ ವಲಯದ ಯೋಜನೆಗಳಿಗೆ. ತೆರೆದು ಕೊಡುತ್ತವೆ.. ಇದು ಈ ಪ್ರದೇಶಗಳಲ್ಲಿ ವಾಸಿಸುತ್ತಿರುವ ಸಾವಿರಾರು ಬುಡಕಟ್ಟು ಕುಟುಂಬಗಳನ್ನು ಎಬ್ಬಿಸಿ ಹೊರಹಾಕಲು ಸಚಿವಾಲಯವು ಅನುಸರಿಸುವ ದಬ್ಬಾಳಿಕೆಯ ಕ್ರಮಗಳಿಗೆ ತೀರಾ ವ್ಯತಿರಿಕ್ತವಾಗಿದೆ.

ನಿಯಮಗಳಲ್ಲಿನ ಬದಲಾವಣೆಯು ಬಾಧಿತರೊಂದಿಗೆ ಪೂರ್ವಭಾವಿ ಸಮಾಲೋಚನೆ ಅಥವಾ ಚರ್ಚೆ ನಡೆಸದೇ ಇರುವ ಅಪಾರದರ್ಶಕ ಪ್ರಕ್ರಿಯೆಯಾಗಿದೆ. ಸಂಸತ್ತಿನ ಮಂಜೂರಾತಿಯ ಪ್ರಕ್ರಿಯೆಯನ್ನು ಕೇವಲ ಔಪಚಾರಿಕತೆಗೆ ಇಳಿಸಲಾಗಿದೆ. ಈ ನಿಯಮಗಳನ್ನು ಜಾರಿಗೊಳಿಸಿದಾಗ ಖಂಡಿತವಾಗಿಯೂ ಉದ್ಭವಿಸುವ ಪರಿಣಾಮಗಳಿಂದಾಗಿ, ಸರ್ಕಾರವು ಸಾರ್ವಜನಿಕ ಚರ್ಚೆ ನಡೆಯುವ ಮತ್ತು ಅಭಿಪ್ರಾಯಗಳನ್ನು ಪಡೆಯುವ ವರೆಗೆ ಅವುಗಳನ್ನು ತಡೆ ಹಿಡಿಯಬೇಕು. ಇವನ್ನು ಸಂಬಂಧಪಟ್ಟ ಸಂಸದೀಯ ಸ್ಥಾಯೀ ಸಮಿತಿಗೆ ಪರೀಕ್ಷಣೆಗೂ ಕಳಿಸಬೇಕು ಮತ್ತು ಅರಣ್ಯ ಹಕ್ಕುಗಳ ಕಾಯ್ದೆಯನ್ನು ಜಾರಿಗೊಳಿಸುವ ಜವಾಬ್ದಾರಿಯಿರುವ ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಅಭಿಪ್ರಾಯಗಳನ್ನು ಕೂಡ ಒಳಗೊಳ್ಳಬೇಕು ಎಂದು ಬೃಂದಾ ಕಾರಟ್ ಅರಣ್ಯ ಮಂತ್ರಿಗಳನ್ನು ಆಗ್ರಹಿಸಿದ್ದಾರೆ.

ಅವರ ಪತ್ರದ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

ಆತ್ಮೀಯ ಶ್ರೀ ಭೂಪೇಂದರ್ ಯಾದವ್ ಜಿ,

ನಮಸ್ಕಾರ. ಅರಣ್ಯ ಸಂರಕ್ಷಣಾ ಕಾಯ್ದೆಗೆ ಜೂನ್ 28, 2022 ರಂದು ಗೆಜೆಟ್ ಮಾಡಲಾದ ಹೊಸ ತಿದ್ದುಪಡಿ ನಿಯಮಗಳಿಗೆ ಸಂಬಂಧಿಸಿದಂತೆ ನಾನು ನಿಮಗೆ ಬರೆಯುತ್ತಿದ್ದೇನೆ.

1. ನಿಯಮಗಳಲ್ಲಿನ ಬದಲಾವಣೆಗಳ ಗುರಿ ಕಾರ್ಪೊರೇಟ್‌ಗಳು ಮತ್ತು ಖಾಸಗಿ ಕಂಪನಿಗಳಿಗೆ ಭಾರತದ ಅರಣ್ಯಗಳನ್ನು ಲಭ್ಯಗೊಳಿಸಲು ಮತ್ತು ಅವುಗಳ ಮೇಲೆ ನಿಯಂತ್ರಣವನ್ನು ಪಡೆಯಲು ಸಹಾಯ ಮಾಡುವ ಗುರಿಯಲ್ಲಿ ಎಷ್ಟು ದೂರಗಾಮಿಯಾಗಿವೆಯೆಂದರೆ ಒಂದು ಹೊಸ ಕಾನೂನನ್ನೇ ತರಬಹುದಿತ್ತು, ಈ ಮೂಲಕ ಭಾರತದ ಜನರು ಸರ್ಕಾರದ ಆದ್ಯತೆಯನ್ನು ಅರ್ಥಮಾಡಿಕೊಳ್ಳಬಹುದಾಗಿತ್ತು ಎಂದೇ ಹೇಳಬಹುದು. ವಾಸ್ತವವಾಗಿ ಈ ನಿಯಮಗಳನ್ನು ಒಟ್ಟಾಗಿ ತೆಗೆದುಕೊಂಡರೆ, ಇದು ಅರಣ್ಯ ಸಂರಕ್ಷಣಾ ಕಾಯ್ದೆಗಿಂತ ಅರಣ್ಯ ಕಾರ್ಪೊರೇಟೀಕರಣ ಕಾಯ್ದೆಗೆ ಹೆಚ್ಚು ಸೂಕ್ತವಾಗಿದೆ. ಉದಾಹರಣೆಗೆ, ಹಿಂದಿನ ನಿಯಮಗಳಲ್ಲಿ 100 ಹೆಕ್ಟೇರ್ ಅಥವ ಹೆಚ್ಚನ್ನು ಬೇರೆ ಉದ್ದೇಶಕ್ಕೆ ತಿರುಗಿಸಲು ಅವಕಾಶವಿದ್ದರೆ, ಹೊಸ ನಿಯಮಗಳಲ್ಲಿ "ಹೆಚ್ಚನ್ನು" ಈಗ "1000 ಹೆಕ್ಟೇರಿಗಿಂತ ಹೆಚ್ಚು" ಎಂದು ಪ್ರಮಾಣವನ್ನೂ ಹೇಳಲಾಗಿದೆ. ಅಂದರೆ ಅಪಾರ ಪ್ರಮಾಣದ ಅರಣ್ಯ ಭೂಮಿಯನ್ನು ಬೇರೆ ಉದ್ದೇಶಕ್ಕೆ ತಿರುಗಿಸಬಹುದು. ಬುಡಕಟ್ಟು ವ್ಯವಹಾರಗಳ ಸಚಿವಾಲಯವು 2019 ರಲ್ಲಿ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಸೂಚಿಸಿದ್ದ ಕೆಲವು ನಿಬಂಧನೆಗಳನ್ನು ಆಕ್ಷೇಪಿಸಿತ್ತು ಎಂಬುದು ಗಮನಾರ್ಹವಾಗಿದೆ. **(F.No.23011/23/2012 FRA)**

2. ತಿದ್ದುಪಡಿ ಮಾಡಿದ ನಿಯಮಗಳು ಹೇಗೆ ಗ್ರಾಮ ಸಭೆಗಳು ಮತ್ತು ಬುಡಕಟ್ಟು ಸಮುದಾಯಗಳ ಮತ್ತು ಕಾಡುಗಳಲ್ಲಿ ವಾಸಿಸುವ ಇತರ ಪಾರಂಪರಿಕ ಅರಣ್ಯ ನಿವಾಸಿಗಳ ಹಕ್ಕುಗಳನ್ನು ಸಂಪೂರ್ಣವಾಗಿ ತೆಗೆದುಹಾಕಿದೆ ಎಂಬುದು ಆಕ್ಷೇಪಾರ್ಹ, ಖಂಡನೀಯವಾಗಿದೆ ಮತ್ತು ಸ್ವೀಕಾರಾರ್ಹವಾಗಿಲ್ಲ. 2003 ರ ನಿಯಮಗಳನ್ನುಅರಣ್ಯ ಹಕ್ಕುಗಳ ಕಾಯಿದೆ 2006 ರ ಅಂಗೀಕಾರದ ನಂತರ ತಿದ್ದುಪಡಿ ಮಾಡಲಾಗಿದೆ. ಪರಿಸರ ಮತ್ತು ಅರಣ್ಯ ಸಚಿವಾಲಯದ ಆಗಸ್ಟ್ 3, 2009 ರ ಸುತ್ತೋಲೆ ತತ್ವಶಃ ಅನುಮೋದನೆಗೆ ಮೊದಲು ಪ್ರತಿ ಗ್ರಾಮ ಸಭೆಯಿಂದ ಒಪ್ಪಿಗೆ ಪತ್ರವನ್ನು ಪಡೆಯುವ ಅಗತ್ಯವನ್ನು ಸ್ಪಷ್ಟವಾಗಿ ಹೇಳಿದೆ. 2017 ರಲ್ಲಿ ನಿಮ್ಮ ಸರ್ಕಾರದ ಅಡಿಯಲ್ಲಿ ಇದನ್ನು ದುರ್ಬಲಗೊಳಿಸಲಾಯಿತು, ಆದರೆ ಗ್ರಾಮ ಸಭೆಯ ಅನುಮೋದನೆಯ ಅಗತ್ಯವನ್ನು ಉಳಿಸಿಕೊಳ್ಳಲಾಗಿತ್ತು.

ಪರಿಯೋಜನೆಗೆ "ತತ್ವಶಃ ಅನುಮೋದನೆ" ಪಡೆಯುವ ಆರಂಭಿಕ ಪ್ರಕ್ರಿಯೆಯ ಭಾಗವಾಗಿ ಈ ನಿಯಮಾವಳಿ ನಿರ್ದಿಷ್ಟವಾಗಿ ಹೀಗೆ ಹೇಳಿತ್ತು:

3.ಇ.(1) "ಜಿಲ್ಲಾಧಿಕಾರಿಗಳು ST ಪರಿಶಿಷ್ಟ ಬುಡಕಟ್ಟು ಮತ್ತು ಇತರ ಪಾರಂಪರಿಕ ಅರಣ್ಯ ನಿವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಕಾಯಿದೆ 2006 ಪ್ರಕಾರ ಹಕ್ಕುಗಳ ಇತ್ಯರ್ಥದ ಪ್ರಕ್ರಿಯೆಯನ್ನು ಪ್ರಸ್ತಾವದಲ್ಲಿನ ಇಡೀ ಅರಣ್ಯ ಭೂಮಿಗೆ ಪೂರ್ಣಗೊಳಿಸುತ್ತಾರೆ.

(2) ಪ್ರಸ್ತಾವದಲ್ಲಿ ಬೇರೆ ಉದ್ದೇಶಕ್ಕೆ ತಿರುಗಿಸಬೇಕೆಂದು ಸೂಚಿಸಿರುವ ಅರಣ್ಯ ಭೂಮಿಯ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಪ್ರತಿ ಗ್ರಾಮ ಸಭೆ ಅದರ ಉದ್ದೇಶದ ಪರಿಹಾರಾತ್ಮಕ ಕ್ರಮಗಳ ವಿವರಗಳನ್ನು ಅರ್ಥಮಾಡಿಕೊಂಡಿರುವ ಒಪ್ಪಿಗೆಯನ್ನು ಪಡೆಯಬೇಕು ಮತ್ತು "ಸ್ಥಳ ತಪಾಸಣೆ, ಕಾರ್ಯಸಾಧ್ಯತೆ ಇತ್ಯಾದಿಗಳಿಗಾಗಿ" ಅರಣ್ಯ ಸಂರಕ್ಷಕರಿಗೆ ಕಳಿಸಬೇಕು.

ಬೇರೆ ಮಾತುಗಳಲ್ಲಿ ಹೇಳುವುದಾದರೆ, ತತ್ವಶಃ ಅನುಮೋದನೆಯ ಮೊದಲು ಗ್ರಾಮ ಸಭೆಯ ಒಪ್ಪಿಗೆ ಅಗತ್ಯವಾಗಿತ್ತು.

ಹೊಸ ನಿಯಮಗಳು ಎರಡು ಹಂತದ ಅನುಮೋದನೆ ಪ್ರಕ್ರಿಯೆಯನ್ನು ವಿಧಿಸುತ್ತವೆ– ತತ್ವಶಃ ಅನುಮೋದನೆ ಮತ್ತು ಅಂತಿಮ ಅನುಮೋದನೆ. ಆಘಾತಕಾರಿ ಸಂಗತಿಯೆಂದರೆ, ಕೇಂದ್ರ ಸರಕಾರದಿಂದ ಈ ಯಾವುದೇ ಅನುಮೋದನೆ ಪಡೆಯಲು ಪೂರೈಸಬೇಕಾದ ಆವಶ್ಯಕತೆಗಳ ಪಟ್ಟಿಯಲ್ಲಿ ಗ್ರಾಮ ಸಭಾದ ಒಪ್ಪಿಗೆಯ ಮತ್ತು ಹಕ್ಕುಗಳ ಇತ್ಯರ್ಥದ ಷರತ್ತನ್ನು ಸಂಪೂರ್ಣವಾಗಿ ತೆಗೆದುಹಾಕಲಾಗಿದೆ. ತತ್ವಶಃ ಅನುಮೋದನೆಯ ಮೊದಲಿನ ಪ್ರಕ್ರಿಯೆಯಲ್ಲಿ ಅಥವಾ ಅದರ ಭಾಗವಾಗಿ ಮಾತ್ರವಲ್ಲ, ಅಂತಿಮ ಅನುಮೋದನೆಯನ್ನು ಕೂಡ ಈಗ ಕೇಂದ್ರ ಸರಕಾರ ಕಲಂ 9 (ಬಿ) (i) ಅಡಿಯಲ್ಲಿ ಗ್ರಾಮ ಸಭೆಯ ಅಥವ ಹಕ್ಕುಗಳ ಇತ್ಯರ್ಥದ ಉಲ್ಲೇಖವಿಲ್ಲದೆ ಕೊಡುತ್ತದೆ. ಬುಡಕಟ್ಟು ಜನಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ ದುರವಸ್ಥೆಯ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯವನ್ನು ಒತ್ತಿ ಹೇಳಬೇಕೆಂದರೆ, ಕಲಮು 9.5 ಎ ರಲ್ಲಿನ ನಿಯಮಗಳು. ತತ್ವಶಃ ಅನುಮೋದನೆಗೆ "ರಾಜ್ಯ ಸರ್ಕಾರವು ಅರಣ್ಯ, ವನ್ಯಜೀವಿ ಮತ್ತು ಪರಿಸರದ ಮೇಲೆ ನೇರ ಮತ್ತು ಪರೋಕ್ಷ ಪರಿಣಾಮ ಹೊಂದಿರುವ ಎಲ್ಲಾ ಸಮಸ್ಯೆಗಳನ್ನು ಪರಿಗಣಿಸಬೇಕು" ಎನ್ನುತ್ತದೆ. ಆದರೆ ಇಲ್ಲಿ ಆದಿವಾಸಿಗಳ ಉಲ್ಲೇಖವೇ ಇಲ್ಲ. ಆದ್ದರಿಂದ ಯಾವುದೇ ಹಂತದಲ್ಲಿ ಆದಿವಾಸಿಗಳು ಅಥವಾ ಇತರ ಪಾರಂಪರಿಕ ಅರಣ್ಯ ವಾಸಿಗಳಿಗೆ ಸಮ್ಮತಿ ಕೊಡುವ ಅಥವ ಕೊಡದಿರುವ ಯಾವುದೇ ಹಕ್ಕಿಲ್ಲ. ಮೇಲಾಗಿ, ಕೇಂದ್ರ ಸರ್ಕಾರವು ಬುಡಕಟ್ಟು ಜನಗಳ ಹಕ್ಕುಗಳ ರಕ್ಷಣೆಯ ಯಾವುದೇ ಜವಾಬ್ದಾರಿಯಿಲ್ಲದೆ ತನ್ನ ಅಂತಿಮ ಅನುಮೋದನೆಯನ್ನು ನೀಡುತ್ತದೆ ಮತ್ತು ಪರಿಹಾರ ಅರಣ್ಯೀಕರಣಕ್ಕಾಗಿ ಪಾವತಿಯನ್ನು ಸಂಗ್ರಹಿಸುತ್ತದೆ. ಬುಡಕಟ್ಟು ಜನಗಳ ಹಕ್ಕುಗಳ ರಕ್ಷಣೆಯ ಜವಾಬ್ದಾರಿಯನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸಲಾಗಿದೆ.

ಕಲಂ 9(ಬಿ)(2) ಅಡಿಯಲ್ಲಿ "ರಾಜ್ಯ ಸರ್ಕಾರ ಅಥವಾ ಕೇಂದ್ರಾಡಳಿತ ಪ್ರದೇಶ, ಸಂದರ್ಭಾನುಸಾರ, ಮತ್ತು ಕೇಂದ್ರ ಸರಕಾರದಿಂದ ಅಂತಿಮ ಅನುಮೋದನೆ ಪಡೆದ ನಂತರ, ಪರಿಶಿಷ್ಟ ಪಂಗಡ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿ ಸಮುದಾಯಗಳು (ಅರಣ್ಯ ಹಕ್ಕುಗಳ ಮಾನ್ಯತೆ) ಕಾಯಿದೆ, 2006 ಅಡಿಯಲ್ಲಿ ಹಕ್ಕುಗಳ ಇತ್ಯರ್ಥ ಸೇರಿದಂತೆ ಎಲ್ಲಾ ಇತರ ಕಾಯಿದೆಗಳು ಮತ್ತು ಅವುಗಳ ಅಡಿಯಲ್ಲಿನ ನಿಬಂಧನೆಗಳ ಅನುಸರಣೆಯ ನಂತರ ಬೇರೆ ಉದ್ದೇಶಗಳಿಗೆ ತಿರುಗಿಸುವ, ಭೋಗ್ಯಕ್ಕೆ ಕೊಡುವ ಅಥವ ಮೀಸಲಿಟ್ಟದ್ದನ್ನು ತೆಗೆಯುವ ಆದೇಶವನ್ನು ಹೊರಡಿಸುತ್ತದೆ. ಹೀಗೆ ಬುಡಕಟ್ಟು ಜನಗಳ ದನಿಗಳನ್ನು ಮತ್ತು ಹಕ್ಕುಗಳನ್ನು ಮೌನವಾಗಿಸುವ ಕೆಲಸ ತಂತಾನೇ ಈಡೇರುತ್ತದೆ. ಹಿಂದಿನ ನಿಬಂಧನೆಗಳಲ್ಲಿದ್ದ "ಗ್ರಾಮ ಸಭೆಯ ಒಪ್ಪಿಗೆ" ಎಂಬ ಪದಗಳನ್ನು ಕೈಬಿಡಲಾಗಿದೆ.

ಶ್ರೀ ಭೂಪೇಂದರ್ ಯಾದವ್ ಜೀ, ಇದು ಸಂಪೂರ್ಣವಾಗಿ ಬುಡಕಟ್ಟು ಸಮುದಾಯಗಳಿಗೆ ನೀಡಿದ ಸಂವಿಧಾನಿಕ ಖಾತರಿಗಳಿಗೆ ವಿರುದ್ಧವಾಗಿದೆ. ಇದು ಸಂವಿಧಾನದ ಐದನೇ ಮತ್ತು ಆರನೇ ಶೆಡ್ಯೂಲ್‌ಗಳು, ಪಂಚಾಯತು ರಾಜ್ಯ(ಪರಿಶಿಷ್ಟ ಪ್ರದೇಶಗಳಿಗೆ ವಿಸ್ತರಣೆ) ಕಾಯ್ದೆಪಿಇಎಸ್ಎ), ತಿದ್ದುಪಡಿಯಾದ ವನ್ಯಜೀವಿ ಸಂರಕ್ಷಣಾ ಕಾಯಿದೆ ಮತ್ತು ಅಂತಿಮವಾಗಿ ಮತ್ತು ಮುಖ್ಯವಾಗಿ ಅರಣ್ಯ ಹಕ್ಕುಗಳ ಕಾಯ್ದೆ(ಎಫ್‌ಆರ್‌ಎ)ಯ ಉಲ್ಲಂಘನೆಯಾಗಿದೆ. ಇದು 2013ರ ನಿಯಮಗಿರಿ ಗಣಿಗಾರಿಕೆ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪಿನ ಉಲ್ಲಂಘನೆಯಾಗಿದೆ.

3. ಹೊಸ ನಿಯಮಗಳು ಪರಿಹಾರಾರ್ಥ ಅರಣ್ಯೀಕರಣಕ್ಕೆ ಭೂ ಬ್ಯಾಂಕ್‌ಗಳ ಪರಿಕಲ್ಪನೆಯನ್ನು ಪರಿಚಯಿಸಿವೆ.

ಬಳಕೆದಾರ ಏಜೆನ್ಸಿಯು ಅರಣ್ಯೀಕರಣಕ್ಕಾಗಿ ಸೂಕ್ತವಾದ ಅರಣ್ಯೇತರ ಭೂಮಿಯನ್ನು ಒದಗಿಸಲು ಸಾಧ್ಯವಾಗದಿದ್ದರೆ, ಆಗ ಹಣಪಾವತಿ ಪಡೆದು ರಾಜ್ಯ ಸರ್ಕಾರಗಳು ಮಾಡಬಹುದು. ಅನೇಕ ರಾಜ್ಯಗಳಲ್ಲಿ, ಅಂತಹ ಭೂಮಿ ಖರಾಬು, ಅಧಿಸೂಚಿತ, ಅಥವ ವರ್ಗೀಕೃತವಲ್ಲದ ಅರಣ್ಯ ಭೂಮಿಯೂ ಆಗಬಹುದು. ಇವು ಹೆಚ್ಚಾಗಿ ವಾಸಸ್ಥಾನಗಳ ಸಮೀಪದಲ್ಲಿರುತ್ತವೆ ಮತ್ತು ಹಲವು ಸಂದರ್ಭಗಳಲ್ಲಿ ಅವುಗಳ ಮೇಲೆ ಜನಗಳ ಹಕ್ಕುಗಳೂ ದಾಖಲಾಗಿರುತ್ತವೆ. ಇಂತಹ ಜಮೀನುಗಳಲ್ಲಿ ಸಾವಿರಾರು ಕುಟುಂಬಗಳು ದಶಕಗಳಿಂದ ವಾಸಿಸುತ್ತಿವೆ. ಆಗಿನ ಯೋಜನಾ ಆಯೋಗವು ಖರಾಬು ಭೂಮಿಯನ್ನು ತೋಟಗಾರಿಕೆಗಾಗಿ ಖಾಸಗಿ ಕಂಪನಿಗಳಿಗೆ ಭೋಗ್ಯಕ್ಕೆ ಕೊಡುವ ಪ್ರಶ್ನೆಯನ್ನು ಪರಿಶೀಲಿಸಲು ರಚಿಸಿದ ಎನ್.ಸಿ. ಸಕ್ಸೇನಾ ಕಾರ್ಯಗುಂಪು ಹೇಳಿರುವುದನ್ನು ನೆನಪಿಸಿಕೊಳ್ಳುವುದು ಯೋಗ್ಯವಾಗಿದೆ. "ಕೆಲವು ಮಣ್ಣಿನ ಆಳವನ್ನು ಹೊಂದಿರುವ ಖರಾಬು ಅರಣ್ಯಗಳು ಚದುರಿಹೋಗಿವೆ, ಅವುಗಳು ತೀವ್ರ ಜೈವಿಕ ಒತ್ತಡವನ್ನು ಹೊಂದಿವೆ ಮತ್ತು ಆದರಿಂದಾಗಿ ಅವು ಜನಗಳೊಂದಿಗೆ ಕೆಲಸ ಮಾಡಿದರೆ ಪುನಶ್ಚೇತನಕ್ಕ ಅತ್ಯಂತ ಸೂಕ್ತವಾಗಿರುತ್ತವೆ. ಅಂತಹ

ಪುಟ 14 ಕ್ಕೆ



‘ಗಿಗ್’ ಎಂದರೆ ಅನಿಯತ ಉದ್ಯೋಗಗಳ ಅರ್ಥವ್ಯವಸ್ಥೆಯನ್ನು ಔಪಚಾರಿಕಗೊಳಿಸುವ ಸಾಧ್ಯತೆಗಳನ್ನು ಅನ್ವೇಷಿಸುವುದಾಗಿ ನೀತಿ ಆಯೋಗ ಹೇಳಿದೆ. ಅಂದರೆ ವಾಸ್ತವವಾಗಿ ಅನಿಶ್ಚಿತ ಸ್ವರೂಪದ ಉದ್ಯೋಗಗಳನ್ನು ‘ಕಾನೂನುಬದ್ಧ ’ಗೊಳಿಸುವುದು ಮತ್ತು ಜೊತೆಯಲ್ಲಿ ಕಾರ್ಮಿಕರ ಉತ್ಪಾದಕತೆ ನಿರಂತರ ಹೆಚ್ಚಳದಿಂದಾಗುವ ಮಿಗುತಾಯ ಮೌಲ್ಯವನ್ನು ಪೂರ್ಣವಾಗಿ ಬಂಡವಾಳಿಗರಿಗೆ ಒಪ್ಪಿಸುವುದು. ಆಳುವ ಸರ್ಕಾರದ ನಿಜವಾದ ಉದ್ದೇಶ, ಉದ್ಯೋಗಧಾತ ವರ್ಗದ ಹಿತ ಈಡೇರಿಸಲು ದೇಶದ ಉತ್ಪಾದಕ ಶಕ್ತಿಯಾದ ಶ್ರಮಿಕ ಪಡೆಯನ್ನು ಒಂದು ಸಾಂದರ್ಭಿಕ, ತುಂಡು ಕೂಲಿ ಕಾರ್ಮಿಕರ ಪಡೆಯಾಗಿ ಪರಿವರ್ತಿಸುವುದು. ಬಂಡವಾಳಗಾರ ವರ್ಗ ಯಾವಾಗಲೂ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಕೂಲಿ ಕೊಡಲು ಮತ್ತು ಕೆಲಸದ ಅವಧಿ ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಹೆಚ್ಚಿಸಲು ಪ್ರಯತ್ನಿಸುತ್ತದೆ. ಈ ಅಸಹ್ಯಕರ ಮೋಸದ ಆಟವನ್ನು ಬಯಲಿಗೆಳೆಯಬೇಕು.

ನೀತಿ ಆಯೋಗದ ಗಿಗ್ ಎಕಾನಮಿ ಅಧ್ಯಯನ ವರದಿ ಅನಿಯತ, ಅಭದ್ರ ಉದ್ಯೋಗಗಳನ್ನು ನೆಲೆಗೊಳಿಸುವ ಹುನ್ನಾರ

ಆರ್ಕಾ ರಾಜ್‌ಪಂಡಿತ್ ಅನು: ಕೆ.ಎಂ. ನಾಗರಾಜ್

(ಪೀಪಲ್ಸ್ ಡೆಮಾಕ್ರಸಿ ವಾರಪತ್ರಿಕೆಯಲ್ಲಿ ಪ್ರಕಟ ಅನುವಾದ ಲೇಖನ)

ಮೋದಿ ಸರ್ಕಾರದ ನೀತಿಗಳ ಸಂಶೋಧನಾ ಸಂಸ್ಥೆಯಾದ ‘ನೀತಿ ಆಯೋಗ’ "ಗಿಗ್ ಎಕಾನಮಿ" (ಅನಿಯತ ಉದ್ಯೋಗ ಅರ್ಥವ್ಯವಸ್ಥೆ) ಬಗ್ಗೆ ಒಂದು ಅಧ್ಯಯನ ವರದಿಯನ್ನು ತಯಾರಿಸಿದೆ. ‘ಗಿಗ್ ಅಥವಾ ಪ್ಲಾಟ್‌ಫಾರ್ಮ್ ಅರ್ಥವ್ಯವಸ್ಥೆ ಅತಿವೇಗವಾಗಿ ಮತ್ತು ಬೃಹತ್ತಾಗಿ ಬೆಳೆಯುತ್ತಿದೆ ಎಂದು ಹೇಳಿದೆ. ತನ್ನ ವರದಿಯ ಶೀರ್ಷಿಕೆ ಭಾರತದ ಬೃಹತ್ತಾಗಿ ಬೆಳೆಯುತ್ತಿರುವ ಗಿಗ್ ಎಕಾನಮಿ ಮತ್ತು ವೇಗವಾಗಿ ಬೆಳೆಯುತ್ತಿರುವ ಪ್ಲಾಟ್‌ಫಾರ್ಮ್ ಎಕಾನಮಿ: ಉದ್ಯೋಗಗಳ ಮೇಲಿನ ದೃಷ್ಟಿಕೋನ ಮತ್ತು ಶಿಫಾರಸುಗಳು. ಈ ವರದಿಯನ್ನು ಜೂನ್ 27, 2022 ರಂದು ಪ್ರಕಟಿಸಿದೆ. ಈ ವರದಿಯಲ್ಲಿ, ಗಿಗ್ ಅರ್ಥವ್ಯವಸ್ಥೆಯಲ್ಲಿ ದುಡಿಯುವವರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ಶಿಫಾರಸುಗಳನ್ನೂ ಮಾಡಲಾಗಿದೆ. ಇದು ಗಿಗ್ ಅಥವಾ ಪ್ಲಾಟ್‌ಫಾರ್ಮ್ ಆರ್ಥಿಕತೆಯನ್ನು ಶಾಶ್ವತಗೊಳಿಸುವ ಹುನ್ನಾರವಲ್ಲದೆ ಮತ್ತೇನೂ ಅಲ್ಲ.

ಈ ಗಿಗ್ ಅರ್ಥವ್ಯವಸ್ಥೆಯಲ್ಲಿ 2020–21ರಲ್ಲಿ, 77 ಲಕ್ಷ ಕಾರ್ಮಿಕರು ದುಡಿಯುತ್ತಿದ್ದು 2029–30ರ ವೇಳೆಗೆ 2.35 ಕೋಟಿಗೆ ಏರುವ ನಿರೀಕ್ಷೆಯಿದೆ ಎಂದು ಅಧ್ಯಯನ ವರದಿಯಲ್ಲಿ ಅಂದಾಜಿಸಲಾಗಿದೆ. ಪ್ರಸ್ತುತ, ಗಿಗ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಲ್ಲಿ ಸುಮಾರು ಶೇ.47ರಷ್ಟು ಮಧ್ಯಮ–ಕುಶಲ ಕ್ಷೇತ್ರದಲ್ಲಿ, ಸುಮಾರು ಶೇ.22ರಷ್ಟು ಹೆಚ್ಚು–ಕುಶಲ ಕ್ಷೇತ್ರ ಮತ್ತು ಸುಮಾರು ಶೇ.31ರಷ್ಟು ಅಲ್ಪ–ಕುಶಲ ಉದ್ಯೋಗಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಈಗಿನ ಬೆಳವಣಿಗೆ ಗಮನಿಸಿದಾಗ ಮಧ್ಯಮ–ಕುಶಲ ಉದ್ಯೋಗಗಳಲ್ಲಿ ಕೆಲಸಗಾರರ ಸಾಂದ್ರೀಕರಣ/ಸಂಖ್ಯೆ ಇಳಿಕೆಯಾಗುತ್ತಿದೆ ಮತ್ತು ಹೆಚ್ಚು–ಕುಶಲ ಕ್ಷೇತ್ರದಲ್ಲಿ ಹೆಚ್ಚಾಗುತ್ತಿದೆ.

ಈ ವರದಿಯ ಶಿಫಾರಸುಗಳನ್ನು ಮತ್ತು ಗಿಗ್ ಕೆಲಸಗಾರರ ಮೇಲೆ ಉಂಟುಮಾಡುವ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಲು, ಗಿಗ್ ಇಕಾನಮಿ (ಅನಿಯತ ಉದ್ಯೋಗ–ಅರ್ಥವ್ಯವಸ್ಥೆ) ಬಗ್ಗೆ ಮತ್ತು ಪ್ಲ್ಯಾಟ್‌ಫಾರ್ಮ್ ಅರ್ಥವ್ಯವಸ್ಥೆ (ಉದಾ: ಜೊಮ್ಯಾಟೊಗೆ ಕರೆ ಮಾಡಿದರೆ ಆಹಾರ ಸರಬರಾಜು ಮಾಡುತ್ತಾರೆ. ಅದನ್ನು ಜೊಮಾಟೋ ಪ್ಲಾಟ್‌ಫಾರ್ಮ್ ಎನ್ನಲಾಗುತ್ತದೆ) ಈ ಬಗ್ಗೆ ಮಾರ್ಕ್ಸ್‌ವಾದಿ ದೃಷ್ಟಿಕೋನದಲ್ಲಿ ವಿಮರ್ಶಾತ್ಮಕವಾಗಿ ಅರ್ಥಮಾಡಿಕೊಳ್ಳಬೇಕು.

ಕೆಲಸ ಅನಿಶ್ಚಿತ, ಕೆಲಸಗಾರರು ವಿಕೇಂದ್ರೀಕೃತ: ಒಂದು ಜಾಗತಿಕ ವಿದ್ಯಮಾನ

ಕಳೆದ ಒಂದು ದಶಕದಲ್ಲಿ, ಜಾಗತಿಕ ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಡಿಜಿಟಲ್ ವ್ಯವಹಾರ ವೇದಿಕೆಗಳು ವಿಸ್ತರಣೆಯಾಗುವುದನ್ನು ಮತ್ತು ಈ ವಲಯದ ಉದ್ಯೋಗ ಸಂಬಂಧಗಳು ಪರೋಕ್ಷವೂ ಮತ್ತು ದುರ್ಬಲವೂ ಆಗಿರುವುದುನ್ನು ಹಾಗೂ ವಿಕೇಂದ್ರೀಕೃತಗೊಂಡಿರುವುದನ್ನೂ ನಾವು ನೋಡಿದ್ದೇವೆ. ಈ ಪ್ರಕ್ರಿಯೆಯಲ್ಲಿ ಕೆಲಸದ ಹೊರೆ ಹೆಚ್ಚಿರುವುದನ್ನು, ಕೆಲಸದ ಅವಧಿಯ ವಿಸ್ತರಣೆಯನ್ನು, ವೇತನಗಳು ಕೆಳ ಮಟ್ಟದಲ್ಲಿರುವುದನ್ನು, ಕಾರ್ಮಿಕ ಹಕ್ಕುಗಳ ಕೊರತೆಯನ್ನು ಮತ್ತು ಕಾರ್ಯ–ನಿರ್ವಹಣಾ ಪ್ರಕ್ರಿಯೆಯ ಮೇಲೆ ಪರೋಕ್ಷ ನಿಯಂತ್ರಣ ಹೆಚ್ಚುತ್ತಿರುವುದನ್ನೂ ನಾವು ನೋಡಿದ್ದೇವೆ.

ಇಂದಿನ ‘ಗಿಗ್ ಎಕಾನಮಿ’ ಯುಗದಲ್ಲಿ ಖಾಯಂ ಉದ್ಯೋಗಗಳ ಬದಲಾಗಿ ತಾತ್ಕಾಲಿಕ, ಗುತ್ತಿಗೆ, ಸಾಂದರ್ಭಿಕ ಉದ್ಯೋಗಗಳು ಹೆಚ್ಚುತ್ತಿವೆ. ಉದ್ಯೋಗಗಳನ್ನು ವ್ಯಾಪಕವಾಗಿ ಹೊರಗುತ್ತಿಗೆಗೆ ಒಳಪಡಿಸಲಾಗಿದೆ. ಈ ಎಲ್ಲ ಬದಲಾವಣೆಗಳಿಂದಾಗಿ ಕೆಲಸದ ಅವಧಿಯು ಹೆಚ್ಚು ಅನಿಯತವೂ, ಅನಿರೀಕ್ಷಿತವೂ ಆಗಿ ಬದಲಾಗಿದೆ ಮತ್ತು ಸಂದರ್ಭಕ್ಕನುಸಾರವಾಗಿ ಹೊಂದಿಕೊಳ್ಳುತ್ತಿದೆ. ಉದ್ಯೋಗ ಸಂಬಂಧಗಳು ಅತಿಯಾಗಿ ದುರ್ಬಲಗೊಂಡಿವೆ. ಉಬರ್, ಓಲಾ, ಅಮೆಜಾನ್ ಮುಂತಾದ ಅನೇಕ ಸಂಸ್ಥೆಗಳಲ್ಲಿ, ಉದ್ಯೋಗಗಳು ಸಂಪೂರ್ಣವಾಗಿ ಸಾಂದರ್ಭಿಕವಾಗಿವೆ (ಕ್ಯಾಶುಯಲ್ – ಆಕಸ್ಮಿಕವೆಂದರೂ ಸರಿಯೇ). ಇಂದು ಬಂಡವಾಳಶಾಹಿ ವ್ಯವಸ್ಥೆಯಲ್ಲಿ, ಹೂಡಿಕೆ, ತಂತ್ರಜ್ಞಾನ, ನಾವೀನ್ಯತೆ ಮತ್ತು ನೇರ–ಉದ್ಯೋಗ ಸಂಬಂಧಗಳು ಬಂಡವಾಳಶಾಹಿಗಳಿಗೆ ಆಕರ್ಷಕವಾಗಿ ಉಳಿದಿಲ್ಲ. ಉದ್ಯೋಗದ ಬಗ್ಗೆಯಂತೂ ಬಂಡವಾಳಶಾಹಿ ಧೋರಣೆಯಲ್ಲಿ ಅತಿಯಾದ ಅಲ್ಪಾವಧಿ–ವಾದವೇ ಸರ್ವೋಚ್ಚವಾಗಿರುವಂತೆ ತೋರುತ್ತದೆ.

ಎಲ್ಲ ಡಿಜಿಟಲ್ ಪ್ಲ್ಯಾಟ್‌ಫಾರ್ಮ್‌ಗಳೂ ಮಾರುಕಟ್ಟೆ ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸುತ್ತವೆ. ಅವು ಒಂದು ರೀತಿಯ ಸರಕು ಮತ್ತು ಸೇವೆಗಳ ವಿನಿಮಯದಲ್ಲಿ ತೊಡಗುವವರನ್ನು (ಕೊಳ್ಳುವವರನ್ನು ಮತ್ತು ಮಾರುವವರನ್ನು) ಸಂಪರ್ಕಿಸುತ್ತಾರೆ. ಇಂಟರ್ನೆಟ್ (ಅಂತರ್ಜಾಲ) ತಂತ್ರಜ್ಞಾನದ ಪ್ರಗತಿಯು ಈ ಪ್ಲ್ಯಾಟ್‌ಫಾರ್ಮ್(ಕಟ್ಟೆ)ಗಳು ದೂರ ದೂರದ ಸ್ಥಳಗಳನ್ನು ತಲುಪುವ ಮೂಲಕ ಮಾರುಕಟ್ಟೆ ಸ್ಥಳಗಳನ್ನು ಅಭಿವೃದ್ಧಿಪಡಿಸಲು ಅನುವುಮಾಡಿಕೊಟ್ಟಿದೆ ಮತ್ತು ಆ ಮೂಲಕ ಬಂಡವಾಳಶಾಹಿಗಳು ತಮ್ಮ ತಮ್ಮ ಮಾರುಕಟ್ಟೆಗಳಲ್ಲಿ





ಮೇಲುಗೈ ಸಾಧಿಸಲು ಅನುವು ಮಾಡಿಕೊಟ್ಟಿದೆ. ಈ ಡಿಜಿಟಲ್ ಅರ್ಥವ್ಯವಸ್ಥೆಯಲ್ಲಿ ನಾವು ಮೂರು ಪ್ರಮುಖ ವೈಶಿಷ್ಟ್ಯಗಳನ್ನು ಗಮನಿಸಬಹುದು. ಮೊದಲನೆಯದು ದುಡಿಮೆಗೆ(ಶ್ರಮಕ್ಕೆ) ಸಂಬಂಧಿಸಿದೆ. ಗಿಗ್ ಅರ್ಥವ್ಯವಸ್ಥೆಯಲ್ಲಿ, ಮಾದರಿಯ–ನಿಶ್ಚಿತ ವೇತನದ–ಉದ್ಯೋಗಕ್ಕಿಂತ ಭಿನ್ನವಾಗಿ, ವೇತನವು ಗಿಗ್ ಕೆಲಸಗಾರನು ನಿರ್ವಹಿಸುವ ಕಾರ್ಯಭಾರಗಳ (ತುಂಡು ಕೆಲಸ) ಸಂಖ್ಯೆಯನ್ನಷ್ಟೇ ಅವಲಂಬಿಸಿರುತ್ತದೆ. ಎರಡನೆಯದು ಗ್ರಾಹಕರಿಗೆ ಲಭ್ಯವಿರುವ ಆಯ್ಕೆಗೆ ಸಂಬಂಧಿಸಿದೆ. ಕೊಳ್ಳುವವರು ಸರಕುಗಳ ಮತ್ತು ಸೇವೆಗಳ ವೈವಿಧ್ಯಮಯ ಆಯ್ಕೆಯನ್ನು ಹೊಂದಿದ್ದಾರೆ. ಡಿಜಿಟಲ್ ಪ್ಲ್ಯಾಟ್‌ಫಾರ್ಮ್‌ನ ಮೂರನೇ ವೈಶಿಷ್ಟ್ಯ ಮಧ್ಯವರ್ತಿಯು ಉತ್ಪಾದಕರು ಮತ್ತು ಗ್ರಾಹಕರನ್ನು ಸಂಪರ್ಕಿಸುವ ವಿಧಾನಕ್ಕೆ ಸಂಬಂಧಿಸಿದೆ.

ಬಂಡವಾಳಗಾರ ವರ್ಗವು ಗಿಗ್ ಅರ್ಥವ್ಯವಸ್ಥೆಯನ್ನು ಒಂದು ಪಾಲುದಾರಿಕೆಯ ಮತ್ತು ಹೊಂದಿಕೊಳ್ಳಬಲ್ಲ ಅರ್ಥವ್ಯವಸ್ಥೆ ಎಂದೂ ಮತ್ತು ಅದು ಕಾರ್ಮಿಕರ ಸ್ವಾತಂತ್ರ್ಯವನ್ನು ಗೌರವಿಸುತ್ತದೆ ಹಾಗೂ ಅವರ ಚಲನೆಯನ್ನು ಸುಗಮಗೊಳಿಸುತ್ತದೆ ಎಂದೂ ಹೇಳುತ್ತದೆ. ಆದರೆ, ಈ ವಿವರಣೆಯು, ಶ್ರಮಿಕರ ಬೆವರನ್ನು ಹೀರುವ ಮತ್ತು ಹೆಚ್ಚು ಮಾರಕ ಪ್ರಕ್ರಿಯೆಯ ಮೂಲಕ ಲಾಭ ಹೆಚ್ಚಿಸಿಕೊಳ್ಳುವುದನ್ನು ಬಂಡವಾಳಗಾರರು ತಮ್ಮ ಗುರಿಯಾಗಿ ಹೊಂದಿದ್ದಾರೆ ಎಂಬ ಅಂಶವನ್ನು ಮರೆಮಾಚುವ ಒಂದು ಹೊದಿಕೆಯಾಗಿದೆ. ದಿನಾ ಬೆಳಿಗ್ಗೆ 9 ರಿಂದ ಸಂಜೆ 5 ರವರೆಗೆ ದುಡಿಯುವ ರೂಢಿಯಿಂದ ಮತ್ತು ಒಂದೇ ಸಂಸ್ಥೆಯಲ್ಲಿ ದುಡಿಯುವ ಬಂಧನದಿಂದ ಹೊರಬರಲು ಹೊಸ ಯುವ ಪೀಳಿಗೆಗೆ ಗಿಗ್ ಅರ್ಥವ್ಯವಸ್ಥೆಯು ಅವಕಾಶ ಒದಗಿಸುತ್ತದೆ; ಯುವ ಕೆಲಸಗಾರರು ‘ಸ್ವತಂತ್ರ’ವಾಗಿರಲು ಬಯಸುತ್ತಾರೆ; ಈ "ಪುಟಾಣಿ–ಉದ್ಯಮಿಗಳು" ಆನ್–ಡಿಮ್ಯಾಂಡ್(ಬೇಡಿಕೆ ಆಧಾರಿತ) ಅರ್ಥವ್ಯವಸ್ಥೆಯ ಬೆನ್ನುಹಿಂದಿನ ಕ್ರಿಯಾಶೀಲ ಪ್ರೇರಕ ಶಕ್ತಿಯಾಗಿದ್ದಾರೆ; ಅವರು ತಮ್ಮ ಸೃಜನಶೀಲತೆ ಮತ್ತು ಜಾಣ್ಮೆಯಿಂದ ಬಂಡವಾಳಶಾಹಿಯನ್ನು ಮುಂದಕ್ಕೆ ತಳ್ಳುತ್ತಾರೆ ಎಂದು ಬಂಡವಾಳಗಾರರು ಹೇಳುತ್ತಾರೆ.

ಆದರೆ, ವಸ್ತು ಸ್ಥಿತಿಯು ಬಂಡವಾಳಗಾರರು ಹೇಳುತ್ತಿರುವುದಕ್ಕೆ ತದ್ವಿರುದ್ಧವಾಗಿದೆ. ಸ್ಥಿರ–ಉದ್ಯೋಗ–ಲಭ್ಯವಿಲ್ಲದ ವಿದ್ಯಮಾನದ ಸಂದರ್ಭದಲ್ಲಿ, ಆನ್–ಡಿಮ್ಯಾಂಡ್ ಅರ್ಥವ್ಯವಸ್ಥೆಯಿಂದ ಸಶಕ್ತರಾಗುವ ಬದಲು, ಈ ಗಿಗ್ ದುಡಿಮೆಗಾರರ ಪರಿಸ್ಥಿತಿ ಹೀನಾಯವಾಗಿದೆ. ತಮ್ಮ ಉದ್ಯೋಗವನ್ನು ತಾವೇ ಕಲ್ಪಿಸಿಕೊಂಡು ತುಂಡು ಗುತ್ತಿಗೆ ರೀತಿಯ ಕೆಲಸಗಳನ್ನು ನಿರ್ವಹಿಸುವ ಈ ಗಿಗ್ ದುಡಿಮೆಗಾರರು ಖಂಡಿತವಾಗಿಯೂ ಉದ್ಯಮಿಗಳಲ್ಲ. ತಮ್ಮ ಶ್ರಮವನ್ನು ಮಾರಾಟ ಮಾಡುವ ಬಲವಂತಕ್ಕೆ ಒಳಗಾಗಿರುವ ಜನರ ಅತ್ಯಂತ ಅನಿಶ್ಚಿತ ಪದರದಲ್ಲಿರುವ ಈ ದುಡಿಮೆಗಾರರು ನಿಜಕ್ಕೂ ಹೊಂದಿರುವ ಏಕೈಕ ಸರಕು ಎಂದರೆ, ಅವರ ಶ್ರಮಶಕ್ತಿಯೇ.

ತುಂಡು ಕೆಲಸವೂ ಮತ್ತು ಮಿಗುತಾಯ ಮೌಲ್ಯವೂ

ಶ್ರಮ ಸಂಬಂಧಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಗಿಗ್ ಅರ್ಥವ್ಯವಸ್ಥೆಯಲ್ಲಿ ನಾವು ಇಂದು ಕಾಣಬಹುದಾದ ಕೆಲವು ಲಕ್ಷಣಗಳನ್ನು ಹೋಲುವ ಅಂಶಗಳನ್ನು, ಕಾರ್ಲ್ ಮಾರ್ಕ್ಸ್ ತಮ್ಮ ಕೃತಿ‘ಬಂಡವಾಳ’ದಲ್ಲಿ ಗುರುತಿಸಿದ್ದರು. ‘ಬಂಡವಾಳ’ ಸಂಪುಟ 1ರ ‘ತುಂಡು ಕೆಲಸದ ಕೂಲಿ’ ಅಧ್ಯಾಯದಲ್ಲಿ, ಈ ರೀತಿಯ ವೇತನವು (ಪಾವತಿ) ಸಂಪೂರ್ಣವಾಗಿ ಹೊಸದಲ್ಲ ಮತ್ತು ಅದು ಪಾವತಿಯ ಇತರ ರೂಪಗಳ ಜೊತೆಯಲ್ಲೇ ಇರುತ್ತದೆ ಎಂಬುದನ್ನು ಮಾರ್ಕ್ಸ್ ವಿವರಿಸಿದ್ದರು. "ವೇತನದ ಎರಡೂ ರೂಪಗಳು ಏಕ ಕಾಲದಲ್ಲಿ ಅಕ್ಕ ಪಕ್ಕದಲ್ಲೇ ಇರುತ್ತವೆ" ಎಂಬುದನ್ನೂ ಮಾರ್ಕ್ಸ್ ಹೇಳಿದ್ದರು. ಕೂಲಿ ಪಾವತಿಯ ರೂಪವು, ಅದು ತುಂಡು (ಒಂದು ನಿರ್ದಿಷ್ಟ ಪ್ರಮಾಣ) ಕೆಲಸ ಆಧರಿಸಿದ ಲೆಕ್ಕವೇ ಇರಲಿ ಅಥವಾ ಕೆಲಸದ ಸಮಯ ಆಧರಿಸಿದ ಲೆಕ್ಕವೇ ಇರಲಿ, ‘ಯಾವ ರೂಪದಲ್ಲಿದ್ದರೂ ಸಹ, ಅದು ಕೂಲಿಯ ಮೂಲಭೂತ ಸ್ವರೂಪವನ್ನು ಬದಲಾಯಿಸುವುದಿಲ್ಲ ಮತ್ತು ಬಂಡವಾಳಶಾಹಿ ಕೂಲಿಯ ರೀತಿ–ನೀತಿಗಳಿಗೆ ವಿರುದ್ಧವಾಗಿಲ್ಲ. ಗಿಗ್ ವ್ಯವಸ್ಥೆಯಲ್ಲಿ ಕಾಣಬರುವ ವೇತನ ಕಡಿತದ ಸಮಸ್ಯೆಯ ಬಗ್ಗೆ ಮಾರ್ಕ್ಸ್ ಹೀಗೆ ಹೇಳಿದ್ದರು: ’ಇಲ್ಲಿ ಶ್ರಮದ ಗುಣಮಟ್ಟವನ್ನು ಕೃತಿಯೇ ನಿಯಂತ್ರಿಸುತ್ತದೆ’; ತುಂಡು ಕೆಲಸದ ಬೆಲೆಯನ್ನು ಪೂರ್ಣವಾಗಿ ಪಾವತಿಸಬೇಕಾದರೆ ಅದರ ಸರಾಸರಿ ಗುಣಮಟ್ಟವು ಉತ್ತಮವಾಗಿರಬೇಕಾಗುತ್ತದೆ. ಸರಕು–ಸೇವೆಗಳು ಗ್ರಾಹಕರ ಅಭಿರುಚಿ–ಮೌಲ್ಯಮಾಪನಗಳಿಗೆ ಒಳಪಡುವುದರಿಂದಾಗಿ, ಮಾರಾಟವಾದ ಸರಕನ್ನು ಗ್ರಾಹಕರು ಕೆಲವೊಮ್ಮೆ ಒಲ್ಲೆ ಎಂದು ಹಿಂತಿರುಗಿಸಿದಾಗ, ಅದರಿಂದಾದ ನಷ್ಟವನ್ನು ಕೆಲಸಗಾರ ಭರಿಸುವುದು ಮಾತ್ರವಲ್ಲದೆ ಆತ ಒಂದು ನಿರ್ದಿಷ್ಟ ಅವಧಿಯವರೆಗೆ ಕೆಲಸ ಮಾಡದಂತೆ ತಡೆ ಹಿಡಿಯಲೂ ಬಹುದು. ಇನ್ನೂ ಮುಂದೆ ಹೋಗಿ ಮಾರ್ಕ್ಸ್, ಈ ದೃಷ್ಟಿಕೋನದಿಂದ, ಬಂಡವಾಳಶಾಹಿಗಳು ಎಸಗುವ ದ್ರೋಹ–ವಂಚನೆಗಳಿಗೆ ಮತ್ತು ವೇತನ ಕಡಿತಗಳಿಗೆ, ವೇತನಕ್ಕಾಗಿ ತುಂಡು ಕೂಲಿ ಪದ್ಧತಿಯು ಒಂದು ಅತ್ಯಂತ ಫಲಪ್ರದ ಮೂಲವಾಗುತ್ತದೆ ಎಂದಿದ್ದರು.

ಶ್ರಮ ಶಕ್ತಿಯೂ ಒಂದು ಸರಕು ಎಂಬುದನ್ನು ಮಾರ್ಕ್ಸ್ ನಮಗೆ ಬೋಧಿಸಿದ್ದಾರೆ. ಒಂದು ಸರಕಿನ ಮೌಲ್ಯವನ್ನು ಸಾಮಾಜಿಕವಾಗಿ ವ್ಯಯಿಸಲಾದ ಅಗತ್ಯವಾದ ಶ್ರಮ–ಸಮಯದ ಮೂಲಕ ನಿರೂಪಿಸುವ ರೀತಿಯಲ್ಲೇ ಶ್ರಮ ಶಕ್ತಿಯ

ಪುಟ 14 ಕ್ಕೆ

ಅನಿಯತ, ಅಭದ್ರ ಉದ್ಯೋಗಗಳನ್ನು ನೆಲೆಗೊಳಿಸುವ ಹುನ್ನಾರ

–ಪುಟ 13 ರಿಂದ

ಮೌಲ್ಯವನ್ನೂ ವ್ಯಾಖ್ಯಾನಿಸಬಹುದು. ಶ್ರಮ-ಶಕ್ತಿಯಿಂದ ಪಡೆದ ವಿನಿಮಯ ಮೌಲ್ಯವನ್ನು ಜೀವನೋಪಾಯದ ಸಾಧನಗಳಿಗಾಗಿ ಖರ್ಚು ಮಾಡಲಾಗುತ್ತದೆ. ಬಂಡವಾಳಶಾಹಿ ಸಮಾಜದಲ್ಲಿ, ಉದ್ಯಮದ ಲಾಭದ ರೂಪದಲ್ಲಿ ಸರಾಸರಿಯಾಗಿ ವ್ಯಕ್ತಗೊಳ್ಳುವ ಮಿಗುತಾಯ ಮೌಲ್ಯವು ಬಂಡವಾಳದ ಇತರ ರೂಪಗಳೊಂದಿಗೆ ಸೇರಿಕೊಂಡು ಬಂಡವಾಳದ ಸರಾಸರಿ ಸಂಚಯದ ಒಂದು ಆಕರವಾಗುತ್ತದೆ. ಮಿಗುತಾಯ ಮೌಲ್ಯವು ಬಂಡವಾಳಶಾಹಿಯ ಮುಖ್ಯ ಪ್ರೇರಕ ಶಕ್ತಿಯಾಗಿದೆ. ಈಗ, ಒಬ್ಬ ಗಿಗ್ ಕೆಲಸಗಾರನಿಗೆ ಕೂಲಿಯನ್ನು ಪ್ರತಿ ತುಂಡು ಕೆಲಸದ ಲೆಕ್ಕದಲ್ಲಿ ಪಾವತಿಸಲಾಗುತ್ತದೆ, ಪ್ರತಿ ಗಂಟೆಯ ಲೆಕ್ಕದಲ್ಲಿ ಅಲ್ಲ; ಇದು ಮಿಗುತಾಯ ಮೌಲ್ಯವನ್ನು ಪೂರ್ಣವಾಗಿ ಹಿಂಡಲು 'ಜಗಲಿಕಟ್ಟೆ'(ಪ್ಲಾಟ್‌ಫಾರ್ಮ್)ಗೆ ಅವಕಾಶ ನೀಡುತ್ತದೆ. ಒಬ್ಬ ಗಿಗ್ ಕೆಲಸಗಾರನು ಒಂದು ಕಾರ್ಯಭಾರವನ್ನು ಪೂರ್ಣಗೊಳಿಸಲು ತೆಗೆದುಕೊಳ್ಳುವ ಸಮಯವು ಉತ್ಪಾದಕ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಈ ಉತ್ಪಾದಕ ಸಾಮರ್ಥ್ಯವು ಮಾರುಕಟ್ಟೆಯ ಪರಿಸ್ಥಿತಿ ಮತ್ತು ಇತರ ಅಂಶಗಳನ್ನು ಅವಲಂಬಿಸಿರುತ್ತದೆ. ಉತ್ಪಾದಕ ಸಾಮರ್ಥ್ಯವು ಎಷ್ಟು ಉನ್ನತ ಮಟ್ಟದಲ್ಲಿರುತ್ತದೆಯೋ, ಪ್ಲಾಟ್‌ಫಾರ್ಮ್‌ನಿಂದ ಉತ್ಪತ್ತಿಯಾಗುವ ಮತ್ತು ಅದರಿಂದ ಸ್ವಾಧೀನಪಡಿಸಿಕೊಳ್ಳುವ ಮಿಗುತಾಯ ಮೌಲ್ಯವೂ ಸಹ ಅಷ್ಟೇ ಉನ್ನತ ಮಟ್ಟದಲ್ಲಿರುತ್ತದೆ. ಅದರಿಂದ ಗಿಗ್ ಕೆಲಸಗಾರನಿಗೆ ಏನೂ ಪ್ರಯೋಜನವಿಲ್ಲ. ಮಿಗುತಾಯ ಮೌಲ್ಯದ ವಿತರಣೆಯ ಬಗ್ಗೆ, ಚೌಕಾಶಿ ಮಾಡುವ ಮಾತಿರಲಿ, ಅವನು ಚಕಾರ ಎತ್ತುವಂತಿಲ್ಲ. ಹೊಂದಿಕೊಳ್ಳುವ ಕೆಲಸದ ಸಮಯದ ಪರಿಕಲ್ಪನೆಯನ್ನು ಆಧರಿಸಿದ ಗಿಗ್ ಅರ್ಥವ್ಯವಸ್ಥೆಯು ಕೆಲಸದ ಸಮಯದ ರೂಢಿಯ ಪರಿಕಲ್ಪನೆಯನ್ನು ಮಸುಕಾಗಿಸಿದೆ ಮತ್ತು 24 ಗಂಟೆಗಳ ಕೆಲಸದ ಸಂಸ್ಕೃತಿಯ ಒಂದು ವಾತಾವರಣವನ್ನು ನಿರ್ಮಿಸಿದೆ. ಗಿಗ್ ಕೆಲಸಗಾರರಿಂದ ಪ್ರತಿರೋಧವಿಲ್ಲದೆ ಅವರ ಕೆಲಸದ ಸಮಯವನ್ನು ವಿಸ್ತರಿಸುವ ಮೂಲಕ ಪ್ಲಾಟ್‌ಫಾರ್ಮ್‌ಗಳು ಹೇಗೆ ಒಂದು ಅಸಹಜ ರೀತಿಯಲ್ಲಿ ಮಿಗುತಾಯ ಮೌಲ್ಯವನ್ನು ಅಧಿಕವಾಗಿ ಹಿಂಡುತ್ತವೆ ಎಂಬುದಕ್ಕೆ ಇದು ಮತ್ತೊಂದು ಉದಾಹರಣೆ.

ನೀತಿ ಆಯೋಗದ ಶಿಫಾರಸುಗಳು: ಬಾಯಿ ಮಾತಿನ ಉಪಚಾರ

ನೀತಿ ಆಯೋಗದ ಶಿಫಾರಸುಗಳು ಕಣ್ಣಿಗೆ ಮಣ್ಣೆರಚುತ್ತವೆ. ಅದಲ್ಲದೆ ಬೇರೆ ಏನೂ ಅಲ್ಲ. ಜಾಗತಿಕ ಬಂಡವಾಳಶಾಹಿ ಪ್ರವೃತ್ತಿಯ ಮಾದರಿಯಲ್ಲಿ ಸಾಂಪ್ರದಾಯಿಕ ವಲಯಗಳಲ್ಲಿಯೂ ಸಹ ಹೆಚ್ಚು ಹೆಚ್ಚು ಅನಿಶ್ಚಿತ ಉದ್ಯೋಗಗಳನ್ನು ಪರಿಚಯಿಸಲು ನೀತಿ ಆಯೋಗವು ಬಯಸುತ್ತದೆ. 'ಸ್ಕಿಲ್ ಇಂಡಿಯಾ' ಕಾರ್ಯಕ್ರಮದ ರೀತಿಯಲ್ಲಿ, ನೀತಿ ಆಯೋಗವು ಪ್ರಸ್ತಾಪಿಸಿರುವ 'ಪ್ಲಾಟ್‌ಫಾರ್ಮ್ ಇಂಡಿಯಾ' ಕಾರ್ಯಕ್ರಮದ ವಿಚಾರವು ಅರ್ಥವ್ಯವಸ್ಥೆಯಲ್ಲಿ ಈಗಾಗಲೇ ವ್ಯಾಪಕಗೊಂಡಿರುವ ಜಗಲೀಕರಣದ (platformisation) ವೇಗವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಅಂದರೆ, ಈ ವಿದ್ಯಮಾನವು ಇನ್ನೂ ಜಾರಿಯಲ್ಲಿರುವ ಉದ್ಯೋಗದಾತ-ಉದ್ಯೋಗಿ ಸಂಬಂಧವನ್ನು ಅಪಾಯಕ್ಕೆ ಸಿಲುಕಿಸುತ್ತದೆ. ಗಿಗ್ ಅರ್ಥವ್ಯವಸ್ಥೆಯನ್ನು ಔಪಚಾರಿಕಗೊಳಿಸುವ ಸಾಧ್ಯತೆಗಳನ್ನು ಅನ್ವೇಷಿಸುವುದಾಗಿ ನೀತಿ ಆಯೋಗ ಹೇಳಿದೆ. ಅಂತಹ ಔಪಚಾರಿಕೀಕರಣವು ವಾಸ್ತವವಾಗಿ ಅನಿಶ್ಚಿತ ಸ್ವರೂಪದ ಉದ್ಯೋಗಗಳನ್ನು ನ್ಯಾಯಸಮ್ಮತವಾಗಿಸುತ್ತದೆ ಮತ್ತು ಜೊತೆಯಲ್ಲಿ ಕಾರ್ಮಿಕರ ಉತ್ಪಾದಕತೆಯಲ್ಲಿ ನಿರಂತರ ಹೆಚ್ಚಳದೊಂದಿಗೆ ಮಿಗುತಾಯದ/ಲಾಭದ ನಿರ್ದಯ ವಿನಿಯೋಗಕ್ಕೆ ಕಾರಣವಾಗುತ್ತದೆ. ಆಳುವ ಸರ್ಕಾರದ ನಿಜವಾದ ಉದ್ದೇಶವೆಂದರೆ, ದೇಶದ ಉತ್ಪಾದಕ ಕಾರ್ಯಪಡೆಯನ್ನು ಒಂದು ಸಾಂದರ್ಭಿಕ, ತುಂಡು ಕೂಲಿ ಕಾರ್ಮಿಕರ ಪಡೆಯಾಗಿ ಪರಿವರ್ತಿಸುವುದೇ ಆಗಿದೆ. ಹಾಗಾಗಿ, ಪೂರ್ಣವಾಗಿ ಇದೊಂದು ಕಾರ್ಮಿಕ-ವಿರೋಧಿ ಕ್ರಮವಾಗಿದೆ ಮತ್ತು ಉದ್ಯೋಗದಾತ ವರ್ಗದ ಹಿತಾಸಕ್ತಿಗಳನ್ನು ಕಾಪಾಡಲು ಕಾರ್ಮಿಕ ಪಡೆಯನ್ನು ಮತ್ತಷ್ಟು ಅಸ್ಥಿರಗೊಳಿಸಲು ಇದನ್ನು ವಿನ್ಯಾಸಗೊಳಿಸಲಾಗಿದೆ. ಅಂತಿಮವಾಗಿ, ಕೈಗಾರಿಕಾ ವಲಯದಲ್ಲಿನ ಎಲ್ಲಾ ಉದ್ಯೋಗಗಳನ್ನೂ 'ಹಂಗಾಮಿನ' (ಸೀಜನಲ್) ಉದ್ಯೋಗಗಳನ್ನಾಗಿ ಪರಿವರ್ತಿಸಲು ಪ್ರಯತ್ನಿಸಲಾಗುವುದು. ಮೋದಿ ಸರ್ಕಾರವು 'ನಿಶ್ಚಿತ ಅವಧಿಯ ಉದ್ಯೋಗ' ಎಂಬ ಪರಿಕಲ್ಪನೆಯನ್ನು ಪರಿಚಯಿಸಿತ್ತು ಮತ್ತು ನಂತರ ಅದನ್ನು ಕೆಲಸದ ಪ್ರಕ್ರಿಯೆಯನ್ನು ವಿಕೇಂದ್ರೀಕರಣಗೊಳಿಸುವ ಮತ್ತು ಕೆಲಸ ಮಾಡುವ ಸ್ಥಳದಲ್ಲಿರುವ ಹಾಲಿ-ಸೌಲಭ್ಯಗಳನ್ನು ಕಿತ್ತುಹಾಕುವ ಗುರಿಯನ್ನು ಹೊಂದಿದ ಕಾರ್ಮಿಕ ಸಂಹಿತೆಗಳಲ್ಲಿ ಅಳವಡಿಸಿಕೊಳ್ಳಲಾಯಿತು.

ತಮ್ಮದೇ ಆದ ಉದ್ಯಮಗಳನ್ನು ಸ್ಥಾಪಿಸಲು ಆಸಕ್ತಿ ಹೊಂದಿರುವ ಪ್ಲಾಟ್‌ಫಾರ್ಮ್ ಕೆಲಸಗಾರರಿಗಾಗಿಯೇ ಸಾಲ-ಸೌಲಭ್ಯಗಳನ್ನು ವಿನ್ಯಾಸಗೊಳಿಸುವ ಮೂಲಕ ಸಾಂಸ್ಥಿಕ ಸಾಲದ ಲಭ್ಯತೆಯನ್ನು ಹೆಚ್ಚಿಸಬಹುದು ಎಂದು ನೀತಿ ಆಯೋಗ ಶಿಫಾರಸು ಮಾಡಿದೆ. ಇದು ಒಂದು ಪ್ರಹಸನವೂ ಹೌದು. ಒಂದು ಮೋಸಗೊಳಿಸುವ ತೋರಿಕೆಯ ಕ್ರಮವೂ(ತಿಟಿಜಠಿತಿ-ಜಡಿಞುಟಿರ) ಹೌದು. ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯ ಕೊರತೆಯು ತೀವ್ರವಾಗಿದ್ದಾಗ, ಅಗ್ಗದ ಸಾಲದ ಖಾತರಿಯು ಕೆಲಸ ಮಾಡುವುದಿಲ್ಲ. ಬೇಡಿಕೆಯನ್ನು ಹೆಚ್ಚಿಸುವ ಕ್ರಮಗಳನ್ನು ಕೈಗೊಳ್ಳದ ಹೊರತು, ವ್ಯಕ್ತಿಗಳಿಗೆ ಎಷ್ಟೇ ಸಾಲಗಳನ್ನು ಒದಗಿಸಿದರೂ ಪ್ರಯೋಜನವಾಗುವುದಿಲ್ಲ. ಬಂಡವಾಳಗಾರರು ಉತ್ಪಾದನೆಯನ್ನು ಹೆಚ್ಚಿಸಲು ಬಯಸಿದಾಗ ಮಾತ್ರ ಅವರು ತಮ್ಮ ದುಡಿಯುವ ಬಂಡವಾಳಕ್ಕಾಗಿ ಸಾಲ ಪಡೆಯುತ್ತಾರೆ. ಅದಕ್ಕಾಗಿ ಬೇಡಿಕೆ ಇರಬೇಕಾಗುತ್ತದೆ.

ಅಮೆರಿಕಾ, ಬ್ರಿಟನ್ ಮತ್ತು ಇತರ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳ ಉದಾಹರಣೆಗಳನ್ನು ಉಲ್ಲೇಖಿಸಿ, ನೀತಿ ಆಯೋಗವು ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ, ವಿಮೆ, ಪಿಂಚಣಿ ಮತ್ತು ಇತರ ಪ್ರಯೋಜನಗಳನ್ನು ಒದಗಿಸುವಂತೆ ಶಿಫಾರಸು ಮಾಡಿದೆ. ಸಾಮಾಜಿಕ ಭದ್ರತಾ ಸಂಹಿತೆ 2020 ರ ಅಡಿಯಲ್ಲಿ ಕಲ್ಪಿಸಿದ ರೀತಿಯಲ್ಲಿ ಸಾಮಾಜಿಕ ಭದ್ರತೆಯ ಈ ಪ್ರಸ್ತಾಪಗಳನ್ನು ಸರ್ಕಾರದ ಸಹಯೋಗದೊಂದಿಗೆ ವಿನ್ಯಾಸಗೊಳಿಸಬಹುದು ಮತ್ತು ನೀಡಬಹುದು ಎಂದೂ ಅದು ಹೇಳಿದೆ. ಇದು ನೀತಿ ಆಯೋಗವು ಹರಡಿರುವ ಒಂದು ಅಪ್ಪಟ ಸುಳ್ಳು. ಸಾಮಾಜಿಕ ಭದ್ರತಾ ಸಂಹಿತೆಗೆ ಸಂಬಂಧಿಸಿದಂತೆ ಹೇಳುವುದಾದರೆ, ವಾಸ್ತವವಾಗಿ, ಅರೆಕಾಲಿಕ ಕೆಲಸಗಾರರು, ಸ್ವಂತ ಖಾತೆ ಕಾರ್ಮಿಕರು ಮತ್ತು ಕೃಷಿ ಕಾರ್ಮಿಕರು ಇದರ ವ್ಯಾಪ್ತಿಗೆ ಬರುವುದಿಲ್ಲ. ಗಿಗ್ ಕಾರ್ಮಿಕರಿಗೆ ಕನಿಷ್ಠ ವೇತನ ಕೊಡುವ ಬಗ್ಗೆ ಮತ್ತು ಅವರನ್ನು ಭವಿಷ್ಯ ನಿಧಿಯ ವ್ಯಾಪ್ತಿಯೊಳಗೆ ತರುವ ಬಗ್ಗೆ ಅಧ್ಯಯನ ವರದಿಯು ಮೌನವಾಗಿದೆ. ಇಎಸ್‌ಐ ಯೋಜನೆಯಡಿ ಕಾರ್ಮಿಕರಿಗೆ ವೈದ್ಯಕೀಯ ಆರೈಕೆ ಲಭ್ಯವಿರುವ ರೀತಿಯಲ್ಲಿ ಈ ಗಿಗ್ ಕಾರ್ಮಿಕರಿಗೆ ಭವಿಷ್ಯ ನಿಧಿ ಅಥವಾ ವೈದ್ಯಕೀಯ ಆರೈಕೆಗಳ ಲಭ್ಯತೆಯನ್ನು ಸರ್ಕಾರ ಹೇಗೆ ಖಚಿತಪಡಿಸುತ್ತದೆ ಎಂಬುದರ ಬಗ್ಗೆಯೂ ವರದಿ ಮೌನವಾಗಿದೆ. ಸಾಮಾಜಿಕ ಭದ್ರತಾ ಸಂಹಿತೆಯಲ್ಲಿ ಈ ಗಿಗ್ ಕಾರ್ಮಿಕರಿಗೆ ಪಿಂಚಣಿ, ಭವಿಷ್ಯ ನಿಧಿ ಮುಂತಾದ ಸೌಲಭ್ಯಗಳನ್ನು ನೀಡಲು ಅನುವಾಗುವಂತಹ ನಿಬಂಧನೆಗಳಿಲ್ಲ. ಹಾಗಾಗಿ ನೀತಿ ಆಯೋಗವು ಇಂತಹ ಸಾಮಾಜಿಕ ಭದ್ರತೆ, ಪಿಂಚಣಿ, ಇತ್ಯಾದಿಗಳ ಬಗ್ಗೆ ಉದುರಿಸುವ ಎಲ್ಲ ಮಾತುಗಳೂ ಮೋಸವೇ. ಈ ವಾಸ್ತವವನ್ನು ಮರೆಮಾಚುವ ಅದರ ಮುಖ್ಯ ಉದ್ದೇಶವೆಂದರೆ, ಗಿಗ್/ಪ್ಲಾಟ್‌ಫಾರ್ಮ್ ಕೆಲಸದ ಕಾರ್ಯವಿಧಾನ-ವೈಖರಿಗಳ ಮಾರ್ಗವಾಗಿ ಉದ್ಯೋಗ ಸಂಬಂಧಗಳನ್ನು ಅಭದ್ರಗೊಳಿಸುವುದು ಮತ್ತು ಅವುಗಳನ್ನು ಕಾನೂನುಬದ್ಧಗೊಳಿಸುವುದೇ ಆಗಿದೆ. ಬಂಡವಾಳಗಾರ ವರ್ಗವು ಯಾವಾಗಲೂ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಕೂಲಿಯನ್ನು ಕೊಡಲು ಮತ್ತು ಕೆಲಸದ ಅವಧಿಯನ್ನು ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಹೆಚ್ಚಿಸಲು ಪ್ರಯತ್ನಿಸುತ್ತದೆ. ಈ ಅಸಹ್ಯಕರ ಮೋಸದ ಆಟವನ್ನು ಬಯಲಿಗೆಳೆಯಲೇಬೇಕು.

ಅರಣ್ಯ ಸಂರಕ್ಷಣಾ ಕಾಯ್ದೆಯನ್ನು ಕಾರ್ಪೊರೇಟೀಕರಣ ಮಾಡುವ ಹುನ್ನಾರ

–ಪುಟ 12 ರಿಂದ

ಕಾಡುಗಳು ಖಂಡಿತವಾಗಿಯೂ "ಅನುಪಯುಕ್ತ" ಅಲ್ಲ, ಏಕೆಂದರೆ ಅವು ಸುಮಾರು 100 ಮಿಲಿಯನ್ ಜನರ ಜೀವನೋಪಾಯದ ಅಗತ್ಯಗಳನ್ನು ಪೂರೈಸುತ್ತವೆ." ಎಂದು ಅದು ಹೇಳಿತ್ತು. ಈ ಮಿಲಿಯಗಟ್ಟಲೆ ಜನರ ಗತಿಯೇನು ಎಂಬುದರ ಕುರಿತು ಈ ನಿಬಂಧನೆಗಳಲ್ಲಿ ಯಾವುದೇ ಉಲ್ಲೇಖ ಇಲ್ಲ. ಅರಣ್ಯ ಹಕ್ಕುಗಳ ಕಾಯ್ದೆಯಲ್ಲಿ ಅರಣ್ಯಗಳು ಎಂದರೆ ಅವುಗಳಲ್ಲಿ ವರ್ಗೀಕೃತವಲ್ಲದ ಅರಣ್ಯಗಳೂ ಸೇರುತ್ತವೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಬುಡಕಟ್ಟು ಸಮುದಾಯಗಳು ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳು ಈ ಅರಣ್ಯಗಳಲ್ಲಿ ಕಾನೂನಾತ್ಮಕ ಹಕ್ಕುಗಳನ್ನು ಹೊಂದಿದ್ದಾರೆ. ಈ ನಿಯಮಾವಳಿಗಳಲ್ಲಿ ಇದರ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಹೀಗಾಗಿ ಈ ಭೂ ಬ್ಯಾಂಕುಗಳು ಮತ್ತು ಕಡ್ಡಾಯ ಪರಿಹಾರಾರ್ಥ ಅರಣ್ಯೀಕರಣದ ಹೆಸರಿನಲ್ಲಿ ಬಳಕೆದಾರ ಏಜೆನ್ಸಿಗಳಿಗೆ ಇಂತಹ ಭೂಮಿಯನ್ನು ಲಭ್ಯಗೊಳಿಸುವುದು ಕೂಡ ಭೂಮಿಯ ಮೇಲಿನ ಜನರ ಅಸ್ತಿತ್ವದಲ್ಲಿರುವ ಹಕ್ಕುಗಳ ಮೇಲೆ ಅತ್ಯಂತ ಹಾನಿಕಾರಕ ಪರಿಣಾಮವನ್ನು ಬೀರುತ್ತದೆ.

ಇದಲ್ಲದೆ, ನಿಯಮಗಳು ಬಳಕೆದಾರ ಏಜೆನ್ಸಿಗೆ ಪರಿಹಾರಾರ್ಥ ಅರಣ್ಯೀಕರಣಕ್ಕಾಗಿ ಭೂಮಿ ಯೋಜನೆಯನ್ನು ಪ್ರಾರಂಭಿಸಬೇಕಾದ ರಾಜ್ಯದಲ್ಲಿ ಲಭ್ಯವಿಲ್ಲದಿದ್ದರೆ, ಅದನ್ನು ಪಡೆಯಲು ಬೇರೆ ಯಾವುದೇ ರಾಜ್ಯದಲ್ಲಿ ಮಾತುಕತೆ ನಡೆಸುವ ಹಕ್ಕನ್ನು ನೀಡುತ್ತದೆ. ಹೀಗಾಗಿ ದೊಡ್ಡ ಪ್ರಮಾಣದಲ್ಲಿ ಅರಣ್ಯ ಭೂಮಿಯನ್ನು ಕಾರ್ಪೊರೇಟ್ ಮತ್ತು ಖಾಸಗಿ ಕಂಪನಿಗಳಿಗೆ ಹಸ್ತಾಂತರಿಸುವುದು ವ್ಯಾಪಕ ಪರಿಣಾಮ ಬೀರುತ್ತದೆ. ಏಕೆಂದರೆ ಇತರ ರಾಜ್ಯಗಳಲ್ಲಿಯೂ ಅರಣ್ಯೇತರ ಭೂಮಿಯನ್ನು ಪರಿಹಾರಾರ್ಥ ಅರಣ್ಯೀಕರಣದ ಹೆಸರಿನಲ್ಲಿ ಹಣಪಾವತಿ ಮಾಡಿದರೆ ಅದು ಅವರಿಗೆ ಲಭ್ಯವಾಗುವಂತೆ ಮಾಡಲಾಗುತ್ತದೆ.

ಅರಣ್ಯೀಕರಣ. ಹಣಪಾವತಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಹೋಗುತ್ತದೆ. ಸಂತ್ರಸ್ತರಿಗೆ ಪರಿಹಾರದಲ್ಲಿ ಯಾವುದೇ ಪಾಲು ಇರುವುದಿಲ್ಲ. ಭೂರಹಿತರಿಗೆ ಹಂಚಬೇಕಾದ ಭೂಮಿ ಅರಣ್ಯೀಕರಣಕ್ಕಾಗಿ ಕಾರ್ಪೊರೇಟ್‌ಗಳಿಗೆ ಹೋಗುತ್ತದೆ.

4. ಈ ಮೊದಲು ನಮೂದಿಸಿದಂತೆ 1000 ಹೆಕ್ಟೇರ್‌ಗಿಂತ ಹೆಚ್ಚಿನ ಅಪಾರ ಪ್ರಮಾಣದ ಭೂಮಿಯಲ್ಲದೆ ಈ ನಿಯಮಗಳು,

ಇದುವರೆಗೆ ಅನುಲ್ಲಂಘನೀಯ ಎಂದು ಪರಿಗಣಿಸಲಾದ ನಿರ್ಬಂಧಿತ ಪ್ರದೇಶಗಳಲ್ಲಿಯೂ ಯೋಜನೆಗಳಿಗೆ ಅನುಮತಿ ಕೊಡುತ್ತದೆ. ಕಲಮು 9 (5) (ಇ) ಅಡಿಯಲ್ಲಿ ಹೇಳಲಾಗಿದೆ. ಸಲಹಾ ಸಮಿತಿಯು ಯೋಜನೆಯನ್ನು ಪರೀಕ್ಷಿಸುವಾಗ "ಅರಣ್ಯೇತರ ಉದ್ದೇಶಗಳಿಗೆ ಬಳಸಬೇಕೆಂದಿರುವ ಭೂಮಿ ರಾಷ್ಟ್ರೀಯ ಉದ್ಯಾನವನ, ವನ್ಯಜೀವಿ ಅಭಯಾರಣ್ಯ, ಹುಲಿ ಸಂರಕ್ಷಿತ ಪ್ರದೇಶ, ಗೊತ್ತುಪಡಿಸಿದ ಅಥವಾ ಗುರುತಿಸಲಾದ ಹುಲಿ ಅಥವಾ ವನ್ಯಜೀವಿ ಕಾರಿಡಾರ್ ಅಥವಾ ಯಾವುದಾದರೂ ಅಳಿವಿನಂಚಿನಲ್ಲಿರುವ ಅಥವಾ ಅಪಾಯದಲ್ಲಿರುವ ವೃಕ್ಷ ಜಂತು ಜಾಲವಿರುವ ಸ್ಥಳವಾಗಿದ್ದರೆ ಸಾಕಷ್ಟು ಸಮರ್ಥನೆಯನ್ನು ನೀಡಲಾಗಿದೆಯೇ ಮತ್ತು ಸೂಕ್ತ ಉಪಶಮನ ಕ್ರಮಗಳ ಪ್ರಸ್ತಾವ ಇದೆಯೇ" ಎಂದು ನೋಡಬೇಕು ಎನ್ನಲಾಗಿದೆ. ಇದರ ಅರ್ಥವೇನೆಂದರೆ ಸಮರ್ಥನೆಯು ಸಾಕಷ್ಟಿದ್ದರೆ, ಈ ಎಲ್ಲಾ "ಅನುಲ್ಲಂಘನೀಯ ಪ್ರದೇಶ"ಗಳನ್ನು ಖಾಸಗಿ ವಲಯದ ಯೋಜನೆಗಳಿಗೆ ತೆರೆದು ಕೊಡಲಾಗುವುದು. ಇದು ಈ ಪ್ರದೇಶಗಳಲ್ಲಿ ವಾಸಿಸುತ್ತಿರುವ ಸಾವಿರಾರು ಬುಡಕಟ್ಟು ಕುಟುಂಬಗಳನ್ನು ಎಬ್ಬಿಸಿ ಹೊರಹಾಕಲು ಸಚಿವಾಲಯವು ಅನುಸರಿಸುವ ದಬ್ಬಾಳಿಕೆಯ ಕ್ರಮಗಳಿಗೆ ತೀರಾ ವ್ಯತಿರಿಕ್ತವಾಗಿದೆ.

ಮೇಲಿನವು ಈ ನಿಯಮಗಳಿಗೆ ಇರುವ ಆಕ್ಷೇಪಗಳಿಗೆ ಕೆಲವೇ ಉದಾಹರಣೆಗಳಷ್ಟೇ. ಸಂಪೂರ್ಣ ಪಟ್ಟಿಯಲ್ಲ. ನಿಯಮಗಳಲ್ಲಿನ ಬದಲಾವಣೆಯ ಬಾಧಿತರೊಂದಿಗೆ ಪೂರ್ವಭಾವಿ ಸಮಾಲೋಚನೆ ಅಥವಾ ಚರ್ಚೆ ನಡೆಸದೇ ಇರುವ ಅಪಾರದರ್ಶಕ ಪ್ರಕ್ರಿಯೆಯಾಗಿದೆ. ಸಂಸತ್ತಿನ ಕಾರ್ಯವಿಧಾನ ಮಂಜೂರಾತಿಯ ಪ್ರಕ್ರಿಯೆಯನ್ನು ಕೇವಲ ಔಪಚಾರಿಕತೆಗೆ ಇಳಿಸಲಾಗಿದೆ. ಈ ನಿಯಮಗಳನ್ನು ಜಾರಿಗೊಳಿಸಿದಾಗ ಖಂಡಿತವಾಗಿಯೂ ಉದ್ಭವಿಸುವ ಪರಿಣಾಮಗಳಿಂದಾಗಿ, ಸರ್ಕಾರವು ಸಾರ್ವಜನಿಕ ಚರ್ಚೆ ನಡೆಯುವ ಮತ್ತು ಅಭಿಪ್ರಾಯಗಳನ್ನು ಪಡೆಯುವ ವರೆಗೆ ಅವುಗಳನ್ನು ತಡೆ ಹಿಡಿಯಬೇಕು. ಇವನ್ನು ಸಂಬಂಧಪಟ್ಟ ಸಂಸದೀಯ ಸ್ಥಾಯೀ ಸಮಿತಿಗೆ ಪರೀಕ್ಷಣೆಗೂ ಕಳಿಸಬೇಕು ಮತ್ತು ಅರಣ್ಯ ಹಕ್ಕುಗಳ ಕಾಯ್ದೆಯನ್ನು ಜಾರಿಗೊಳಿಸುವ ಜವಾಬ್ದಾರಿಯಿರುವ ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಅಭಿಪ್ರಾಯಗಳನ್ನು ಕೂಡ ಒಳಗೊಳ್ಳಬೇಕು.

ನಿಮ್ಮ ವಿಶ್ವಾಸಿ,
ಬೃಂದಾ ಕಾರಟ್

ದ್ವೇಷ ಭಾಷಣ, ಹಿಂಸಾಚಾರ ಮತ್ತು ಕೋರ್ಟ್ ಟಿಪ್ಪಣಿ

–ಪುಟ 9 ರಿಂದ

ಅರ್ಜಿಯ ಸಂಬಂಧದಲ್ಲಿ ನೀಡಿದ ಆದೇಶದಲ್ಲಿರುವ ವಾಕ್ಯಗಳು. ಸರಕಾರ ಆ ವ್ಯಕ್ತಿಗಳ ವಿಚಾರಣೆಗೆ ಅಗತ್ಯ ಮಂಜೂರಾತಿ ನೀಡದ್ದರಿಂದ್ವೇ ಅರ್ಜಿಯನ್ನು ವಜಾ ಮಾಡಲಾಯಿತು. ಅದರ ವಿರುದ್ಧ ಅಪೀಲು ಹಾಕಲಾಗುತ್ತಿದೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ದ್ವೇಷ ಭಾಷಣ ಮತ್ತು ನಂತರದ ಬೆಳವಣಿಗೆಗಳ "ಪ್ರಾರಂಭದ ಬಿಂದು" ಎಂದು ಕೊಂಡಿಯನ್ನು ಗುರುತಿಸಿರುವುದು.

ಇಂದು ಆಳುವ ವ್ಯವಸ್ಥೆಗಳ ರಾಜಕೀಯ ಕಾರ್ಯಸೂಚಿಯ ಭಾಗವಾಗಿ ದ್ವೇಷ ಭಾಷಣದ "ಸಾಮಾನ್ಯೀಕರಣ"ವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಇದಕ್ಕೆ ಕೆಲವಾರು ಮಾಧ್ಯಮ ಸಂಸ್ಥೆಗಳ ಬೆಂಬಲವೂ ಇದೆ. ಇದು ಸಮುದಾಯಗಳ ನಡುವಿನ ಸಾಮಾಜಿಕ ಸಂಬಂಧಗಳನ್ನು ಗಂಭೀರವಾಗಿ ಕಲುಷಿತಗೊಳಿಸಿದೆ. ಇಂತಹ "ಸಾಮಾನ್ಯೀಕರಣ"ದಲ್ಲಿ ದ್ವೇಷ ಆಧಾರಿತ ಪ್ರಚೋದನಕಾರೀ ಹೇಳಿಕೆಗಳನ್ನು ಖಂಡಿಸುವಲ್ಲಿ ಉನ್ನತ ಮುಖಂಡರ ಬೇಜವಾಬ್ದಾರಿ ಮತ್ತು ಉದ್ದೇಶಪೂರ್ವಕ ಮೌನ ಅಥವಾ

ಶಾಂತಿ ಮತ್ತು ಸಾಮರಸ್ಯಕ್ಕೆ ಮನವಿ ಮಾಡಲು ನಿರಾಕರಣೆಯೂ ಸೇರಿದೆ. ಅಂತರಾಷ್ಟ್ರೀಯ ಭಯೋತ್ಪಾದಕ ಗುಂಪುಗಳೊಂದಿಗೆ ನಂಟು ಹಿಂದಿದ್ದಾರೆ ಎನ್ನಲಾದ ಮುಸ್ಲಿಂ ಉಗ್ರರಿಂದ ಕನ್ಹಯ್ಯಾ ಲಾಲ್ ರವರ ಬರ್ಬರ ಮತ್ತು ಅಮಾನುಷ ಕೊಲೆ ಮತ್ತು ನಂತರ ಅದರ ➚

ದಲಿತರ ವಿರುದ್ಧ ದೌರ್ಜನ್ಯಗಳ ತಡೆಗಾಗಿ ಗಂಗಮ್ಮ ಹಂತಕನ ಬಂಧನಕ್ಕೆ ಆಗ್ರಹ

ದೊಡ್ಡಬಳ್ಳಾಪುರ ತಾಲ್ಲೂಕಿನ ಚಿಕ್ಕ ಮುದ್ದೇನಹಳ್ಳಿ ಗ್ರಾಮದಲ್ಲಿ ನಡೆದ ದಲಿತ ಮಹಿಳೆ ಗಂಗಮ್ಮ ಹತ್ಯೆ ಖಂಡಿಸಿ ಹಾಗೂ ದಲಿತರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟುವಂತೆ ಒತ್ತಾಯಿಸಿ ಸಂವಿಧಾನ ರಕ್ಷಣೆಗಾಗಿ ನಾಗರಿಕರ ವೇದಿಕೆ ನೇತೃತ್ವದಲ್ಲಿ ವಿವಿಧ ಸಂಘಟನೆಗಳಿಂದ ತಾಲ್ಲೂಕು ಕಚೇರಿ ಮುಂದೆ ಸೋಮವಾರ ಪ್ರತಿಭಟನೆ ನಡೆಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿತ್ತು.



ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ಪಿ.ಎ. ವೆಂಕಟೇಶ್ ಮಾತನಾಡಿ, 'ಇತ್ತೀಚೆಗೆ ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚಾಗುತ್ತಿವೆ. ಗ್ರಾಮೀಣ ಉದ್ಯೋಗ ಖಾತ್ರಿಯಲ್ಲಿ ಅಕ್ರಮವಾಗಿ ಹಣ ಸುಲಿಗೆ ಮಾಡುತ್ತಿರುವುದನ್ನು ಶಾಸಕರಿಗೆ ತಿಳಿಸಿದರೆಂಬ ಕಾರಣಕ್ಕೆ ಗಂಗಮ್ಮ ಅವರ ಮೇಲೆ ದೌರ್ಜನ್ಯ ಮಾಡಲಾಗಿದೆ. ಈ ಪ್ರಕರಣ ಗಂಭೀರ ಸ್ವರೂಪದಾಗಿದ್ದು, ನೊಂದ ಕುಟುಂಬಗಳಿಗೆ ನ್ಯಾಯ ಸಿಗುವವರೆಗೆ ಹೋರಾಟ ಮುಂದುವರಿಸಲಾಗುತ್ತದೆ' ಎಂದು ಹೇಳಿದರು. ಗ್ರಾಮದಲ್ಲಿ ನಡೆದ ದಲಿತ ಮಹಿಳೆ ಗಂಗಮ್ಮನವರ ಕೊಲೆ ಪ್ರಕರಣ ಮಾಧ್ಯಮಗಳಲ್ಲಿ ಪ್ರಸಾರವಾದ ಮೇಲೆ ಇಬ್ಬರು ಕೊಲೆ ಆರೋಪಿಗಳನ್ನು ಜೈಲಿಗೆ ಕಳುಹಿಸಲಾಗಿದೆ. ಆದರೆ ಇನ್ನೂ ಇಬ್ಬರು ಆರೋಪಿಗಳನ್ನು ಪೊಲೀಸರು ಇನ್ನೂ ಬಂಧಿಸಿಲ್ಲ. ಎಲ್ಲಾ ಆರೋಪಿಗಳನ್ನು ಬಂಧಿಸಬೇಕು. ಮೃತರ ಕುಟುಂಬಕ್ಕೆ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.



ಜುಲೈ 11 ರಂದು ದೊಡ್ಡಬಳ್ಳಾಪುರದಲ್ಲಿ ಡಿಹೆಚ್‌ಎಸ್ ಒಳಗೊಂಡು ವಿವಿಧ ದಲಿತ ಸಂಘಟನೆಗಳು ಜಂಟಿಯಾಗಿ ಪ್ರತಿಭಟನಾ ರ್‍ಯಾಲಿ ನಡೆಸಿ ತಹಶೀಲ್ದಾರ್ ಕಛೇರಿ ಮುಂದೆ ಸಭೆ ನಡೆಸಿ ತಹಸೀಲ್ದಾರ್, ಸಮಾಜ ಕಲ್ಯಾಣ ಅಧಿಕಾರಿ ನರೇಗಾ ಯೋಜನಾ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಗಂಗಮ್ಮ ಕೊಲೆಯಲ್ಲಿ ಅಪರಾಧಿಯಾಗಿರುವ ಚೆನ್ನಮ್ಮ ಎಂಬುವವರನ್ನು ಕೂಡ ಬಂಧಿಸಬೇಕು ಗಂಗಮ್ಮನ ಕುಟುಂಬಕ್ಕೆ ಪರಿಹಾರ ನೀಡುವುದರ ಜೊತೆಗೆ ಕುಟುಂಬದ ಒಬ್ಬರಿಗೆ ಸರ್ಕಾರಿ ಉದ್ಯೋಗ ನೀಡಬೇಕೆಂದು ಒತ್ತಾಯಿಸಲಾಯಿತು.



ಈ ಕುರಿತು ಕ್ರಮ ಜರುಗಿಸದೇ ನಿರ್ಲಕ್ಷ್ಯ ತೋರಿದರೆ ಮುಂದಿನ ಹೋರಾಟ ರೂಪಿಸಲು ಹಾಗೂ ಆ ಗ್ರಾಮದ ಸುತ್ತಮುತ್ತಲ ಜನರನ್ನು ಜಾಗೃತ್‌ಗೊಳಿಸಿ ಡಿಹೆಚ್‌ಎಸ್ ಘಟಕ ರಚಿಸಿ ಹೋರಾಟ ರೂಪಿಸಲು ನಿರ್ಧರಿಸಲಾಗಿದೆ ಎಂದು ರಾಜ್ಯ ಸಹ ಸಂಚಾಲಕ ಎನ್. ರಾಜಣ್ಣ, ತಾಲ್ಲೂಕು ಸಂಚಾಲಕ ಮಂಜುನಾಥ, ಜಿಲ್ಲಾ ಸಂಚಾಲಕ ವೆಂಕರಾಜುರವರು ತಿಳಿಸಿದ್ದಾರೆ.

ಪ್ರತಿಭಟನೆಯಲ್ಲಿ ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕರು ಎನ್.ರಾಜಣ್ಣ, ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಮುಖಂಡರಾದ ವೆಂಕಟರಾಜು, ಮಂಜುನಾಥ, ಗೂಳ್ಯಹನುಮಣ್ಣ, ಅಶೋಕ್, ಸಂಜೀವ ನಾಯಕ್, ಡಿ.ಪಿ. ಆಂಜನೇಯ, ವೆಂಕಟೇಶ್, ಕೊನಘಟ್ಟಮುನಿಕೃಷ್ಣ, ಚನ್ನಿಗರಾಯಪ್ಪ, ಡಿ.ಟಿ. ವೆಂಕಟೇಶ್, ರತ್ನಮ್ಮ ಮುಂತಾದವರಿದ್ದರು.

ಅತ್ಯಂತ ಭಯಾನಕ ಅಮಾನವೀಯ ವೀಡಿಯೊ ಬಿಡುಗಡೆ ಮಾಡುವ ಒಂದು ಭಯೋತ್ಪಾದಕ ಕೃತ್ಯಕ್ಕೆ ಎಲ್ಲಾ ಬಣ್ಣಗಳ ರಾಜಕೀಯ ವಲಯಗಳು ವ್ಯಾಪಕವಾಗಿ ಖಂಡಿಸಿವೆ. ರಾಜಸ್ತಾನ ಸರಕಾರ ಒಂದು ಕ್ಷಿಪ್ರ ಕಾರ್ಯಾಚರಣೆಯಲ್ಲಿ ಕೊಲೆಗಡುಕರನ್ನು ಬಂಧಿಸಿದೆ. ಆದರೆ ಇದರ ವಿರುದ್ಧ ವ್ಯಾಪಕ ಆಕ್ರೋಶದ ಪ್ರಯೋಜನ ಪಡೆಯಲು ಬಿಜೆಪಿ ನೇತೃತ್ವದ ಗುಂಪುಗಳು ನೂಪುರ್ ಶರ್ಮರನ್ನು ಬೆಂಬಲಿಸುವ ಘೋಷಣೆಗಳನ್ನು ಕೂಗುತ್ತ, ಆಕೆಯ ಫೋಟೋಗಳೊಮದಿಗೆ ಉದರಪುರದ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಒಬ್ಬರೇ ಒಬ್ಬ ಬಿಜೆಪಿ ಮುಖಂಡರು ಇದನ್ನು ಖಂಡಿಸಿದರೇ? ಇಂತಹ ಉದ್ವಿಗ್ನ ಸನ್ನಿವೇಶದಲ್ಲಿ ರಾಜಸ್ತಾನದ ಮುಖ್ಯಮಂತ್ರಿಗಳು ಶಾಂತಿ ಮತ್ತು ಸಾಮರಸ್ಯಕ್ಕೆ ಮನವಿ ಮಾಡುವಂತೆ ಪ್ರಧಾನ ಮಂತ್ರಿಗಳನ್ನು ಬಹಿರಂಗವಾಗಿಯೇ ವಿನಂತಿಸಿದರು. ಆದರೆ ಅವರ ಮನವಿಗೆ ಸಿಕ್ಕಿದ್ದು ಕಿವಿ ಗಡಚಿಕ್ಕುವ ಮೌನ. ಪ್ರಧಾನ ಮಂತ್ರಿಗಳು ಒಂದೇ ಒಂದು ಮಾತನ್ನಾಡಲಿಲ್ಲ. ಸಂಘ ಪರಿವಾರದ ಧ್ವಜಧಾರಿಗಳು ದ್ವೇಷಪೂರ್ಣ ಭಾಷಣಗಳನ್ನು ಮಾಡಿದ ಪ್ರತಿಯೊಂದು ಸಂದರ್ಭದಲ್ಲೂ, ಉನ್ನತ ರಾಜಕೀಯ ಮತ್ತು ಸರಕಾರೀ ಮುಖಂಡರು ಮೌನವಾಗಿಯೇ ಉಳಿದಿದ್ದಾರೆ. ಅಧಿಕಾರದಲ್ಲಿರುವವರ ಮಾತುಗಳು ಮಾತ್ರವಲ್ಲ ಕ್ರಿಯೆಗಳೂ ಸಮುದಾಯಗಳ ನಡುವೆ ದ್ವೇಷ ಮತ್ತು ಸಂದೇಹದ ವಾತಾವರಣವನ್ನು ಸೃಷ್ಟಿಸಿವೆ, ಇವು ಮನಸ್ಸುಗಳು ಮತ್ತು ಹೃದಯಗಳನ್ನು ಧ್ರುವೀಕರಿಸುವ ಒಂದು ದುಷ್ಟ ಪ್ರಯತ್ನ. ಶರ್ಮ, ಸಂಬಂಧಪಟ್ಟ ಸುದ್ದಿ ವಾಹಿನಿ ಹಾಗೂ ದಿಲ್ಲಿ ಪೋಲೀಸ್ ಬಗ್ಗೆ ಸುಪ್ರಿಂ ಕೋರ್ಟ್ ಸರಿಯಾಗಿಯೇ ಬಲವಾದ ಟೀಕೆ ಮಾಡಿದ್ದರೂ, ಇಂತಹ ಟಿಪ್ಪಣಿಗಳನ್ನು ಮಾಡಬೇಕಾಗಿ ಬಂದಿರುವ ಒಂದು ವಾತಾವರಣವನ್ನು ಸೃಷ್ಟಿಸುವಲ್ಲಿ ಅಧಿಕಾರದಲ್ಲಿರುವವರನ್ನು ಹೊಣೆಗಾರರಾಗಿಸಬೇಕಾಗುತ್ತದೆ.

ಒಂದು ಮೂಲಭೂತವಾದ ಇನ್ನೊಂದನ್ನು ಬಲಪಡಿಸುತ್ತದೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ.

ಆದರೆ ಇದರ ಘೋರ ಪರಿಣಾಮಗಳನ್ನು ಭಾರತಾದ್ಯಂತ ನಾವು ನೋಡುತ್ತಿದ್ದೇವೆ. ವಿಷಕಾರೀ ಬಹುಸಂಖ್ಯಾತವಾದೀ ಕೋಮುವಾದದ ಬುಲ್ಡೋಜರ್ ಸಾಂವಿಧಾನಿಕ ಖಾತರಿಗಳ ವಿರುದ್ಧ ರಂಪಾಟ ನಡೆಸಿರುವಾಗ, ಇಸ್ಲಾಮ್‌ವಾದಿಗಳ ವ್ಯಾಪ್ತಿ ಮತ್ತು ಅವರ ಉನ್ಮತ್ತ ಗುಂಪುಗಳು ಒಂದು ಮುತ್ತಿಗೆಗೊಳಗಾಗಿರುವ ಸಮುದಾಯದೊಳಕ್ಕೆ ನುಸುಳುತ್ತಿವೆ. ಇದೀಗ ಭಾರತ ಎದುರಿಸಬೇಕಾಗಿರುವ ದುಃಸ್ವಪ್ನ. ಅದನ್ನು ಸೃಷ್ಟಿಸಲು ಅನುವು ಮಾಡಿಕೊಟ್ಟಿರುವ ಕತ್ತಲೆಯನ್ನು ನಿವಾರಿಸುವ ಮೂಲಕ ಭಾರತವು ಎಚ್ಚೆತ್ತುಕೊಳ್ಳಬೇಕಾಗಿದೆ. ಇದರಲ್ಲಿ ನ್ಯಾಯಾಲಯಗಳಿಗೆ ಒಂದು ಮಹತ್ವದ ಪಾತ್ರವಿದೆ. ಅವು ಅಪರೂಪವಾಗಿಯಾದರೂ ಕೆಲವೊಮ್ಮೆ, ನೂಪುರ್ ಶರ್ಮ ಪ್ರಕರಣದಲ್ಲಿ ಮಾಡಿದಂತಹ ಅದರ ಹರಿತವಾದ ಟಿಪ್ಪಣಿಗಳು ದಾರಿಯನ್ನು ಸ್ಪಷ್ಟಪಡಿಸಲು ನೆರವಾಗುತ್ತವೆ. "ಶರ್ಮ ವಿರುದ್ಧ ಟಿಪ್ಪಣಿಗಳನ್ನು ಹಿಂತೆಗೆದುಕೊಳ್ಳಬೇಕು" ಎಂದು ಅವರ ಬೆಂಬಲಿಗರು ಮುಖ್ಯ ನ್ಯಾಯಾಧೀಶರಿಗೆ ಮನವಿ ಮಾಡಿವೆ. ಹಾಗಾದರೆ ಅದೊಂದು ದುಃಖದ ದಿನವಾಗಿರುತ್ತದೆ. ಸತ್ಯವನ್ನು ಅಳಿಸಿ ಹಾಕಲು ಸಾಧ್ಯವಿಲ್ಲ.

ಸಂಸದರಿಗೆ ನಿರಂಕುಶ ಆದೇಶಗಳು–ಸಂಸತ್ತಿನ ಮೇಲೆ ಲಜ್ಜೆಗೆಟ್ಟ ಪ್ರಹಾರ ಕೇಂದ್ರ ಸರಕಾರ ತಕ್ಷಣವೇ ಇದನ್ನು ಹಿಂಪಡೆಯಬೇಕು

ಸಂಸತ್ ಭವನದ ಆವರಣದಲ್ಲಿ ಸಂಸದರು ಯಾವುದೇ ಪ್ರತಿಭಟನಾ ಕ್ರಿಯೆಗಳನ್ನು ನಡೆಸುವಂತಿಲ್ಲ ಎಂಬುದು ಸರ್ವಾಧಿಕಾರಿ ಆದೇಶ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ.

ದೇಶ ಮತ್ತು ಜನರಿಗೆ ಸಂಬಂಧಿಸಿದ ಎಲ್ಲಾ ಪ್ರಮುಖ ವಿಷಯಗಳ ಬಗ್ಗೆ ತಮ್ಮ ದೃಷ್ಟಿಕೋನವನ್ನು ಮುಂದಿಡಲು ಸಂಸದರು ಪ್ರತಿಭಟನೆಗಳನ್ನು ನಡೆಸುವುದು ವಾಡಿಕೆಯಾಗಿದೆ. ಭಾರತೀಯ ಸಂಸತ್ತು ಕಾರ್ಯನಿರ್ವಹಿಸಲು ಆರಂಭಿಸಿದಾಗಿನಿಂದ ಇದು ಅವರ ಪ್ರಜಾಸತ್ತಾತ್ಮಕ ಹಕ್ಕು.

ಅಸಂಸದೀಯ ಪದಗಳ ಪಟ್ಟಿಯನ್ನು ವಿಸ್ತರಿಸುವ ಹೊಸ ನಿರ್ದೇಶನಗಳನ್ನು ಹೊರಡಿಸಲಾಗಿದೆ, ಇದರಲ್ಲಿ 'ಅಸಮರ್ಥತೆ'ಯಂತಹ ಸರ್ಕಾರದ ವಿರುದ್ಧ ಆಗಾಗ್ಗೆ ಬಳಸುವ ಪದ ಸಹ ಒಳಗೊಂಡಿದೆ. ಅದರೊಂದಿಗೆ ಪ್ರತಿಭಟನೆಗಳನ್ನು ನಿಷೇಧಿಸುವ ಈ ಆದೇಶವು ಸಂಸತ್ತಿನ ಮೇಲೆ, ಅದರ ಸ್ವತಂತ್ರ ಕಾರ್ಯನಿರ್ವಹಣೆ ಮತ್ತು ಸಂಸದರ ಅವಿಭಾಜ್ಯ ಹಕ್ಕುಗಳ ಮೇಲೆ ಅತ್ಯಂತ ಲಜ್ಜೆಗೆಟ್ಟ ನಿರಂಕುಶ ಪ್ರಹಾರವಾಗಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಸಂಸತ್ತಿನಲ್ಲಿ ಪ್ರತಿನಿಧಿಗಳನ್ನು ಹೊಂದಿರುವ ರಾಜಕೀಯ ಪಕ್ಷಗಳೊಡನೆ ಸಮಾಲೋಚಿಸದೆ ಕೈಗೊಂಡಿರುವ ಈ ಏಕಪಕ್ಷೀಯ ನಿರ್ಧಾರವು ನಿರ್ಲಜ್ಜ ಪ್ರಜಾಪ್ರಭುತ್ವ ವಿರೋಧಿ ಕ್ರಮವಾಗಿದೆ. ಇನ್ನೂ ಕೆಟ್ಟ ಸಂಗತಿಯೆಂದರೆ, ಸಂಸತ್ತಿನ ಅಧಿವೇಶನ ಪ್ರಾರಂಭವಾಗುವ ಮುನ್ನಾದಿನದಂದು ಇದನ್ನು ಮಾಡಲಾಗುತ್ತಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಈ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳನ್ನು ತಕ್ಷಣವೇ ಹಿಂಪಡೆಯಬೇಕೆಂದು ಕೇಂದ್ರ ಸರ್ಕಾರಕ್ಕೆ ಕರೆ ನೀಡಿದೆ.

ಕೇರಳದಲ್ಲಿ ಸಾರ್ವಜನಿಕ ಉದ್ದಿಮೆಗಳ ಗಳಿಕೆ ಗಮನಾರ್ಹ ಏರಿಕೆ

– ಪುಟ 2 ರಿಂದ

ಆಶ್ವಾಸನೆಯಾಗಿದೆ. ಈ ನಿಟ್ಟಿನಲ್ಲಿ ಕೈಗಾರಿಕೆ ಇಲಾಖೆ ಹಂತ ಹಂತವಾಗಿ ಮುಂದುವರೆಯುತ್ತಿದೆ ಎಂದ ಅವರು, ಈಗಿರುವ ಪ್ರತಿ ಸಾರ್ವಜನಿಕ ವಲಯದ ಸಂಸ್ಥೆಯು ಲಾಭದಾಯಕವಾಗಲು ಅದರ ಅಭಿವೃದ್ಧಿ ಸಾಮರ್ಥ್ಯ ಮತ್ತು ಅಸ್ತಿತ್ವದಲ್ಲಿರುವ ಸೌಲಭ್ಯಗಳನ್ನು ಪರಿಗಣಿಸಿ ನವೀಕರಣ ಮತ್ತು ವಿಸ್ತರಣೆಗಾಗಿ ವಿವರವಾದ ಮಾಸ್ಟರ್ ಪ್ಲಾನ್‌ಗಳನ್ನು ಸಿದ್ಧಪಡಿಸಲಾಗುತ್ತದೆ ಎಂಬ ಆಶ್ವಾಸನೆಯನ್ನು ಕೈಗಾರಿಕಾ ಇಲಾಖೆ ಈಗಾಗಲೇ ಪೂರೈಸಿದೆ ಎಂದು ಹೇಳಿದರು.

ರಾಜ್ಯ ಸರಕಾರದ ಅಡಿಯಲ್ಲಿರುವ 41 ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಏಳು ವಿಭಾಗಗಳಾಗಿ ವಿಂಗಡಿಸಲಾಗಿದೆ ಮತ್ತು 2030 ರ ವೇಳೆಗೆ ಈ ಎಲ್ಲಾ ಉದ್ದಿಮೆಗಳನ್ನು ಲಾಭದಾಯಕವಾಗಿಸುವ ಮಾಸ್ಟರ್ ಪ್ಲಾನ್ ಅಡಿಯಲ್ಲಿ 175 ಯೋಜನೆಗಳನ್ನು ಕಾರ್ಯಗತಗೊಳಿಸಲು ಯೋಜಿಸಲಾಗಿದವನ್ನು ಮೂರು ಘಟ್ಟಗಳಲ್ಲಿ, ಅಲ್ಪಾವಧಿ, ಮಧ್ಯಾವಧಿ ಮತ್ತು ದೀರ್ಘಾವಧಿಯಲ್ಲಿ ಪೂರ್ಣಗೊಳಿಸುವುದರೊಂದಿಗೆ ಈ 41 ಉದ್ದಿಮೆಗಳಲ್ಲಿ ಒಟ್ಟು 9467 ಕೋಟಿ ರೂಪಾಯಿಗಳ ಹೆಚ್ಚುವರಿ ಹೂಡಿಕೆ ಮಾಡಲಾಗುತ್ತದೆ.

ಹೊಸ ಯೋಜನೆಗಳು ಪೂರ್ಣಗೊಂಡ ನಂತರ ಎಲ್ಲಾ ಘಟಕಗಳ ಒಟ್ಟು ವಾರ್ಷಿಕ ವಹಿವಾಟು ಈಗಿನ 3,300 ಕೋಟಿ ರೂ.ನಿಂದ 17,538 ಕೋಟಿ ರೂ.ಗೆ ಹೆಚ್ಚಲಿದೆ. ಪ್ರಸ್ತುತ ಸಾರ್ವಜನಿಕ ವಲಯದ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ 14,700 ಜನರೊಂದಿಗೆ, ಇನ್ನೂ 5464 ಜನರಿಗೆ ಯೋಜನೆಗಳು ಪೂರ್ಣಗೊಂಡಾಗ ಹೊಸ ಉದ್ಯೋಗ ದೊರೆಯುವ ನಿರೀಕ್ಷೆಯಿದೆ ಎಂದು ಸಚಿವರು ಹೇಳಿದರು.

NEW No. MAG(3)/NPP/205/2021-2022
JANASHAKTHI KANNADA VARA PATRIKE JULY 18-24, 2022 Price: Rs. 10/- Date of Publication: 15 JULY 2022 RNI No. KARKAN /2006/17926 Posted on 18-07-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2



ಸೌಹಾರ್ದ–ಸಮೃದ್ಧ–ಜನತಾ ಕರ್ನಾಟಕ ನಿರ್ಮಾಣಕ್ಕಾಗಿ ರಾಜ್ಯ ಸಮಾವೇಶ

ಪರ್ಯಾಯ ನೀತಿಗಳ ಎಡಪಕ್ಷಗಳ ಸಂಕಲ್ಪ





ಸೌಹಾರ್ದ, ಸಮೃದ್ಧ, ಜನತಾ ಕರ್ನಾಟಕ ನಿರ್ಮಾಣಕ್ಕಾಗಿ ಎಡ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ಪಕ್ಷಗಳ ರಾಜ್ಯ ಮಟ್ಟದ ಸಮಾವೇಶವು ಇಂದು(ಜುಲೈ 16) ನಗರದ ಅಂಬೇಡ್ಕರ್ ಭವನದಲ್ಲಿ ನಗಾರಿ ಬಾರಿಸುವ ಮೂಲಕ ಉದ್ಘಾಟಿಸಲಾಯಿತು.



ಯು. ಬಸವರಾಜ ರವರು

ಸಮಾವೇಶದಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿದ ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)–ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಯು. ಬಸವರಾಜ ಅವರು, ದೇಶದಲ್ಲಿ ರೈತರು, ಕೃಷಿಕಾರರು ಹಲವು ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಅಸಮಾನತೆಯನ್ನು ನಿವಾರಿಸಲು ಆಳುವ ಸರಕಾರಗಳು ವಿಫಲವಾಗಿವೆ. ಅಲ್ಪಸಂಖ್ಯಾತರ ಮೇಲೆ, ದಲಿತರ ಮೇಲೆ ದಾಳಿ ಹೆಚ್ಚಾಗಲು ಆರ್ಥಿಕ ಅಸಮಾನತೆಯೇ ಕಾರಣ ಎಂದು ಹೇಳಿದರು.

ಮುಂದುವರೆದು ಮಾತನಾಡಿದ ಅವರು, ಸ್ವಾತಂತ್ರ್ಯದ ನಂತರವೂ ಭಾರತ ನರಳುವ ಪರಿಸ್ಥಿತಿ ಎದುರಾಗಿದೆ. ನಿರುದ್ಯೋಗ ಸಮಸ್ಯೆ ಹೆಚ್ಚಾಗಿದ್ದು, ಸಾಮಾಜಿಕ ಸಂಕಷ್ಟಗಳು ಹೆಚ್ಚಾಗುತ್ತಿವೆ. ಜಾತಿ ಅಸ್ಪೃಶ್ಯತೆ, ದೌರ್ಜನ್ಯ, ಧಾರ್ಮಿಕ ಕಲಹದಿಂದಾಗಿ ಜನರಲ್ಲಿ ಆತಂಕ ಮನೆ ಮಾಡಿದೆ.

75 ವರ್ಷಗಳ ನಂತರವೂ ದುಡಿಯುವ ಜನ ಬಡತನಕ್ಕೆ ತಳ್ಳಲ್ಪಟ್ಟರೆ ಕೆಲವೇ ಕೆಲವು ಮಂದಿ ಮಾತ್ರ ಶ್ರೀಮಂತರಾಗುತ್ತಿದ್ದಾರೆ. ಸರಕಾರವೇ ಬಿಡುಗಡೆ ಮಾಡುವ ಹಲವು ಅಂಕಿ–ಅಂಶಗಳೇ ನಿಜಾಂಶವನ್ನು ತೋರ್ಪಡಿಸುತ್ತಿವೆ. ಇದರಿಂದ ಆತಂಕ ಸೃಷ್ಟಿಸಿವೆ. ತಲಾ ಆದಾಯ 50 ರೂಪಾಯಿಗಿಂತ ಕಡಿಮೆ ಇದೆ. ಲಕ್ಷಾಂತರ ಕುಟುಂಬಗಳು ಇಂತಹ ಸಂಕಷ್ಟ ಎದುರಿಸುತ್ತಿದ್ದಾರೆ. ಋಣಮುಕ್ತ ಕಾಯ್ದೆ ಬರಬೇಕು ಎಂದು ಕರೆ ನೀಡಿದರು.

ಭೂ ಹೀನರಿಗೆ ಭೂಮಿ ಅಂಚಿ: ಜಿ.ಸಿ. ಬಯ್ಯಾರೆಡ್ಡಿ

ಪರ್ಯಾಯ ಕೃಷಿ ನೀತಿಗಳು, ಮೂಲಾಂಶಗಳು ವಿಷಯದ ಕುರಿತು 'ಪರ್ಯಾಯ ನಿರ್ಣಯ ಮಂಡನೆ' ಮಾಡಿದ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಸಿ. ಬಯ್ಯಾರೆಡ್ಡಿ ಅವರು, ಭೂಸ್ವಾದೀನ ಕಾಯ್ದೆಗೆ ಗ್ರಹಣ ಬಡಿದಿದೆ. ತಿದ್ದುಪಡಿ ಮೂಲಕ ಆ ಕಾಯ್ದೆಯನ್ನು ಅನುಪಯುಕ್ತ ಮಾಡುವ ಕೆಲಸ ನಡೆಯುತ್ತಿದೆ. ಭೂ–ಸ್ವಾಧೀನ ಕಾಯ್ದೆಗೆ ತಂದಿರುವ ತಿದ್ದುಪಡಿ ವಾಪಸ್ಸು ಪಡೆಯಬೇಕು. ಭೂಹೀನರಿಗೆ ಭೂಮಿಯನ್ನು ಹಂಚುವ ಕೆಲಸ ಮಾಡಬೇಕಿದೆ ಎಂದು ಹೇಳಿದರು.



ಜಿ.ಸಿ. ಬಯ್ಯಾರೆಡ್ಡಿ ರವರು

ಕಳೆದ 75 ವರ್ಷಗಳಲ್ಲಿ ಸರಕಾರದ ನೀತಿಗಳು ರೈತ ಸಂಕಷ್ಟಕ್ಕೀಡು ಮಾಡುತ್ತಿದೆ. ದಿನನಿತ್ಯ ಕಣ್ಣೀರಲ್ಲಿ ಕೈತೊಳೆಯುವ ಸ್ಥಿತಿ ನಿರ್ಮಾಣವಾಗಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ದುಡಿಮೆ ಮಾಡುತ್ತಿರುವ ಕೂಲಿಕಾರರಿಗೆ ಕನಿಷ್ಠ ರೂ.600 ಕೂಲಿಯನ್ನು ನೀಡುತ್ತಿಲ್ಲ. ಯೋಜನೆಯನ್ನು ನಗರ ಪ್ರದೇಶಕ್ಕೆ ವಿಸ್ತರಿಸುವ ಪ್ರಶ್ನೆಯೂ ಹಾಗೆ ಉಳಿದಿದೆ. ನಮ್ಮ ಪಾಲಿಗೆ ಸಿಗಬೇಕಾದ ನೀರಾವರಿ ಯೋಜನೆಗಳು ಕೂಡಾ ನೆನಗುದಿಗೆ ಬಿದ್ದಿವೆ. ಎತ್ತಿನಹೊಳೆ, ಮೇಕೆದಾಟು, ಮಹದಾಯಿ ನೀರಾವರಿ ಯೋಜನೆಗಳು ಇನ್ನೂ ಜಾರಿಯಾಗಲಿಲ್ಲ.

ಎಸ್ಇಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಹಣವನ್ನು ಮೀಸಲಿಟ್ಟಿದ್ದಾರೆ. ಆ ಹಣ ಎಲ್ಲಿ ಹೋಗುತ್ತಿದೆ? ಯಾವುದಕ್ಕೆ ಬಳಕೆ ಆಗುತ್ತದೆ ಎಂಬುದೇ ಗೊತ್ತಾಗುತ್ತಿಲ್ಲ. ದಲಿತರಿಗೆ ಭೂಮಿಯನ್ನು ನೀಡುವುದಕ್ಕಾಗಿ ಹಣವನ್ನು ತೆಗೆದಿಡುವ ಯೋಜನೆಯೂ ನೆನೆಗುದಿಗೆ ಬಿದ್ದಿದೆ. ರಸಗೊಬ್ಬರ ದುಬಾರಿಯಾಗಿದೆ. ಇನ್ನೊಂದೆಡೆ ರಸಗೊಬ್ಬರ ಕೊರತೆಯಾಗಿದೆ. ಬೀಜ ಗೊಬ್ಬರ ವಿತರಣೆ ಸಮರ್ಪಕವಾಗಿ ನಡೆಯುತ್ತಿಲ್ಲ. ರೈತರಿಗೆ ಬ್ಯಾಂಕ್ ಸಾಲ ಸರಿಯಾಗಿ ದೊರೆಯುತ್ತಿಲ್ಲ. ಶೇ. 35 ರಷ್ಟು ಮಾತ್ರ ಗ್ರಾಮೀಣ ರೈತರಿಗರ ಬ್ಯಾಂಕ್ ಸಾಲ ದೊರಕಿದೆ ಎಂದರು.

ರೈತ ವಿರೋಧಿ ಕೃಷಿ ಕಾಯ್ದೆಗಳು: ವೀರಸಂಗಯ್ಯ

ಸ್ವರಾಜ್ ಇಂಡಿಯಾ ಪಕ್ಷದಿಂದ ಮಾತನಾಡಿದ ವೀರಸಂಗಯ್ಯ ಅವರು, ರಾಜ್ಯ ಸರ್ಕಾರ ಜಾರಿಗೆ ತಂದಿರುವ ಎಪಿಎಂಸಿ ಕಾಯ್ದೆಯಲ್ಲಿ ಹೊರಗಡೆ ವ್ಯಾಪಾರ ಮಾಡಿದರೆ ತೆರಿಗೆ ಕಟ್ಟುವ ಹಾಗೇ ಇಲ್ಲ ಎಂದು ಹೇಳಿ ದಿಕ್ಕು ತಪ್ಪಿಸುತ್ತಿದ್ದಾರೆ. ಎಲ್ಲಾದರೂ ಮಾರಾಟ ಮಾಡಿ ಎಂದು ಹೇಳುತ್ತಾರೆ, ಹಾಗೆಂದು ಬೀದಿಯಲ್ಲಿ ಮಾರಾಟ ಮಾಡಿದರೆ, ಪೊಲೀಸರನ್ನು ಬಿಟ್ಟು ದೌರ್ಜನ್ಯ ನಡೆಸುತ್ತಾರೆ. ಕೇಂದ್ರದಿಂದ ಜಾರಿತೆ ತರಲು ಹೊರಟ್ಟಿದ್ದ ಮೂರು ಕಾಯ್ದೆಗಳನ್ನು ತಡೆಹಿಡಿದಿದ್ದಿದ್ದರೂ ಅದನ್ನು ಮತ್ಯಾಗ ಜಾರಿ ಮಾಡುತ್ತಾರೋ ಗೊತ್ತಿಲ್ಲ, ಹಾಗಾಗಿ ನಮ್ಮ ಚಳುವಳಿ ಬಲಗೊಳ್ಳಬೇಕು ಎಂದು ಕರೆ ನೀಡಿದರು.

ಶಿಕ್ಷಣದ ವ್ಯಾಪಾರೀಕರಣ: ಕೆ. ಉಮಾ

ಸೋಷಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ(ಕಮ್ಯೂನಿಸ್ಟ್)–ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿ ಕೆ. ಉಮಾ ಅವರು ಮಾತನಾಡಿ, ಶಿಕ್ಷಣ ವ್ಯಾಪಾರೀಕರಣ ಆಗಿದೆ, ಮಾಲೀಕರು ಬೆಳೆಯುತ್ತಿದ್ದಾರೆ, ರೀಯಲ್ ಎಸ್ಟೇಟ್ ಮಾಫಿಯಾ ಬೆಳೆಯುತ್ತಿದೆ. ಶಿಕ್ಷಣ ಮಾರಾಟ ಆಗುತ್ತಿದೆ. ಮುಸ್ಲಿಂ ಚರಿತ್ರೆಯನ್ನು ಇತಿಹಾಸದಿಂದ ತೆಗೆಯುತ್ತಿದ್ದಾರೆ. ರೋಹಿತ್ ಚಕ್ರತೀರ್ಥ ಅವರಂತಹ ಮತಾಂಧನನ್ನು ಪಠ್ಯಕ್ರಮ ರಚನಾ ಸಮಿತಿ ಅಧ್ಯಕ್ಷನನ್ನಾಗಿಸಿ ಅಂಬೇಡ್ಕರ್, ಭಗತ್ ಸಿಂಗ್, ನಾರಾಯಣಗುರು, ಕುವೆಂಪುರವರ ವಿಚಾರಗಳನ್ನು ತೆಗೆದು ಕೇವಲ ಹಿಂದೂ ಧರ್ಮದ ವಿಚಾರಗಳನ್ನು ತುರುಕಿದ್ದಾರೆ. ವಿಜ್ಞಾನ, ಸಂವಿಧಾನ, ಪ್ರಜಾಸತ್ತಾತ್ಮಕ ವಿಚಾರಗಳನ್ನು ಪಠ್ಯದಿಂದ ತೆಗೆಯುವ ಹುನ್ನಾರ ನಡೆದಿತ್ತು. ವ್ಯಾಪಕ ಪ್ರತಿಭಟನೆಗಳ ಮೂಲಕ ರೋಹಿತ್ ಚಕ್ರತೀರ್ಥ ಸಮಿತಿಯನ್ನು ರದ್ದು ಮಾಡಿದರು? ಸರಕಾರ ಸೃಷ್ಟಿ ಮಾಡಿದ ಗೊಂದಲಗಳಿಗೆ ತಕ್ಕ ಪಾಠ ಕಲಿಸಬೇಕಿದೆ. ಶಿಕ್ಷಣ ತಜ್ಞರನ್ನು ಒಳಗೊಳಿಸಿ ಪಠ್ಯಕ್ರಮ ರಚಿಸಬೇಕಿದೆ ಎಂದು ಕರೆ ನೀಡಿದರು.



ಕೆ. ಉಮಾ ರವರು

ಕೋವಿಡ್ ಸಾಂಕ್ರಮಿಕತೆ ಮುಂಚೆ ಇದ್ದ ನಿರುದ್ಯೋಗ ಸಮಸ್ಯೆ ಈಗ ಇನ್ನಷ್ಟು ಹೆಚ್ಚಾಗಿದೆ. ಉದ್ಯೋಗ ಸಿಗದೆ ಜನರು ಪರದಾಡುತ್ತಿದ್ದಾರೆ. ಉದ್ಯೋಗದ ಜಾಗಗಳಲ್ಲಿ ಮಹಿಳೆಯರು ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ನರೇಗಾವನ್ನು ಬಲಪಡಿಸಿ ಗ್ರಾಮೀಣ ಜನರಿಗೆ ಉದ್ಯೋಗ ನೀಡಬೇಕು. ವರ್ಷಕ್ಕೆರಡು ಕೋಟಿ ಉದ್ಯೋಗ ಸೃಷ್ಟಿ ಎಲ್ಲಿ ಹೋಯಿತು? ಇದಕ್ಕೆ ಯಾವ ಪದ ಬಳಸಬೇಕು ಎಂದು ಕುಟುಕಿದರು.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ, ಲೆನಿನ್ ವಾದಿ–ಲಿಬರೇಷನ್)–ಸಿಪಿಐ(ಎಂಎಲ್) ರಾಜ್ಯ ಕಾರ್ಯದರ್ಶಿ ಕ್ಲಿಫ್ಟನ್ ಡಿ ರೊಸಾರಿಯೋ ಅವರು ಮಾತನಾಡಿ, ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಸುಳ್ಳು ಸುದ್ದಿಗಳನ್ನು ಹರಡಿಸುತ್ತಿದೆ. ಸತ್ಯದ ಪರಿವಾಗಿ ಮಾತನಾಡಿದವರನ್ನು ಜೈಲಿಗೆ ಹಾಕಲಾಗುತ್ತಿದೆ. ಸ್ಟ್ಯಾನ್ ಸ್ವಾಮಿ, ಆನಂದ್ ತೇಲ್ತುಂಬ್ಡೆ, ತೀಸ್ತಾ ಸೆಟಲ್ವಾಡ್ ಹೀಗೆ ಹಲವರನ್ನು ಜೈಲಿಗೆ ಹಾಕಿದ್ದಾರೆ. ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರಕಾರ ಹೇಗೆಂದರೆ ಹಾಗೆ ಕಾಯ್ದೆಗಳನ್ನು ಜಾರಿ ಮಾಡುತ್ತಿದೆ. ಅದನ್ನು ಪ್ರಶ್ನಿಸುವ ಹಾಗಿಲ್ಲ. ಕರ್ನಾಟಕದ ಸ್ಥಿತಿಯೂ ಸಂಕಷ್ಟದಲ್ಲಿದೆ. ಇದರ ವಿರುದ್ಧ ವ್ಯಾಪಕ ಹೋರಾಟವನ್ನು ಬಲಗೊಳಿಸಲು ಮುಂದಾಗಬೇಕಿದೆ ಎಂದು ಕರೆ ನೀಡಿದರು.

ಕೋಮುವಾದದ ವಿರುದ್ಧ ಹೋರಾಟ ಬಲಗೊಳ್ಳಲಿ: ಮೋಹನ್ ರಾಜ್

ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ–ಆರ್‌ಪಿಐದ ಮೋಹನ್ ರಾಜ್ ಅವರು ಮಾತನಾಡಿ, ದೇಶದಲ್ಲಿ ಆಳ್ವಿಕೆ ನಡೆಸುತ್ತಿರುವ ಪಕ್ಷವು ಭಾರತದ ಸಂವಿಧಾನವನ್ನು ನಾಶ ಮಾಡುವ ಪ್ರಯತ್ನ ನಡೆಸುತ್ತಿದ್ದಾರೆ. ಅದರ ವಿರುದ್ಧ ಹೋರಾಟ ಬಲಗೊಳ್ಳಬೇಕಿದೆ. ಮೀಸಲಾತಿಯನ್ನು ನಾಶ ಮಾಡುವುದಕ್ಕಾಗಿ ಖಾಸಗೀಕರಣ ಜಾರಿಗೊಂಡಿವೆ. ಶೋಷಿತ ಸಮುದಾಯನ್ನು ಜೀತದಾಳುಗಳನ್ನಾಗಿಸುವ ಕೆಲಸವನ್ನು ಆಳುವ ಸರಕಾರಗಳು ಮಾಡುತ್ತಿವೆ. ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡಲಾಗುತ್ತಿದೆ. ಹಿಜಾಬ್ ಹಾಕಬಾರದು, ದನ ತಿನ್ನಬಾರದು ಎಂದು ಹೇಳಲಾಗುತ್ತಿದೆ. ಕೋಮುವಾದಿ ಶಕ್ತಿಗಳ ವಿರುದ್ಧ ನಮ್ಮ ಹೋರಾಟ ಇನ್ನಷ್ಟು ಬಲಗೊಳ್ಳಬೇಕಿದೆ ಎಂದು ಕರೆ ನೀಡಿದರು.

ಕಾರ್ಮಿಕರನ್ನು ರಾಜಕೀಯವಾಗಿ ಬಲಗೊಳಿಸಬೇಕು. ಆಗ ಮಾತ್ರ ಬೂರ್ಜ್ವಾ ಪಕ್ಷಗಳಿಗೆ ತಕ್ಕ ಪಾಠ ಕಲಿಸಲು ಸಾಧ್ಯವಾಗುತ್ತದೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ–ಸಿಪಿಐ ಪಕ್ಷದ ರಾಜ್ಯ ಮುಖಂಡ ರಾಮಕೃಷ್ಣ ಹೇಳಿದರು.

ಸಾರ್ವಜನಿಕ ಆರೋಗ್ಯ, ಭ್ರಷ್ಟಾಚಾರದ ನಿಗ್ರಹ, ಆಡಳಿತ ಭಾಷೆ ಕುರಿತು ಅಖಿಲ ಭಾರತ ಫಾರ್ವರ್ಡ್ ಬ್ಲಾಕ್–ಎಐಎಫ್‌ಬಿ ರಾಜ್ಯ ಅಧ್ಯಕ್ಷ ಜಿ.ಆರ್. ಶಿವಶಂಕರ್ ಮಾತನಾಡಿದರು.

ವೇದಿಕೆಯಲ್ಲಿ ಸಿಪಿಐ ಪಕ್ಷದ ರಾಜ್ಯ ಕಾರ್ಯದರ್ಶಿ ಸಾತಿ ಸುಂದರೇಶ್, ಎಸ್.ಯು.ಸಿ.ಐ.(ಸಿ) ಪಕ್ಷದ ರಾಜ್ಯ ಮುಖಂಡ ಎಂ.ಎನ್.ಶ್ರೀರಾಮ್, ಸಿಪಿಐ(ಎಂಎಲ್) ಪಕ್ಷದ ಮೈತ್ರಿ ಕೃಷ್ಣನ್, ಎಐಎಫ್‌ಬಿ ಪಕ್ಷದ ಎಂ ಝುಡ್ ಅಲಿ, ಆರ್‌ಪಿಐ ಪಕ್ಷದ ಶೇಕರ್ ಅವಾಂಜಿ ಸೇರಿದಂತೆ ಅನೇಕರಿದ್ದರು.

ಸಮಾವೇಶದಲ್ಲಿ ಪರ್ಯಾಯ ನೀತಿಗಳ ಕಿರುಪುಸ್ತಕ ಬಿಡುಗಡೆ ಮಾಡಲಾಯಿತು. ಸಮಾವೇಶದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ), ಭಾರತ ಕಮ್ಯೂನಿಸ್ಟ್ ಪಕ್ಷ–ಸಿಪಿಐ, ಸೋಷಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ(ಕಮ್ಯೂನಿಸ್ಟ್)–ಎಸ್‌ಯುಸಿಐ(ಸಿ), ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ, ಲೆನಿನ್ ವಾದಿ–ಲಿಬರೇಷನ್)–ಸಿಪಿಐ(ಎಂಎಲ್), ಅಖಿಲ ಭಾರತ ಫಾರ್ವರ್ಡ್ ಬ್ಲಾಕ್–ಎಐಎಫ್‌ಬಿ, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ–ಆರ್‌ಪಿಐ, ಸ್ವರಾಜ್ ಇಂಡಿಯಾ ರಾಜ್ಯ ಘಟಕದ ಪ್ರತಿನಿಧಿಗಳು ಭಾಗವಹಿಸಿದ್ದರು.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**